ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 17 ಶುಕ್ರವಾರ 2025

₹4

ಸಂಪುಟ: 45 | ಸಂಚಿಕೆ: 270 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಬಿಟಿಎಲ್ ವಿದ್ಯಾವಾಹಿನಿ ಶಾಲೆ, ಪಿಯು ಕಾಲೇಜು ಬೆಳ್ಳಿಹಬ್ಬ ಆಚರಣೆ

ಮೈಸೂರು, ಜ.16(ಪಿಎಂ)– ಮೈಸೂರಿನ ಕೆಸರೆಯಲ್ಲಿರುವ ಬಿಟಿಎಲ್ ವಿದ್ಯಾವಾಹಿನಿ ಶಾಲೆ ಮತ್ತು ಬಿಟಿಎಲ್ ಸಂಯೋಜಿತ ಪದವಿಪೂರ್ವ ಕಾಲೇಜಿನ ಬೆಳ್ಳಿಹಬ್ಬವನ್ನು ಇತ್ತೀಚೆಗೆ ಅದ್ಧೂರಿಯಾಗಿ ಆಚರಿಸಲಾಯಿತು.

ಸಮಾರಂಭದಲ್ಲಿ ಎಸ್‌ಪಿಆರ್ ವೆಜ್ ರೆಸ್ಟೋರೆಂಟ್‌ನ ಮಾಲೀಕರೂ ಆದ ಮಹಾಜನ ಎಜುಕೇಷನ್ ಸೊಸೈಟಿಯ ಆಡಳಿತ ಮಂಡಳಿ ಸದಸ್ಯೆ ಸ್ವಾತಿ ಭಾಗವತ್ ಮತ್ತು ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಸಮಿವುಲ್ಲಾ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.


ಇತ್ತೀಚೆಗೆ ಬಿಟಿಎಲ್ ವಿದ್ಯಾವಾಹಿನಿ ಶಾಲೆ ಮತ್ತು ಬಿಟಿಎಲ್ ಸಂಯೋಜಿತ ಪದವಿಪೂರ್ವ ಕಾಲೇಜಿನ ಬೆಳ್ಳಿಹಬ್ಬ ನಡೆಯಿತು.

ಇದೇ ವೇಳೆ 'ಬಿಟಿಎಲ್ ರಿಫ್ಲೆಕ್ಷನ್ಸ್' ಶೀರ್ಷಿಕೆಯಡಿ ಹೊರತಂದಿರುವ ಬೆಳ್ಳಿಹಬ್ಬದ ಸ್ಮರಣಿಕೆಯನ್ನು ಸ್ವಾತಿ ಭಾಗವತ್ ಬಿಡುಗಡೆ ಮಾಡಿದರು. ಅಲ್ಲದೆ, ಶೈಕ್ಷಣಿಕ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಬಳಿಕ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಬಿಟಿಎಲ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ಅಪೂರ್ವ ಲಕ್ಷ್ಮಣ್, ಕಾರ್ಯದರ್ಶಿ ಪ್ರೊ.ಬಿ.ಶಿವರಾಜ್, ಖಜಾಂಚಿ ಪ್ರೊ ಸಿ.ಬಿ.ರಾಜೇಶ್ವರಿ, ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿ ಸಬಾಹತ್ ಸುಲ್ತಾನ, ಪ್ರೌಢ ಶಾಲೆಯ ಮುಖ್ಯಶಿಕ್ಷಕ ಚೇತನ್‌ಕುಮಾರ್, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಗುರುಪ್ರಸಾದ್ ಮತ್ತಿತರರು ಹಾಜರಿದ್ದರು.


ಲಾಭದ ಆಸೆಗೆ ಬಿದ್ದು ಲಕ್ಷ ಲಕ್ಷ ಕಳೆದುಕೊಂಡ ಯುವಕ

ಮೈಸೂರು, ಜ.16(ಎಸ್‌ಬಿಡಿ)– ಅಧಿಕ ಲಾಭದ ಆಸೆಗೆ ಆನ್‌ಲೈನ್ ಮೂಲಕ ನಕಲಿ ಕಂಪನಿಯಲ್ಲಿ ಹೂಡಿಕೆ ಮಾಡಿ ಲಕ್ಷಾಂತರ ರೂ. ಕಳೆದುಕೊಂಡಿರುವ ಸಂಬಂಧ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಲ್ಲಿನ ಅರವಿಂದನಗರದ ಯುವಕ, ನಕಲಿ ಕಂಪನಿಗೆ ಹಂತ ಹಂತವಾಗಿ 606211 ರೂ. ಹೂಡಿಕೆ ಮಾಡಿ ಮೋಸ ಹೋಗಿದ್ದಾನೆ. ಕಾಷಿಷ್ ಹೆಸರಿನಲ್ಲಿ ಯುವಕನಿಗೆ ಸಂದೇಶ ಬಂದಿದ್ದು ನಂತರ ಆತನ ವಾಟ್ಸಾಪ್ ಸಂಖ್ಯೆಯನ್ನು India ಗ್ರೂಪ್‌ಗೆ ಸೇರಿಸಲಾಗಿದೆ. ಆ ಗ್ರೂಪ್‌ನಲ್ಲಿ ಸ್ಟಾಕ್ ಮಾರ್ಕೆಟ್ ಇನ್ವೆಸ್ಟ್‌ಮೆಂಟ್ ಹಾಗೂ ಸ್ಟಾಕ್ ಮಾರ್ಕೆಟ್ ಅನಾಲಿಸಿಸ್ ಮಾಹಿತಿ ಹಂಚಿಕೊಂಡು, 2ನೇ ಹಂತದ ಇನ್ವೆಸ್ಟ್‌ಮೆಂಟ್ ಪ್ಲಾನ್ ಬಗ್ಗೆ ತಿಳಿಸಲಾಗಿದೆ. ಈ ಪ್ಲಾನ್‌ನಲಿ ಹೂಡಿಕೆ ಮಾಡಿದರೆ 10 ಪಟ್ಟು ರಿಟರ್ನ್ಸ್ ನೀಡಲಾಗುವುದು ಎಂದು ನಂಬಿಸಲಾಗಿದೆ.

ಅದನ್ನು ನಂಬಿದ ಯುವಕ ಮೊದಲಿಗೆ 50 ಸಾವಿರ ರೂ. ಹೂಡಿಕೆ ಮಾಡಿದಾಗ ಶೇ.5ರಷ್ಟು ರಿಟರ್ನ್ಸ್ ನೀಡಿದ್ದಾರೆ. ನಂತರ ಮತ್ತೊಂದು ಲಿಂಕ್ ಮೂಲಕ ಹಂತ ಹಂತವಾಗಿ 3 ಲಕ್ಷ ರೂ ಹೂಡಿಕೆ ಮಾಡಿಸಲಾಗಿದೆ. ಅದಕ್ಕೆ ಶೇ.112ರಷ್ಟು ಲಾಭಾಂಶ ತೋರಿಸಿದರಾದರೂ ಆ ಹಣವನ್ನು ವಿತ್‌ಡ್ರಾ ಮಾಡಲು ಹೋದಾಗ ಶೇ.15 ತೆರಿಗೆ ಹಾಗೂ ಶೇ.10 ಕಮಿಷನ್ ಹಣ ಪಾವತಿಸಲು ಸೂಚಿಸಲಾಗಿದೆ. ಹಾಗೆಯೇ ತೆರಿಗೆ ಹಾಗೂ ಕಮಿಷನ್ ಹಣ ಪಾವತಿಸಿದರೂ ಮತ್ತೆ ಶೇ.30ರಷ್ಟು ಹಣ ಪಾವತಿಗೆ ಬೇಡಿಕೆ ಇಡಲಾಗಿದೆ. ಒಟ್ಟಾರೆ 6 ಲಕ್ಷಕ್ಕೂ ಹೆಚ್ಚು ಹಣ ಪಾವತಿಸಿದ ಬಳಿಕ ನಿಮ್ಮ ಖಾತೆಯಲ್ಲಿ ಮನಿ ಲಾಂಡ್ರಿಂಗ್ ನಡೆದಿರುವುದರಿಂದ ಖಾತೆಯನ್ನು ಆರ್‌ಬಿಐ ಬ್ಲಾಕ್ ಮಾಡಿದೆ ಎಂಬ ಸಂದೇಶ ಬಂದಿದೆ. ಆಗ ಆ ಯುವಕನಿಗೆ ವಂಚನೆಗೊಳಗಾಗಿರುವುದು ಅರಿವಿಗೆ ಬಂದಿದೆ.

ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ


ಮೈಸೂರು ತಾಲೂಕು ಜಯಪುರ ಹೋಬಳಿಯ ಅರಸನಕೆರೆ ಗ್ರಾಮದಿಂದ ಹಾರೋಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡರು ಗುರುವಾರ ಭೂಮಿಪೂಜೆ ನೆರವೇರಿಸಿದರು. ಈ ವೇಳೆ ಮಾರ್ಬಳ್ಳಿ ಗ್ರಾಪಂ ಸದಸ್ಯ ನವೀನ್ ಪಟೇಲ್, ಮುಖಂಡರಾದ ಸೋಮಣ್ಣ, ಶಿವಣ್ಣ, ಕೆಂಪರಾಜು, ಮಹದೇವಸ್ವಾಮಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಜ.21ರಿಂದ ಸುದರ್ಶನ ಕ್ರಿಯೆ ಶಿಬಿರ

ಮೈಸೂರು,ಜ.16–ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಜ.21ರಿಂದ 25ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಮಾನಸಿನಗರ, ಹೋಟೆಲ್ ಹರಿಗೋವಿಂದ ಸಮೀಪ ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 8.30, ಸಂಜೆ 6ರಿಂದ 8.30ರವರೆಗೆ ನಡೆಯಲಿದೆ. ಮಾಹಿತಿಗೆ 9480476825, 9483589825.

ಮತಯಾಚನೆ



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ನ್ಯಾಯಾಲಯದ ಆವರಣದಲ್ಲಿ ಮತಯಾಚನೆ ಮಾಡಲಾಯಿತು. ಈ ವೇಳೆ ವಕೀಲರ ಸಂಘದ ಮಾಜಿ ಅಧ್ಯಕ್ಷ ರಾಮಮೂರ್ತಿ, ಲಾಗೈಡ್ ಪತ್ರಿಕೆ ಸಂಪಾದಕ, ವಕೀಲರಾದ ಹೆಚ್.ಎನ್.ವೆಂಕಟೇಶ್, ಹಿಂದುಳಿದ ವರ್ಗದ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸಿರುವ ಸಿ.ಚಂದ್ರಶೇಖರ್, ಯೋಗಾನಂದ, ಕೆಆರ್ ಬ್ಯಾಂಕಿನ ನಿರ್ದೇಶಕ ಪ್ರತಿಧ್ವನಿ ಪ್ರಸಾದ್, ಪಾಲಿಕೆ ಮಾಜಿ ಸದಸ್ಯ ಸುನಿಲ್ ಉಪಸ್ಥಿತರಿದ್ದರು.

ಜ.22ರಿಂದ ಮೈಸೂರಲ್ಲಿ ಸ್ವದೇಶಿ ಮೇಳ

ಮೈಸೂರು,ಜ.16(ಜಿಎ)–ಸ್ವದೇಶೀ ಜಾಗರಣ ಮಂಚ್ ಕರ್ನಾಟಕ ವತಿಯಿಂದ ಜ.22ರಿಂದ 26ರವರೆಗೆ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸ್ವದೇಶಿ ಮೇಳ ಆಯೋಜಿಸಲಾಗಿದೆ ಎಂದು ಕ್ಷೇತ್ರೀಯ ಸಮನ್ವಯ ಪ್ರಮುಖ ಎನ್.ಆರ್.ಮಂಜುನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇಳದಲ್ಲಿ ಗೋ ಆಧಾರಿತ ಉತ್ಪನ್ನ, ನೈಸರ್ಗಿಕ ಸೌಂದರ್ಯವರ್ಧಕ, ಆಯುರ್ವೇದ ಔಷಧಿ, ಸಾವಯವ ವಸ್ತುಗಳು, ಸಿರಿಧಾನ್ಯಗಳು, ಖಾದಿ ಉತ್ಪನ್ನ, ದೇಶೀ ಆಹಾರಗಳು, ಸ್ವದೇಶಿ ನಿರ್ಮಿತ ಕಾರು ಹಾಗೂ ಸ್ಕೂಟರ್ ಪ್ರದರ್ಶನ ಮತ್ತು ಮಾರಾಟ ಇರಲಿವೆ. ಸುಮಾರು 300 ಮಳಿಗೆಗಳು ಇರಲಿದ್ದು, ಉತ್ಪಾದಕರಿಗೆ ಹೆಚ್ಚು ಒತ್ತು ನೀಡಲಾಗಿದೆ ಎಂದರು. ಮೈಸೂರು ಜಿಲ್ಲೆಯಲ್ಲಿ ತಯಾರಾದ ವಸ್ತು ಗಳಿಗೆ ಪ್ರಾಧಾನ್ಯ ಇರಲಿವೆ. ಉದ್ಘಾಟನೆ ಜ.22ರ ಸಂಜೆ 5ಕ್ಕೆ ನಡೆಯಲಿದೆ. ಒಟ್ಟಾರೆ 300 ಮಳಿಗೆಗಳು ಇರಲಿದ್ದು, ರಾಜ್ಯದ ವಿವಿಧೆಡೆಯಿಂದ ಆಗಮಿಸುವ ಕಲಾವಿದರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ


ನಿಧನ



ಜನಾಬಾ ಮುಮ್ತಾಜ್ ಬೇಗಂ

ಮೈಸೂರು, ಜ. 16–ಮೈಸೂರಿನ ಬನ್ನಿಮಂಟಪ ಬಡಾವಣೆಯ ಹಲೀಂನಗರ ನಿವಾಸಿ ದಿವಂಗತ ಸೈಯದ್ ಮೊಹಮದ್ ಪತ್ನಿ ಜನಾಬಾ ಮುಮ್ತಾಜ್ ಬೇಗಂ (80) ವಯೋಸಹಜ ಕಾಯಿಲೆಯಿಂದ ನಿನ್ನೆ (ಜ.15) ನಿಧನರಾದರು. ಮೃತರು ಮೂವರು ಪುತ್ರಿಯರು, 7 ಮಂದಿ ಪುತ್ರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಟಿಪ್ಪು ಸರ್ಕಲ್ ಹಿಂಭಾಗ ಇರುವ ಮುಸ್ಲಿಮರ ಸ್ಮಶಾನದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೇವಿರಮ್ಮ



ನಂಜನಗೂಡು ಪಟ್ಟಣದ ಚಾಮಲಾಪುರದ ಬೀದಿಯ ಕರಿಯಪ್ಪನವರ ಪತ್ನಿ ದೇವಿರಮ್ಮ (91) ಗುರುವಾರ ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು, ಅಳಿಯಂದಿರು ಸೇರಿ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಬೈಪಾಸ್ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.




ಸಿ.ದೊಡ್ಡಯ್ಯ

ಮೈಸೂರಿನ ರಾಮಾನುಜ ರಸ್ತೆ 14ನೇ ಕ್ರಾಸ್ ನಿವಾಸಿ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್ (ಐಓಬಿ) ಚಾಮರಾಜ ಜೋಡಿ ರಸ್ತೆ ಶಾಖೆಯ ನಿವೃತ್ತ ವಿಶೇಷ ಸಹಾಯಕರಾದ ಸಿ.ದೊಡ್ಡಯ್ಯ(85) ಅವರು ನಿನ್ನೆ (ಬುಧವಾರ) ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರಿಯರು ಹಾಗೂ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಇಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಬ್ಬರು ಮುಡಾ ಅಧಿಕಾರಿಗಳ ಮುಟ್ಟಲು ಧೈರ್ಯ ಮಾಡದ ಸಿದ್ದರಾಮಯ್ಯ ಡಿಸಿಗೆ ಅವಮಾನಿಸಿದ್ದಾರೆ...

ವಿಧಾನಪರಿಷತ್ ಸದಸ್ಯ ವಿಶ್ವನಾಥ್ ಲೇವಡಿ

- ಹಿಯ್ಯಾಳಿಸುವುದು ಸಿದ್ದರಾಮಯ್ಯನ ಚಾಳಿ; ಹೀಗಾದರೆ ಡಿಸಿಗೆ ಜನ ಮರ್ಯಾದೆ ಕೊಡುತ್ತಾರಾ...!
- ದ್ರೌಪದಿಗೆ ಅವಮಾನಿಸಿದಂತೆ ಡಿಸಿಗೆ ಅಪಮಾನ; ದೇವರಾಜ ಅರಸ್‌ಗಿಂತ ಇವರು ದೊಡ್ಡವರೇ



ಮೈಸೂರು, ಜ.16(ಬಿಎಲ್‌ಯು)– ಸಾವಿರಾರು ಕೋಟಿ ರೂಪಾಯಿ ಲೂಟಿ ಮಾಡಿರುವ ಮುಡಾದ ಇಬ್ಬರು ಕೆಎಎಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಹಿಂಜರಿಯುವ, ಹೆದರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಐಎಎಸ್ ಅಧಿಕಾರಿಯಾಗಿರುವ ವಿಜಯನಗರದ ಜಿಲ್ಲಾಧಿಕಾರಿ ದಿವಾಕರ್ ಮೇಲೆ ದರ್ಪ ತೋರಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಟೀಕಿಸಿದ್ದಾರೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಜಿಲ್ಲೆಯ ಆಡಳಿತ ನಡೆಸುತ್ತಾ ಸರ್ಕಾರದ ನೀತಿ ಹಾಗೂ ಯೋಜನೆಗಳನ್ನು ಜಾರಿಗೊಳಿಸುವ ಜಿಲ್ಲಾಧಿಕಾರಿಗೆ ಸಿದ್ದರಾಮಯ್ಯ ಅವಮಾನ ಮಾಡಿರುವುದು ಖಂಡನೀಯ ಎಂದು ಬೇಸರ ವ್ಯಕ್ತಪಡಿಸಿದರು. ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಬಂಡಿಹಳ್ಳಿಯಲ್ಲಿ ಮಾಜಿ ಶಾಸಕ ಸಿರಾಜ್ ಶೇಖರ್ ಮಗನ ಮದುವೆ ನಡೆಯುತ್ತಿತ್ತು. ಈ ಖಾಸಗಿ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಶಿಷ್ಟಾಚಾರ ಪಾಲಿಸುವ ಅಗತ್ಯವಿರಲಿಲ್ಲ. ಆದರೂ ಜಿಲ್ಲಾಧಿಕಾರಿ ದಿವಾಕರ್ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ದಿವಾಕರ್ ಅವರನ್ನು ಆಸನದಿಂದ ಎದ್ದೇಳಿಸಿ ಅವಮಾನಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರಿಗೆ ತೀವ್ರ ಮುಜುಗರ ಉಂಟು ಮಾಡಿದರು ಎಂದು ದೂರಿದರು.

ಜಿಲ್ಲಾಧಿಕಾರಿಗೆ ಅವಮಾನ ಮಾಡಿದಾಗ ಸಿದ್ದರಾಮಯ್ಯ ಶಿಷ್ಯ ಕೋಟಿ ಶಿಳ್ಳೆ ಹೊಡೆದಿದೆ. ಹೀಗಾದರೆ ಜನರು ಜಿಲ್ಲಾಧಿಕಾರಿಗೆ ಹೇಗೆ ಮರ್ಯಾದೆ ಕೊಡುತ್ತಾರೆ ಎಂದು ಪ್ರಶ್ನಿಸಿದ ವಿಶ್ವನಾಥ್, ಜಿಲ್ಲಾಧಿಕಾರಿ ಮಾತ್ರವಲ್ಲದೆ ಪ್ರತಿಯೊಬ್ಬರನ್ನು ಏಕವಚನದಲ್ಲಿ ಹಿಯ್ಯಾಳಿಸುವುದು ಸಿದ್ದರಾಮಯ್ಯಗೆ ಚಾಳಿಯಾಗಿ ಬಿಟ್ಟಿದೆ. ಇಂತಹ ವರ್ತನೆಯಿಂದ ಸಿದ್ದರಾಮಯ್ಯ ಚಿಕ್ಕವರಾಗುತ್ತಾರೆಯೇ ಹೊರತು ದೊಡ್ಡ ವರಾಗುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಮುಡಾದಲ್ಲಿ ಸಾವಿರಾರು ಕೋಟಿ ರೂ. ಹಗರಣ ಮಾಡಿರುವ ಇಬ್ಬರು ಕೆಎಎಸ್ ಅಧಿಕಾರಿಗಳನ್ನು ಮುಟ್ಟಲು ಸಿದ್ದರಾಮಯ್ಯ ಧೈರ್ಯ ಮಾಡುತ್ತಿಲ್ಲ ಆದರೆ ಇಲ್ಲಿ ಐಎಎಸ್ ಅಧಿಕಾರಿಯೊಬ್ಬ ರನ್ನು ಸಾರ್ವಜನಿಕವಾಗಿ ಅಪಮಾನ ಮಾಡುತ್ತಾರೆ. ಅವರ ಇಬ್ಬಂದಿ ನೀತಿಯನ್ನು ಕರ್ನಾಟಕದ ಜನರು ಅರಿತಿದ್ದಾರೆ ಎಂದು ಹೇಳಿದರು.

ಜಿಲ್ಲಾಧಿಕಾರಿ ದಿವಾಕರ್ ಅವರನ್ನು ಅವಮಾನ ಮಾಡುವ ಸಂದರ್ಭದಲ್ಲಿ ವೇದಿಕೆ ಮೇಲೆ ಆಸೀನರಾಗಿದ್ದ ಧರ್ಮಾಧಿಕಾರಿಗಳಾಗಲೀ, ಹಿರಿಯ ಕಾಂಗ್ರೆಸ್ ನಾಯಕರಾಗಲೀ ರಕ್ಷಣೆಗೆ ಬರಲಿಲ್ಲ. ಮಹಾಭಾರತದಲ್ಲಿ ದುರ್ಯೋಧನ ತುಂಬಿದ ಸಭೆಯಲ್ಲಿ ದ್ರೌಪದಿ ಸೀರೆ ಎಳೆದು ಅವಮಾನ ಮಾಡಿದಂತೆ ಸಿದ್ದರಾಮಯ್ಯ ಬಹಿರಂಗ ಸಭೆಯಲ್ಲಿ ಜಿಲ್ಲಾಧಿಕಾರಿ ದಿವಾಕರ್ ಅವರಿಗೆ ಅವಮಾನ ಮಾಡಿದ್ದಾರೆ ಎಂದು ಆಪಾದಿಸಿದರು.

ಸಿದ್ದರಾಮಯ್ಯ ತಮ್ಮನ್ನು ದೇವರಾಜ ಅರಸ್‌ಗೆ ಹೋಲಿಸಿಕೊಳ್ಳುತ್ತಾರೆ. ಆದರೆ ದೇವರಾಜ ಅರಸ್ ಯಾರನ್ನೂ ಈ ರೀತಿ ಅವಮಾನಿಸಿಲ್ಲ ಹಾಗೂ ದುರಹಂಕಾರದಿಂದ ವರ್ತಿಸಿಲ್ಲ. ಹಾಗಾದರೆ ಇವರು ದೇವರಾಜ ಅರಸ್‌ಗಿಂತ ದೊಡ್ಡವರೇ ಎಂದು ಪ್ರಶ್ನಿಸಿದ ವಿಶ್ವನಾಥ್, ಒಬ್ಬ ಮುಖ್ಯಮಂತ್ರಿಗೆ ಇರಬೇಕಾದ ಯೋಗ್ಯತೆ ಸಿದ್ದರಾಮಯ್ಯಗೆ ಇಲ್ಲ. ಅಧಿಕಾರದ ದರ್ಪದಿಂದ ವರ್ತಿಸುತ್ತಿರುವ ಸಿದ್ದರಾಮಯ್ಯ ಅವರನ್ನು ಅಧಿಕಾರ ಹೋದ ಮೇಲೆ ಜನರು ಯಾವ ಮಟ್ಟದಲ್ಲಿ ಇಡುತ್ತಾರೆ ಎಂಬುದು ಭವಿಷ್ಯದ ದಿನಗಳು ನಿರ್ಧರಿಸುತ್ತವೆ ಎಂದರು.

ಸಿದ್ದರಾಮಯ್ಯನದು ಉತ್ತರನ ಪೌರುಷ...

ಜಾತಿಗಣತಿ ಜಾರಿ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನದು ಉತ್ತರನ ಪೌರುಷ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಲೇವಡಿ ಮಾಡಿದರು.


ಜಾತಿಗಣತಿ ವರದಿ ಜಾರಿ ಮಾಡಲು ಹೈಕಮಾಂಡ್‌ನತ್ತ ಬೊಟ್ಟು ಮಾಡಿ ತೋರಿಸುತ್ತಾರೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಸಿದ್ದರಾಮಯ್ಯ ಅವರೇ ಹೈಕಮಾಂಡ್ ಆಗಿದ್ದಾರೆ. ಅವರ ಕಂಡರೆ ಹೈಕಮಾಂಡ್ ಹೆದರುತ್ತದೆ. ಆದರೆ ಜಾತಿ ಗಣತಿ ವರದಿ ಜಾರಿಗೊಳಿಸಲು ಸಿದ್ದರಾಮಯ್ಯಗೆ ಹೈಕಮಾಂಡ್ ನೆಪವಷ್ಟೆ ಎಂದರು.

ಜಾತಿ ಗಣತಿ ವರದಿ ಸಿದ್ಧವಾಗಿ 10 ವರ್ಷವಾಗಿದ್ದು, ಅದನ್ನು ಜಾರಿ ಮಾಡಲು ಇಷ್ಟು ವರ್ಷ ಬೇಕಾಗಿದೆಯೇ ಎಂದು ಪ್ರಶ್ನಿಸಿದ ವಿಶ್ವನಾಥ್, ಈ ತನಕ ಜಾತಿ ಗಣತಿ ವರದಿಯನ್ನು ಸಿದ್ದರಾಮಯ್ಯ ಅವರೆ ಓದಿಲ್ಲ ಎಂಬುದು ಸ್ಪಷ್ಟವಾಗುತ್ತದೆ ಎಂದರು.


ರಾಜಕೀಯವಾಗಿ ಸಂಕಷ್ಟಕ್ಕೆ ಸಿಲುಕಿದಾಗ ಸಿದ್ದರಾಮಯ್ಯಗೆ ಜಾತಿ ಗಣತಿ ಹಾಗೂ ಅಹಿಂದ ನೆನಪಿಗೆ ಬರುತ್ತದೆ. ಈ ಎರಡು ಅಸ್ತ್ರಗಳನ್ನು ಬಳಸಿಕೊಂಡು ರಾಜಕೀಯವಾಗಿ ಆಟ ಆಡುತ್ತಿದ್ದಾರೆ. ಅಹಿಂದ ಬಗ್ಗೆ ಮಾರುದ್ದ ಭಾಷಣ ಮಾಡುವ ಸಿದ್ದರಾಮಯ್ಯ ಕುರುಬ ಜನಾಂಗಕ್ಕೂ ಈ ತನಕ ಏನೂ ಮಾಡಿಲ್ಲ ಎಂದರು.

ವಿಜಯನಗರ ಸಾಮ್ರಾಜ್ಯದಲ್ಲಿ ಚಿನ್ನ, ಬೆಳ್ಳಿಯನ್ನು ಬೀದಿ ಬದಿಯಲ್ಲಿ ಸೇರಿನಲ್ಲಿ ಅಳತೆ ಮಾಡಿ ಮಾರಾಟ ಮಾಡಿದಂತೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುವ ಈ ವೇಳೆ ಮುಡಾ ನಿವೇಶನಗಳನ್ನು ಕೇವಲ 22 ಸಾವಿರ ರೂಪಾಯಿಗೆ ಮಾರಾಟ ಮಾಡಿದ್ದಾರೆ ಎಂದು ಗೇಲಿ ಮಾಡಿದರು. ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಹಸುವಿನ ಕೆಚ್ಚಲು ಕೊಯ್ದ ಪ್ರಕರಣ ಗಮನಿಸಿದರೆ ಕರ್ನಾಟಕದಲ್ಲಿ ಸರ್ಕಾರ ಅಸ್ತಿತ್ವದಲ್ಲಿ ಇಲ್ಲ. ಕಾನೂನು ಮತ್ತು ಸುವ್ಯವಸ್ಥೆಗೆ ಬೆಲೆ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ ಎಂದು ವಿಶ್ವನಾಥ್ ಆರೋಪಿಸಿದರು.

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಚುನಾವಣೆ: ಮತಯಾಚನೆ


ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ 2025–30ನೇ ಸಾಲಿನ ಮಂಡಳಿ ನಿರ್ದೇಶಕರ ಚುನಾವಣೆಯ ಹಿನ್ನೆಲೆ ಎಸ್‌ಬಿಎಂ ಮಂಜು ನೇತೃತ್ವದ ತಂಡದಿಂದ ವಿವಿಧ ಬಡಾವಣೆಗಳಲ್ಲಿ ಪ್ರಚಾರ ಮಾಡಲಾಯಿತು. ಈ ಸಂದರ್ಭದಲ್ಲಿ ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರಾದ ಎಸ್‌ಬಿಎಂ ಮಂಜು, ನಿರ್ದೇಶಕರಾದ ರವಿಕುಮಾರ್ (ರಾಜಕೀಯ), ಎಸ್.ಅರವಿಂದ, ಎಸ್.ಆರ್.ರವಿಕುಮಾರ್, ಮಂಚಪ್ಪ, ವಸಂತ ಮುನಿಶ್, ಛಾಯಮ್ಮ ಕುಮಾರ್‌ಗೌಡ, ರೋಹಿತ್, ವಿಕಾಸ್ ವೈ. ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.01.2025 ಶುಕ್ರವಾರ, ಮಳೆ ನಕ್ಷತ್ರ: ಉತ್ತರಾಷಾಢ 11.01.2025ರಿಂದ 23.01.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮೂತ್ರಪಿಂಡ (ಕಿಡ್ನಿ) ಕಾಯಿಲೆ, ಸಂಧಿವಾತ, ಮಂಡಿನೋವು, ಕೀಲುನೋವು ಮತ್ತು ಆರೋಗ್ಯಾಯುಷ್ಯ ಆರೋಗ್ಯವರ್ಧಕ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ (ಇಂಡಿಯಾ), ಮೈಸೂರು ಸೆಂಟರ್:** ರೇಸ್–25, ರೀಸೆಂಟ್ ಅಡ್ವಾನ್ಸ್ ಇನ್ ಸಿವಿಲ್ ಇಂಜಿನಿಯರಿಂಗ್, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಗೌರವ ಅತಿಥಿಗಳು : ಎಸಿಸಿಇ ಉಪಾಧ್ಯಕ್ಷ ರಾಜ್‌ಕುಮಾರ್ ಕಾಚರ್ಲಾ, ಸ್ಥಳ: ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ಸಭಾಂಗಣ, ವಿಶ್ವೇಶ್ವರನಗರ, ಬೆಳಗ್ಗೆ 10ಕ್ಕೆ.

■ **ಅಂತಾರಾಷ್ಟ್ರೀಯ ಲಿಂಗಾಯತ್ ಯೂತ್ ಫೋರಂ:** ವೀರಶೈವ ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್–2025. ಬೆಳಗ್ಗೆ 10.30ಕ್ಕೆ ಉದ್ಘಾಟನೆ: ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು. ಮುಖ್ಯ ಅತಿಥಿಗಳು: ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್. ಮೈಕ್ರೋ, ಸ್ಮಾಲ್ ಮತ್ತು ಮೀಡಿಯಂ ಎಂಟರ್‌ಪ್ರೈಸಸ್ ನಿರ್ದೇಶಕ ನಿತೇಶ್ ಪಾಟೀಲ್, ನ್ಯಾಷನಲ್ ಗ್ರೀನ್ ಟ್ರಿಬ್ಯುನಲ್ ಛೇರ್ಮನ್ ನ್ಯಾ. ಸುಭಾಷ್ ಬಿ.ಆಡಿ, ಫೆಡರೇಷನ್ ಆಫ್ ಇಂಡಸ್ಟ್ರೀಸ್ ಆಫ್ ಇಂಡಿಯಾ ಛೇರ್ಮನ್ ಬಾಲಚಂದ್ರ ರಾವ್ ರಾಣೆ, ಆದರ್ಶ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ಬಿ.ಎಂ.ಜಯಶಂಕರ್, ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ, ಎಂಎಲ್‌ಸಿ ನವೀನ್ ಕೆ.ಎಸ್., ಮಧ್ಯಾಹ್ನ ಸೆಮಿನಾರ್‌ಗಳು. ಸಂಜೆ 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ. ಉದ್ಘಾಟನೆ: ಚಿತ್ರನಟ ಡಾಲಿ ಧನಂಜಯ. ಸಂಜೆ 7 ಗಂಟೆಗೆ ಗಾಯಕ ವಾಸವಿ ವೈಭವ್ ಸಂಗೀತ ಸಂಜೆ. ಸ್ಥಳ: ಮಹಾರಾಜ ಕಾಲೇಜು ಮೈದಾನ.

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ :** ಸಿಲ್ಕ್ ಫ್ಯಾಬ್ ಮೇಳ– ರೇಷ್ಮೆ ಸೀರೆ, ಕೈಮಗ್ಗ ವಸ್ತುಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ರಿಂಗ್ ರಸ್ತೆ, ಬೆಳಗ್ಗೆ 11 ರಿಂದ.

■ **ಮೈಸೂರು ವಿವಿ ಎನ್‌ಎಸ್‌ಎಸ್ ಯೋಜನೆ :** ನ್ಯಾಷನಲ್ ಎನ್‌ಎಸ್‌ಎಸ್ ಶಿಬಿರ, ಬೆಳಗ್ಗೆ 11.30 ರಿಂದ ಆರ್.ಎ. ಚೇತನ್‌ರಾಮ್ ಅವರಿಂದ ವ್ಯಕ್ತಿ ವಿಕಸನ ಕುರಿತು ಉಪನ್ಯಾಸ, ಮಧ್ಯಾಹ್ನ 3 ರಿಂದ ಡಾ. ಸಿ. ನಾಗಣ್ಣ ಅವರಿಂದ ಯುವಜನ ಮತ್ತು ಮಾನವೀಯ ಮೌಲ್ಯಗಳು ಕುರಿತು ಉಪನ್ಯಾಸ, ಸ್ಥಳ: ಎನ್‌ಎಸ್‌ಎಸ್ ಭವನ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ.

■ **ಮೈಸೂರು ನಗರ ಪತ್ರಿಕಾ ವಿತರಕರ ಸಂಘ :** ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಮಾಜಿ ಶಾಸಕ ಎಸ್.ಎ.ರಾಮದಾಸ್, ಕ್ಯಾಲೆಂಡರ್ ಬಿಡುಗಡೆ : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಸ್ಥಳ: ಪತ್ರಕರ್ತರ ಭವನ, ಬೆಳಗ್ಗೆ 11.30ಕ್ಕೆ.

■ **ಮೈಸೂರು ಲಯನ್ಸ್ ಸ್ಕೂಲ್ :** ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಶಾಸಕ ತನ್ವೀರ್ ಸೇಠ್, ಅಧ್ಯಕ್ಷತೆ : ಮೈಸೂರು ಲಯನ್ಸ್ ಸ್ಕೂಲ್ ಅಧ್ಯಕ್ಷ ಲಯನ್ ಶಿವಕುಮಾರ್, ಗೌರವ ಅತಿಥಿಗಳು : ಡಿಡಿಪಿಐ ಎಸ್.ಟಿ. ಜವರೇಗೌಡ, ಲಯನ್ಸ್ ಕ್ಲಬ್ ಆಫ್ ಮೈಸೂರು ಲಯನ್ ಬಿ. ಶಿವಣ್ಣ, ಕಾರ್ಯದರ್ಶಿ ಲಯನ್ ಸಿ. ಮೋಹನ್‌ಕುಮಾರ್, ಬಿಇಓ ಎಸ್. ರೇವಣ್ಣ, ಲಯನ್ ಬಿ.ಎಲ್. ಗಿರೀಶ್, ಖಜಾಂಚಿ ಲಯನ್ ಜೆ. ಲೋಕೇಶ್, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 4.30ಕ್ಕೆ.

■ **ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆಗಳು :** ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಕಾವಾ ಕಾಲೇಜು, ಛಾಯಾಚಿತ್ರ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ವೀರಣ್ಣ ಎಂ. ಅರ್ಕಸಾಲಿ, ಅಧ್ಯಕ್ಷತೆ : ಮಹಾಜನ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಎಸ್. ಮುರಳಿ, ಉದ್ಘಾಟನೆ : ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ. ಜಿ. ಹೇಮಂತಕುಮಾರ್, ಉಪಸ್ಥಿತರು : ಡಾ. ಟಿ. ವಾಸುದೇವ್, ಡಾ. ಹೆಚ್.ಕೆ. ಚೇತನ್, ಡಾ. ಡಿ.ಎಸ್. ಗುರು, ಡಾ. ವೈ.ಟಿ. ಕೃಷ್ಣೇಗೌಡ, ಡಾ. ಬಿ.ಜಿ. ನರೇಶ್‌ಕುಮಾರ್, ಡಾ. ಅನಂತ್ ಕೊಪ್ಪರ್, ಸ್ಥಳ: ಡಾ. ಎಂ.ವಿ. ಗೋಪಾಲಸ್ವಾಮಿ ರಂಗಮಂದಿರ, ಸಂಜೆ 5ಕ್ಕೆ.

■ **ಅದಮ್ಯ ರಂಗಶಾಲೆ :** ಗಾಂಧಿ ಸದ್ಭಾವನಾ ಪ್ರಶಸ್ತಿ ಪ್ರದಾನ, 'ಭಸ್ಮಾಸುರ ಪ್ರಸಂಗ' ಮಕ್ಕಳ ನಾಟಕ ಪ್ರದರ್ಶನ ಸಮಾರಂಭ, ಉದ್ಘಾಟನೆ : ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಪ್ರಶಸ್ತಿ ಪ್ರದಾನ : ಹಿರಿಯ ಗಾಂಧಿವಾದಿ ಪ್ರೊ. ಕೆ.ಟಿ. ವೀರಪ್ಪ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಹೆಚ್.ಕೆ. ರಾಮು, ಆಶಯ ನುಡಿ : ಸಾಹಿತಿ ಟಿ. ಸತೀಶ್ ಜವರೇಗೌಡ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಶ್ರೀ ಉಮಾಮಹೇಶ್ವರ ನೃತ್ಯ ಕಲಾಕ್ಷೇತ್ರ ಟ್ರಸ್ಟ್:** ನೃತ್ಯ ಸಮರ್ಪಣಾ–2025, ಸಂಸ್ಥೆಯ ಸಂಸ್ಥಾಪಕರಾದ ಕರ್ನಾಟಕ ಕಲಾಶ್ರೀ ನಾಟ್ಯಾಚಾರ್ಯ ದಿ॥ ಟಿ.ಎನ್.ಸೋಮಶೇಖರ್ ಸಂಸ್ಮರಣಾ ಚಿಗುರು ಸಂಜೆ ಭರತನಾಟ್ಯ ಕಾರ್ಯಕ್ರಮ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಅಧ್ಯಕ್ಷತೆ: ನಾಟ್ಯಾಚಾರ್ಯ ಪ್ರೊ.ಕೆ. ರಾಮಮೂರ್ತಿರಾವ್, ಮುಖ್ಯ ಅತಿಥಿಗಳು: ಸಹಾಯಕ ನಿರ್ದೇಶಕರು ಕನ್ನಡ –ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಪತ್ರಕರ್ತ ಎ.ಆರ್.ರಘುರಾಮ್, ಸನ್ಮಾನಿತರು: ಬೆಂಗಳೂರಿನ ಅನನ್ಯ ಕಲಾನಿಕೇತನದ ನಿರ್ದೇಶಕಿ ಕರ್ನಾಟಕ ಕಲಾಶ್ರೀ ಗುರು ವಿದೂಷಿ ಕೆ. ಬೃಂದಾ, ಸಂಜೆ 5.30ರಿಂದ ವಿದುಷಿ ಶ್ರೀಲಕ್ಷ್ಮಿಕುಮಾರ್ ಅವರ ಪುತ್ರಿ ಹಾಗೂ ಶಿಷ್ಯೆ ವಿದೂಷಿ ಶಾರಿಕಾ ಕೌಶಿಕ್ ಅವರಿಂದ ಭರತನಾಟ್ಯ, ಸಂಜೆ 6.15ಕ್ಕೆ ಸಭಾ ಕಾರ್ಯಕ್ರಮ, ಸೋಮಶ್ರೀ ಪ್ರಶಸ್ತಿ ಪ್ರದಾನ, ಸಂಜೆ 7ಕ್ಕೆ ಶ್ರೀ ಉಮಾಮಹೇಶ್ವರ ನೃತ್ಯ ಕಲಾಕ್ಷೇತ್ರದ ವಿದ್ಯಾರ್ಥಿನಿಯರಿಂದ ಚಿಗುರು ಸಂಜೆ ಭರತನಾಟ್ಯ ಕಾರ್ಯಕ್ರಮ, ಸ್ಥಳ:ಗಾನಭಾರತಿ ರಮಾಗೋವಿಂದ ಕಲಾ ವೇದಿಕೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ರಂಗರತ್ನಾಕರ :** ರಂಗಭೂಮಿ–ಚಲನಚಿತ್ರ ನಟ ರಾಜಾನಂದ್ ನೆನಪಿನ ಕಾರ್ಯಕ್ರಮ, ಸಂಜೆ 5 ರಿಂದ ರಂಗ ಗೀತೆಗಳು, ಸಂಜೆ 6ರಿಂದ ರಂಗನಟ ಹಾಗೂ ಚಲನಚಿತ್ರನಟ ರಾಜಾನಂದ್ ರಚಿಸಿರುವ ಬೆಂಗಳೂರು ಕೆಂಪೇಗೌಡ ನಾಟಕ ಪ್ರದರ್ಶನ, ನಿರ್ದೇಶನ : ರಂಗಸ್ವಾಮಿ, ಸ್ಥಳ: ರಮಾಗೋವಿಂದ ರಂಗ ಮಂದಿರ, ನೃಪತುಂಗ ಶಾಲಾ ಆವರಣ.

■ **ರೋಟರಿ ಮೈಸೂರು ಉತ್ತರ, ಕದಂಬ ರಂಗ ವೇದಿಕೆ :** ರೋಟರಿ–ಕದಂಬ ರಂಗ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪುರಸ್ಕೃತರು : ನಟ, ನಿರ್ದೇಶಕ ಯು.ಎಸ್. ರಾಮಣ್ಣ, ಎನ್. ಧನಂಜಯ, ಅಶ್ವಥ್ ಕದಂಬ, ಕು. ದಿಶಾ ರಮೇಶ್, ಪ್ರಶಸ್ತಿ ಪ್ರದಾನ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಖ್ಯ ಅತಿಥಿಗಳು : ರಂಗಕರ್ಮಿ ಮಂಡ್ಯ ರಮೇಶ್, ಉಪಸ್ಥಿತರು : ಕದಂಬ ರಂಗ ವೇದಿಕೆ ಅಧ್ಯಕ್ಷ ಪ್ರೊ. ರಾಜಶೇಖರ ಕದಂಬ, ಅಧ್ಯಕ್ಷತೆ : ರೋಟರಿ ಮೈಸೂರು ಉತ್ತರ ಅಧ್ಯಕ್ಷ ರೋ. ಪಿ. ಪ್ರಭಾಕರ್, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ: ಡಾ. ಕಲೀಂವುಲ್ಲಾ, ಪ್ರಸ್ತುತಿ: ಜಿ.ಶಾಂತಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಆರ್.ಸುಧಾ, ಟಿ.ಎನ್.ಅಶ್ವಿನಿ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 KABHI–ಕರ್ನಾಟಕ, ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ 'ಚಳಿಗಾಲದಲ್ಲಿ ಕಂಡು ಬರುವ ಮೂಳೆ ಮತ್ತು ಕೀಲುಗಳಿಗೆ ಸಂಬಂಧಿಸಿದ ತೊಂದರೆಗಳು ಮತ್ತು ಚಿಕಿತ್ಸೆ' ಕುರಿತು ಡಾ. ಬಲರಾಮ್ ಪಾಟೀಲ್. ಎಂ ಅವರೊಂದಿಗೆ ಮಾತುಕತೆ ಮತ್ತು 'ಕ್ಷಯಮುಕ್ತ ಭಾರತ ಅಭಿಯಾನ–100 ದಿನಗಳ ಜಾಗೃತಿ ಆಂದೋಲನ' ಕುರಿತು ಡಾ.ಮಲ್ಲಿಕಾ. ಬಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.40 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಸೀತಾಲಕ್ಷ್ಮಿ ವೆಂಕಟೇಶನ್– ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸೈಕಲ್ ಸವಾರಿ ಮಾತಿನ ಲಹರಿ', ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ–ಎಂ.ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ಪ್ರಸನ್ನ–ಗಿಟಾರ್ ವಾದನ, 4.00 ಮಹಿಳಾರಂಗ–ಸಖೀ ಸಂವಾದ–ನಿಮ್ಮ ಮನೆಯಲ್ಲಿ ಹಬ್ಬದ ಆಚರಣೆಗೆ ತಯಾರಿ ಹೇಗಿರುತ್ತದೆ? ಪ್ರಸ್ತುತಿ: ಕೀರ್ತನ, 4.30 ವೃತ್ತಿ ಮಾರ್ಗದರ್ಶನ 'ಸಿರಿಕಲ್ಚರ್ ಅಂಡ್ ಸಿರಿಬಯೋಟೆಕ್ನಾಲಜಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು' ಕುರಿತು ಮೈಸೂರು ವಿಶ್ವವಿದ್ಯಾಲಯದ ಮಾನಸಗಂಗೋತ್ರಿಯ ರೇಷ್ಮೆ ಕೃಷಿ ಸ್ನಾತಕೋತ್ತರ ಅಧ್ಯಯನ ವಿಭಾಗದ ಪ್ರೊಫೆಸರ್ ಮತ್ತು ಛೇರ್ಮನ್ ಡಾ.ಟಿ.ಎಸ್.ಜಗದೀಶ್‌ಕುಮಾರ್ ಅವರೊಂದಿಗೆ ಮಾತುಕತೆ.ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 6.50 ಕೃಷಿರಂಗ: ತೆಂಗಿನ ಕೆಂಪುಮೂತಿ ಹುಳುವಿನ ಸಮಗ್ರ ನಿರ್ವಹಣೆ ಈ ಕುರಿತು ಮೈಸೂರು ತಾಲೂಕು ಎಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಜಿ.ಕೆ.ರಾಮೇಗೌಡ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ರಸಮಂಜರಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಬಾಲಾಜಿ ಶಂಕರ್–ಹಾಡುಗಾರಿಕೆ, 10.00 ತತ್ವ ಸಂಚಾರ: ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 10.30 ಸವಿನೆನಪು

ರಂಗಾಯಣ, ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ

ವನರಂಗ: ಮತ್ತಾಯ (ಕನ್ನಡ), ತಂಡ: ಅಸ್ತಿತ್ವ ಮಂಗಳೂರು, ರಚನೆ, ನಿರ್ದೇಶನ: ಅರುಣ್‌ಲಾಲ್, ಸಂಜೆ 7ಕ್ಕೆ
ಭೂಮಿಗೀತ : ಮುರ್ದಾ ಘರ್ (ಹಿಂದಿ), ತಂಡ : ಅಂಕೂರ್ ರಂಗಮಂಚ್ ಸಮಿತಿ, ಉಜ್ಜೈನ್, ಮಧ್ಯ ಪ್ರದೇಶ, ರಚನೆ, ನಿರ್ದೇಶನ: ಇವಾನ್ ಖಾನ್, ಸಂಜೆ 6.30ಕ್ಕೆ
ಕಿರುರಂಗ ಮಂದಿರ: ಅನಾಮಿಕನ ಸಾವು (ಕನ್ನಡ), ತಂಡ : ಸ್ಪಿನ್ನಿಂಗ್ ಟ್ರೀ ಥಿಯೇಟರ್, ವಿಜಯಪುರ, ರಚನೆ: ಅತುಲ್ ಘುಗಾರ್ಡ್, ನಿರ್ದೇಶನ: ಶಕೀಲ್ ಅಹ್ಮದ್, ಸಂಜೆ 7ಕ್ಕೆ; ವರ್ಣ ಚಿತ್ರಕಲಾ ಪ್ರದರ್ಶನ, ಕುಮಾರಿ ಅಭಿರಾಮಿ ಕೊಟ್ಟಾಯಂ, ಕೇರಳ; ಶಿಲ್ಪಕಲಾ ಪ್ರದರ್ಶನ, ಸ್ಮೃದುಲ್ ಇ, ಕಣ್ಣೂರು ಕೇರಳ; ಛಾಯಾಚಿತ್ರ ಪ್ರದರ್ಶನ, ನವೀನ್‌ಕುಮಾರ್, ಪುತ್ತೂರು; ರಂಗಾಯಣ ನಾಟಕಗಳ ಭಿತ್ತಿಚಿತ್ರಗಳ ಪ್ರದರ್ಶನ.
ರಂಗಾಯಣ ಆವರಣ: ಮೈಸೂರು ಸ್ವರಪಾನ ತಂಡದಿಂದ ರಂಗಗೀತೆಗಳು, ಸಂಜೆ 5 ರಿಂದ.
ಬಹುರೂಪಿ ಚಲನಚಿತ್ರೋತ್ಸವ: ಬೆಳಗ್ಗೆ 10ರಿಂದ ವೈಟ್ ಲೈಕ್ ಮಿ (ಇಂಗ್ಲೀಷ್), ನಿರ್ದೇಶನ: ಸ್ಕೊಟ್ ಮೋರಿಸ್; ಮಧ್ಯಾಹ್ನ 12ರಿಂದ ಫ್ಯಾನಿ ಲು ಹೇಮರ್ಸ್ ಅಮೇರಿಕಾ, ನಿರ್ದೇಶನ: ಜಾಯ್ ಇಲೇನ್ ಡಾವನ್‌ಪೋರ್ಟ್, ಮಧ್ಯಾಹ್ನ 2ರಿಂದ ಚೋಮನದುಡಿ, ನಿರ್ದೇಶನ: ಬಿ.ವಿ.ಕಾರಂತ.
ಕಿಂದರಿ ಜೋಗಿ ಆವರಣ : ಮಂಡ್ಯ, ಕೀರ್ತನಾ ಮತ್ತು ತಂಡದಿಂದ ಪೂಜಾ ಕುಣಿತ, ಮಂಗಳೂರು ಕಲಾವಿದರಿಂದ ದಫ್, ಸಂಜೆ 5.30ಕ್ಕೆ
ಮಕ್ಕಳ ಬಹುರೂಪಿ ನಾಟಕೋತ್ಸವ: ಎ ಫ್ರೆಂಡ್ ಬಿಯಾಂಡ್ ದ ಫೆನ್ಸ್ (ಕನ್ನಡ), ಸ್ಥಳ: ಕರ್ನಾಟಕ ಕಲಾಮಂದಿರ ಆವರಣ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜನವರಿ 17 ಶುಕ್ರವಾರ 2025

45


ಸಂಪುಟ: 45 | ಸಂಚಿಕೆ: 270 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಕೆಬಿಜಿಯವರ ಭೂಮಂತ್ರ...



ಕೆಆರ್‌ಎಸ್ ಬೃಂದಾವನ ಉದ್ಯಾನವನಕ್ಕೆ ಇಂತಹ ದುರ್ಗತಿ ಒದಗಿಬರಬಾರದು...!

■ ಪುಟ–4

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ಅಂಗಡಿಯಲ್ಲಿ ಸಿಗುವಂತದ್ದಾ...

● ಡಾ.ಜಿ.ಪರಮೇಶ್ವರ್, ಸತೀಶ್ ಜಾರಕಿಹೊಳಿ, ಕೆ.ಎನ್.ರಾಜಣ್ಣಗೆ ಹಾಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಖಡಕ್ ಪ್ರತಿಕ್ರಿಯೆ ● ನಾವು ಮಾಡುವ ಕೆಲಸವನ್ನ ಗಮನಿಸಿ ಪಕ್ಷದ ನಾಯಕರು ಸೂಕ್ತ ಹುದ್ದೆ ನೀಡುತ್ತಾರೆ



ಬೆಂಗಳೂರು, ಜ.16(ಕೆಎಂಶಿ)–ಪ್ರದೇಶ ಕಾಂಗ್ರೆಸ್ ಹುದ್ದೆ ಅಂಗಡಿಯಲ್ಲಿ ಸಿಗುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ವಿರೋಧಿಗಳಿಗೆ ಖಾರವಾಗಿ ತಿಳಿಸಿದ್ದಾರೆ.

ಪಕ್ಷ ಸಂಘಟನೆ ಮಾಡಿ ವರಿಷ್ಠರಿಂದ ಬೇಷ್ ಎನಿಸಿಕೊಂಡರೆ ಅಧಿಕಾರ ಸಿಗುತ್ತದೆಯೇ ಹೊರತು ಮಾಧ್ಯಮದ ಮುಂದೆ ಹೇಳಿಕೊಂಡರೆ ಏನೂ ದೊರೆಯುವುದಿಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ಕರ್ನಾಟಕ ಕಾಂಗ್ರೆಸ್ ನಾಯಕತ್ವಕ್ಕೆ ಸಂಬಂಧಿಸಿದಂತೆ ಎದ್ದಿರುವ ಅಸಮಾಧಾನಕ್ಕೆ ಎಐಸಿಸಿ ಅಧ್ಯಕ್ಷರೊಂದಿಗೆ ಚರ್ಚೆ ಮಾಡಿ ನಗರಕ್ಕೆ ಹಿಂತಿರುಗಿದ ನಂತರ ಸಚಿವರಾದ ಡಾ.ಜಿ.ಪರಮೇಶ್ವರ್, ಸತೀಶ್ ಜಾರಕಿಹೊಳಿ, ಕೆ.ಎನ್.ರಾಜಣ್ಣ ಅವರು ತಮ್ಮ ವಿರುದ್ಧ ಎತ್ತಿರುವ ಪ್ರಸ್ತಾವಗಳಿಗೆ ಖಡಕ್ಕಾಗಿ ಉತ್ತರಿಸಿದ್ದಾರೆ.

ಎಐಸಿಸಿ ಅಧ್ಯಕ್ಷರ ಸೂಚನೆ ಮೇರೆಗೆ ರಾಜ್ಯ ಉಸ್ತುವಾರಿಗಳು ಬಂದು ಪಕ್ಷದ ಕಾರ್ಯಕರ್ತರು ಮತ್ತು ಶಾಸಕರ ಸಭೆ ನಡೆಸಿ ಪಕ್ಷದ ವಿಚಾರಗಳ ಕುರಿತು ಬಹಿರಂಗ ಹೇಳಿಕೆ ನೀಡಬಾರದೆಂದು ಎಚ್ಚರಿಕೆ ನೀಡಿದ್ದರೂ ಕೆಲವರು ತಮ್ಮ ವಾದವನ್ನು ಮುಂದುವರೆಸಿ ಮಲ್ಲಿಕಾರ್ಜುನ ಖರ್ಗೆ ಅವರನ್ನೇ ಪ್ರಶ್ನಿಸುತ್ತಿದ್ದಾರೆ ಎಂದರು. ನಾವು ಮಾಡುವ ಕೆಲಸ, ಶ್ರಮವನ್ನು ■ 6ನೇ ಪುಟಕ್ಕೆ

ಪರಮೇಶ್ವರ್ ಕೂಡ ಆಕ್ಷೇಪ



ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ ಗಾದಿಯಲ್ಲೂ ಮುಂದುವರೆದಿರುವುದಕ್ಕೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಕೆಪಿಸಿಸಿ ಅಧ್ಯಕ್ಷಗಾದಿಗೆ ಸಂಬಂಧಿಸಿದಂತೆ ನೀಡಿದ ಹೇಳಿಕೆಯನ್ನು ಪರೋಕ್ಷವಾಗಿ ಸಮರ್ಥಿಸಿಕೊಂಡ ಪರಮೇಶ್ವರ್, ಒಬ್ಬರು ಒಂದು ಹುದ್ದೆ ನಿಭಾಯಿಸಿದರೆ ಆಡಳಿತ ಮತ್ತು ಪಕ್ಷ ಸಂಘಟನೆಗೆ ಸಹಕಾರಿಯಾಗುತ್ತದೆ ಎಂದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ವಾಭಾವಿಕವಾಗಿ ಅಧ್ಯಕ್ಷ ಸ್ಥಾನ ಹಾಗೂ ಎರಡು ದೊಡ್ಡ ಸಚಿವ ■ 6ನೇ ಪುಟಕ್ಕೆ

ಬಾಲಿವುಡ್ ನಟ ಸೈಫ್ ಅಲಿಖಾನ್‌ಗೆ ಚಾಕುವಿನಿಂದ ಆರು ಬಾರಿ ಇರಿದ ದುಷ್ಕರ್ಮಿ!

● ಬಾಂದ್ರಾದ ಅವರ ನಿವಾಸದಲ್ಲೇ ಘಟನೆ ● ದರೋಡೆ ಯತ್ನ ನಡೆದಾಗ ನಡೆದ ಮಾರಾಮಾರಿ ● ಸೈಫ್‌ಗೆ ಶಸ್ತ್ರಚಿಕಿತ್ಸೆ; ಪ್ರಾಣಾಪಾಯದಿಂದ ಪಾರು



ಆರೋಪಿ ಸಿಸಿ ಕ್ಯಾಮರಾದಲ್ಲಿ ಸೆರೆ | ಬಾಲಿವುಡ್ ನಟ ಸೈಫ್ ಅಲಿಖಾನ್

ಮುಂಬೈ, ಜ.16– ನಾಯಕ ಮತ್ತು ಖಳನಾಯಕ ಎರಡೂ ರೀತಿಯ ಪಾತ್ರಗಳಲ್ಲೂ ಸೈ ಎನಿಸಿಕೊಂಡಿರುವ ಸೈಫ್ ಅಲಿಖಾನ್ ಅವರ ಮುಂಬೈನ ಬಾಂದ್ರಾ ಪ್ರದೇಶದಲ್ಲಿರುವ ಮನೆಗೆ ನಿನ್ನೆ ತಡರಾತ್ರಿ ನುಗ್ಗಿರುವ ದುಷ್ಕರ್ಮಿಯೋರ್ವ ಅವರಿಗೆ ಚಾಕುವಿನಿಂದ ಆರು ಬಾರಿ ಇರಿದಿದ್ದಾನೆ.

ಬಾಂದ್ರಾದಲ್ಲಿರುವ ಫ್ಲ್ಯಾಟ್‌ಗೆ ಮಧ್ಯರಾತ್ರಿ ಸುಮಾರು 2 ಗಂಟೆಗೆ ನುಗ್ಗಿರುವ ಆಗಂತುಕ ಬಾಲಿವುಡ್ ನಟ ಸೈಫ್ ಮೇಲೆ ಚಾಕುವಿನಿಂದ ದಾಳಿ ಮಾಡಿದ್ದು, ಈ ದಾಳಿಯಲ್ಲಿ ಅವರ ಬೆನ್ನು ಮತ್ತು ಬೆನ್ನುಹುರಿಗೂ ಚುಚ್ಚಲಾಗಿದ್ದು, ಲೀಲಾವತಿ ಆಸ್ಪತ್ರೆಗೆ ದಾಖಲಿಸಿ, ಅವರನ್ನು ಶಸ್ತ್ರ ಚಿಕಿತ್ಸೆಗೆ ಒಳಪಡಿಸಲಾಗಿದೆ. ದುಷ್ಕರ್ಮಿಯೊಬ್ಬ ಸೈಫ್ ಅಲಿಖಾನ್ ಅವರ 11ನೇ ಅಂತಸ್ತಿನ ಫ್ಲ್ಯಾಟ್‌ನಲ್ಲಿ ಕಳ್ಳತನಕ್ಕೆ ನುಗ್ಗಿದ್ದ ಎಂದು ಪ್ರಾಥಮಿಕ ಮಾಹಿತಿಗಳಿಂದ ಗೊತ್ತಾಗಿದೆ. ಸೈಫ್ ಅದನ್ನು ತಡೆಯುವಾಗ ಸಂಘರ್ಷಕ್ಕಿಳಿದ ಕಳ್ಳ ಸೈಫ್ ಅವರಿಗೆ ಸಿಕ್ಕ ಸಿಕ್ಕ ಕಡೆಯಲ್ಲಿ ಚಾಕುವಿನಿಂದ ಇರಿದು, ಅಲ್ಲಿಂದ ಪರಾರಿಯಾಗಿದ್ದಾನೆ. ಅನಂತರ ಸೈಫ್ ಅವರ ದೊಡ್ಡ ಮಗ ಇಬ್ರಾಹಿಂ ಹಾಗೂ ಅವರ ಸಹಾಯಕರು 3 ಗಂಟೆ ಸುಮಾರಿಗೆ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಚಾಕು ಹೊರಕ್ಕೆ: ಖಾನ್ ಅವರ ದೇಹಕ್ಕೆ ಆರು ಬಾರಿ ಇರಿಯಲಾಗಿದೆ, ಎರಡು ಭಾಗಗಳಲ್ಲಿ ಆಳವಾಗಿ ಗಾಯಗಳಾಗಿವೆ. ತುರ್ತು ಶಸ್ತ್ರಚಿಕಿತ್ಸೆ ನಡೆಸಲಾಗಿದೆ, ಜೀವಕ್ಕೆ ಯಾವುದೇ ಅಪಾಯವಿಲ್ಲ. ಬೆನ್ನುಮೂಳೆಯಿಂದ ಬರೋಬ್ಬರಿ 2.5 ಇಂಚಿನ ಚಾಕುವನ್ನು ಹೊರ ತೆಗೆಯಲು ಶಸ್ತ್ರಚಿಕಿತ್ಸೆ ನಡೆಸಲಾಯಿತು. ಖಾನ್ ಅವರ ಆರೋಗ್ಯ ಈಗ ಸ್ಥಿರವಾಗಿದೆ. ನಾಳೆ ಬೆಳಿಗ್ಗೆ ಅವರನ್ನು ಐಸಿಯುನಿಂದ ಹೊರತರುತ್ತೇವೆ ಎಂದು ಆಸ್ಪತ್ರೆಯ ಡಾ. ನಿತಿನ್ ಡಾಂಗೆ ತಿಳಿಸಿದ್ದಾರೆ.

ಅಭಿಮಾನಿಗಳಿಗೆ ಪತ್ನಿ ಕರೀನಾ ಕಪೂರ್ ಮನವಿ: ಈ ಸಂದರ್ಭದಲ್ಲಿ ಮಾಧ್ಯಮದವರು ಮತ್ತು ಅಭಿಮಾನಿಗಳು ಶಾಂತ ರೀತಿಯಲ್ಲಿ ವರ್ತಿಸಿ, ಉಳಿದ ಕುಟುಂಬ ಸದಸ್ಯರು ಸುರಕ್ಷಿತವಾಗಿದ್ದಾರೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದು ಸೈಫ್ ಅಲಿಖಾನ್ ಪತ್ನಿ, ನಟಿ ಕರೀನಾ ಕಪೂರ್ ಖಾನ್ ಮನವಿ ಮಾಡಿದ್ದಾರೆ.

ಆರೋಪಿ ಗುರುತು ಪತ್ತೆ: ಸೈಫ್ ಅಲಿಖಾನ್‌ಗೆ ಚೂರಿ ಇರಿತ ಪ್ರಕರಣದ ■ 6ನೇ ಪುಟಕ್ಕೆ

ಸರ್ಕಾರಿ ನೌಕರರಿಗೆ ಸಿಹಿಸುದ್ದಿ
8ನೇ ವೇತನ ಆಯೋಗ ರಚನೆಗೆ ಕೇಂದ್ರ ಸಂಪುಟ ಅಸ್ತು

ನವದೆಹಲಿ, ಜ.16–ಮಹತ್ವದ ಬೆಳವಣಿಗೆಯಲ್ಲಿ ಕೇಂದ್ರ ಸರ್ಕಾರಿ ನೌಕರರಿಗೆ ಸಿಹಿಸುದ್ದಿ ದೊರೆತಿದ್ದು, 8ನೇ ವೇತನ ಆಯೋಗ ರಚನೆಗೆ ಕೇಂದ್ರ ಸಂಪುಟ ಸಭೆ ಅಸ್ತು ಎಂದಿದೆ.

ಕೇಂದ್ರ ಸರ್ಕಾರ ನೌಕರರ ವೇತನ ಹಾಗೂ ಪಿಂಚಣಿದಾರ ಭತ್ಯೆಗಳ ಪರಿಷ್ಕರಣೆಗೆ 8ನೇ ವೇತನ ಆಯೋಗ ರಚಿಸುವ ಮಹತ್ವದ ನಿರ್ಧಾರವನ್ನು ಕೇಂದ್ರ ಸಚಿವ ಸಂಪುಟ ಗುರುವಾರ ತೆಗೆದುಕೊಂಡಿದೆ. ಪ್ರಧಾನಿ ಮೋದಿ ನೇತೃತ್ವದಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಯಿತು ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. 2016ರಲ್ಲಿ ಏಳನೇ ವೇತನ ಆಯೋಗವನ್ನು ರಚಿಸಲಾಗಿತ್ತು. 2026ರಲ್ಲಿ ಅದರ ಅವಧಿ ಅಂತ್ಯವಾಗಲಿದ್ದು, ಆಯೋಗದ ಅಧ್ಯಕ್ಷ ಹಾಗೂ ಇಬ್ಬರು ಸದಸ್ಯರನ್ನು ಶೀಘ್ರವೇ ನೇಮಕ ಮಾಡಲಾಗುವುದು ಎಂದು ಸಚಿವ ವೈಷ್ಣವ್ ತಿಳಿಸಿದ್ದಾರೆ. ಕೇಂದ್ರ ಸರ್ಕಾರಿ ನೌಕರರಿಗೆ ಪ್ರಧಾನಮಂತ್ರಿಗಳು 8ನೇ ಕೇಂದ್ರ ವೇತನ ಆಯೋಗವನ್ನು ಅನುಮೋದಿಸಿದ್ದಾರೆ. ಪ್ರಸ್ತುತ 49 ಲಕ್ಷಕ್ಕೂ ಹೆಚ್ಚು ಕೇಂದ್ರ ಸರ್ಕಾರಿ ನೌಕರರು ಮತ್ತು ಸುಮಾರು 65 ಲಕ್ಷ ಪಿಂಚಣಿದಾರರಿದ್ದಾರೆ. 2025ರಲ್ಲಿ ಹೊಸ ವೇತನ ಆಯೋಗವನ್ನು ಸ್ಥಾಪಿಸುವುದರಿಂದ 7ನೇ ವೇತನ ಸಮಿತಿಯ ಅವಧಿ ಪೂರ್ಣಗೊಳ್ಳುವ ಮೊದಲೇ ಅದರ ಶಿಫಾರಸುಗಳನ್ನು ಸ್ವೀಕರಿಸಲಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮತ್ತು ಇತರ ಪಾಲುದಾರರೊಂದಿಗೆ ಸಮಾಲೋಚನೆಗಳನ್ನು ನಡೆಸಲಾಗುವುದು ಎಂದು ಅವರು ಹೇಳಿದರು. ಅಂದಹಾಗೆ 2025ರ ಬಜೆಟ್ ಘೋಷಣೆಗಳಿಗೆ ಕೆಲವು ದಿನಗಳ ■ 6ನೇ ಪುಟಕ್ಕೆ

ಆಕಸ್ಮಿಕ ಗುಂಡಿಗೆ ವೈನ್ ಶಾಪ್ ಮಾಲೀಕ ಬಲಿ

ಚೇರಂಬಾಣೆ ಗ್ರಾಮದಲ್ಲಿ ದುರಂತ



ಮಿತ್ರ ಚಂಗಪ್ಪ


ಮಡಿಕೇರಿ, ಜ.16–ಆಕಸ್ಮಿಕವಾಗಿ ಗುಂಡು ಸಿಡಿದು ವೈನ್ ಶಾಪ್ ಮಾಲೀಕ ಬಲಿಯಾದ ಘಟನೆ ಬುಧವಾರ ರಾತ್ರಿ ತಾಲೂಕಿನ ಚೇರಂಬಾಣೆ ಗ್ರಾಮದಲ್ಲಿ ನಡೆದಿದೆ. ಚೇರಂಬಾಣೆಯಲ್ಲಿ ಮದ್ಯ ಮಳಿಗೆ ಹೊಂದಿದ್ದ ಪೊನ್ನ ಚೆಟ್ಟಿರ ಕೆ.ಮಿತ್ರ ಚಂಗಪ್ಪ (49) ಮೃತಪಟ್ಟವರು.

ಘಟನೆ: ಪೊನ್ನಚೆಟ್ಟಿರ ಕೆ. ಮಿತ್ರ ಚಂಗಪ್ಪ ಎಂದಿನಂತೆ ಬುಧವಾರ ರಾತ್ರಿ ವೈನ್ ಶಾಪ್ ಬಂದ್ ಮಾಡಿ 12.30 ಗಂಟೆಗೆ ಲೋಡ್ ಆಗಿದ್ದ ತಮ್ಮ ಬಂದೂಕಿನೊಂದಿಗೆ ಮನೆಗೆ ಮರಳಲು ಸಿದ್ಧರಾಗಿದ್ದರು. ಈ ವೇಳೆ ಹಾಲಿನ ವಾಹನ ಬಂದಿದ್ದು, ಮಿತ್ರ ಚಂಗಪ್ಪ ತಮ್ಮ ಬಂದೂ ಕನ್ನು ಸ್ಕೂಟಿಯಲ್ಲಿಟ್ಟು ಹಾಲಿನ ಪ್ಯಾಕೇಟ್ ಖರೀದಿಸಿ ತನ್ನ ದ್ವಿಚಕ್ರ ವಾಹನದ ಸೀಟ್ ಮೇಲೆತ್ತಿ ಅದನ್ನು ಡಿಕ್ಕಿಯಲ್ಲಿ ಇಡುವಾಗ ಸ್ಕೂಟಿ ಮುಂಭಾಗದಲ್ಲಿ ನೇರವಾಗಿ ನಿಲ್ಲಿಸಿದ್ದ ಬಂದೂಕಿನಿಂದ ಏಕಾಏಕಿ ಗುಂಡು ಸಿಡಿದು ಮಿತ್ರ ಚಂಗಪ್ಪ ಹೊಟ್ಟೆಯ ಭಾಗಕ್ಕೆ ಹೊಕ್ಕಿದೆ. ಅಲ್ಲಿಯೇ ಕುಸಿದು ಬಿದ್ದು ಚಂಗಪ್ಪ ಮೃತಪಟ್ಟಿದ್ದಾರೆ.

ಸಿಸಿ ಕ್ಯಾಮರಾದಲ್ಲಿ ಸೆರೆ: ಮೊದಲು ಈ ಘಟನೆ ಕುರಿತು ಊಹಾಪೋಹಗಳು ಹರಿದು ಹಲವು ಸಂಶಯಗಳನ್ನು ಹುಟ್ಟು ಹಾಕಿತ್ತು. ಮಾಹಿತಿ ಪಡೆದು ಸ್ಥಳಕ್ಕಾಗಮಿಸಿ ಸ್ಥಳ ಮಹಜರು ನಡೆಸಿದ ಭಾಗಮಂಡಲ ಠಾಣೆ ಪೊಲೀಸರು, ಘಟನಾ ಸ್ಥಳದಲ್ಲಿದ್ದ ಸಿಸಿ ಕ್ಯಾಮರಾಗಳ ಪರಿಶೀಲಿಸಿದರು. ಈ ವೇಳೆ ಸ್ಕೂಟಿಯಲ್ಲಿಟ್ಟಿದ್ದ ಬಂದೂಕಿನಿಂದ ಗುಂಡು ಸಿಡಿದು ಮಿತ್ರ ಚಂಗಪ್ಪ ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ. ಮೃತದೇಹವನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ಸ್ಥಳಾಂತರಿಸಿ ಮರಣೋತ್ತರ ಪರೀಕ್ಷೆ ನಡೆಸಿ, ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಬೆಂಗಳೂರು ಅರಮನೆ ಟಿಡಿಆರ್ ಪ್ರಕರಣ
1996ರ ಕಾನೂನಿನ ಸಿಂಧುತ್ವದ ಬಗ್ಗೆ ತುರ್ತು ವಿಚಾರಣೆ ಕೋರಿ ರಾಜ್ಯ ಸರ್ಕಾರದ ಅರ್ಜಿ

ಬೆಂಗಳೂರು, ಜ.16– ಬೆಂಗಳೂರು ಅರಮನೆಯನ್ನು ವಶಪಡಿಸಿಕೊಂಡಿರುವ 1997ರ ಕಾಯ್ದೆಯ ಸಿಂಧುತ್ವವನ್ನು ಎತ್ತಿ ಹಿಡಿಯಲು ಸರ್ವೋಚ್ಚ ನ್ಯಾಯಾಲಯದ ಮುಂದೆ ಕರ್ನಾಟಕ ಸರ್ಕಾರ ಸಲ್ಲಿಸಿರುವ ಮೇಲ್ಮನವಿ ಅರ್ಜಿಯನ್ನು ತುರ್ತು ವಿಚಾರಣೆಗೆ ಕೈಗೆತ್ತಿಕೊಳ್ಳಬೇಕೆಂದು ಸಲ್ಲಿಸಲಾಗಿರುವ ಮಧ್ಯಂತರ ಅರ್ಜಿಯನ್ನು ಪರಿಗಣಿಸಬೇಕೆಂದು ಕೋರಲು ರಾಜ್ಯ ಸಚಿವ ಸಂಪುಟ ಇಂದು ನಿರ್ಧರಿಸಿದೆ.



ಈ ಹಿಂದೆ ಉಚ್ಚ ನ್ಯಾಯಾಲಯ ಅನುಮೋದಿಸಿದ ಕರ್ನಾಟಕ ವಿಧಾನ ಮಂಡಲ ಅಂಗೀಕರಿಸಿದ ಅಧಿನಿಯಮವನ್ನು ಎತ್ತಿಹಿಡಿಯಲು 1997ರಲ್ಲಿ ಸರ್ಕಾರ ಸಲ್ಲಿಸಿರುವ ಮೇಲ್ಮನವಿಗಳನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲು ಈಗಾಗಲೇ ಮಧ್ಯಂತರ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ ಹಾಗೂ ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅವರು ಇಂದು ಮಾಧ್ಯಮ ಪ್ರತಿನಿಧಿಗಳಿಗೆ ಸಚಿವ ಸಂಪುಟ ಸಭೆಯ ನಂತರ ಸಂಪುಟದ ನಿರ್ಣಯದ ಕುರಿತು ವಿವರಿಸಿದರು.

ಸಂಪುಟ ಸಭೆಯಲ್ಲಿ ನಿರ್ಧಾರ

ಸರ್ವೋಚ್ಚ ನ್ಯಾಯಾಲಯದ 10–12–2024ರ ತೀರ್ಪಿನಂತೆ ಬೆಂಗಳೂರು ಅರಮನೆ ಮೈದಾನಕ್ಕೆ ಸೇರಿದ 15 ಎಕರೆ 17.5 ಗುಂಟೆ ಜಮೀನನ್ನು ಉಪಯೋಗಿಸಿಕೊಳ್ಳುವುದಕ್ಕೆ ನಿಗದಿಪಡಿಸಿದ ಟಿಡಿಆರ್ ದರದ ಬಗ್ಗೆ ಸಚಿವ ಸಂಪುಟವು ಇಂದು ಚರ್ಚಿಸಿತು. ನ್ಯಾಯಾಂಗ ನಿಂದನೆ ಅರ್ಜಿಯ ವಿಷಯದಲ್ಲಿ ಕಾನೂನಿನ ಪ್ರಕಾರ ಅಗತ್ಯ ಕ್ರಮ ವಹಿಸಲು ಸಚಿವ ಸಂಪುಟವು ಸಂಬಂಧಪಟ್ಟ ಇಲಾಖೆಗೆ ನಿರ್ದೇಶಿಸಿತು.

ಸರ್ವೋಚ್ಚ ನ್ಯಾಯಾಲಯದ 21–12–2024ರ ಆದೇಶಾನುಸಾರ ರೂ. 2,83,500 ಪ್ರ.ಚ.ಮೀಟರ್‌ಗೆ (ಬಳ್ಳಾರಿ ರಸ್ತೆ) ಮತ್ತು ರೂ.2,04,000 ಪ್ರ.ಚ. ಮೀಟರ್‌ಗೆ (ಜಯಮಹಲ್ ರಸ್ತೆ) ಮೌಲ್ಯದಂತೆ ಟಿಡಿಆರ್ ಅನ್ನು ನೀಡಲು ಅಂದಾಜು ರೂ.3011.00 ಕೋಟಿಗಳ ಆರ್ಥಿಕ ಹೊರೆ ಬಗ್ಗೆ ಈಗಾಗಲೇ ರಾಜ್ಯ ಸರ್ಕಾರ ಸರ್ವೋಚ್ಚ ■ 6ನೇ ಪುಟಕ್ಕೆ

ಬೀದರ್‌ನಲ್ಲಿ ಎಟಿಎಂಗೆ ಹಣ ತುಂಬಲು ಬಂದ ಸಿಬ್ಬಂದಿ ಮೇಲೆ ಗುಂಡಿನ ದಾಳಿ
ಇಬ್ಬರು ಸಾವು; 93 ಲಕ್ಷ ರೂ. ದರೋಡೆ

ಬೀದರ್, ಜ.16–ಎಟಿಎಂಗೆ ಹಣ ಹಾಕಲು ಬಂದ ಬ್ಯಾಂಕ್ ಸಿಬ್ಬಂದಿ ಮೇಲೆ ಹಾಡಹಗಲೇ ಗುಂಡಿನ ದಾಳಿ ನಡೆಸಿರುವ ಘಟನೆಯೊಂದು ಬೀದರ್‌ನ ಎಸ್‌ಬಿಐ ಮುಖ್ಯ ಕಚೇರಿ ಮುಂದೆ ಗುರುವಾರ ನಡೆದಿದೆ. ಸಿಬ್ಬಂದಿ ಕಣ್ಣಿಗೆ ಖಾರದಪುಡಿ ಎರಚಿ, ಗುಂಡು ಹಾರಿಸಿ ಹಣದ ಸಮೇತ ಪರಾರಿಯಾಗಿದ್ದಾರೆ. ಗುಂಡಿನ ದಾಳಿ ಪರಿಣಾಮ ಇಬ್ಬರು ಭದ್ರತಾ ಸಿಬ್ಬಂದಿ ಉಸಿರು ಚೆಲ್ಲಿದ್ದಾರೆ. ಬೆಳಿಗ್ಗೆ 11.30ಕ್ಕೆ ಜನನಿಬಿಡ ಶಿವಾಜಿ ಚೌಕ್‌ನಲ್ಲಿ ರುವ ಎಸ್‌ಬಿಐ ಬ್ಯಾಂಕ್ ಎಟಿಎಂ ಬಳಿ ಭದ್ರತಾ ಸಿಬ್ಬಂದಿ ಸಿಎಂಎಸ್ ಏಜೆನ್ಸಿಯ ವಾಹನದಲ್ಲಿ ಲಕ್ಷಾಂತರ ಹಣವನ್ನು ತೆಗೆದುಕೊಂಡು ಬಂದಿದ್ದರು. ಇನ್ನೇನು ಎಟಿಎಂಗೆ ಹಣ ಹಾಕಬೇಕು ಎನ್ನುವಷ್ಟರಲ್ಲಿ ಸ್ಥಳಕ್ಕೆ ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು, ಏಕಾಏಕಿ ಎಂಟು ಸುತ್ತು ಗುಂಡಿನ ದಾಳಿ ನಡೆಸಿದ್ದಾರೆ. ಪರಿಣಾಮ ಓರ್ವ ಸಿಬ್ಬಂದಿ ಸ್ಥಳದಲ್ಲಿಯೇ ಸಾವನ್ನಪ್ಪಿದ್ದರೆ, ಮತ್ತೋರ್ವ ಸಿಬ್ಬಂದಿ ಚಿಕಿತ್ಸೆ ಫಲಕಾರಿ ಯಾಗದೆ ಸಾವನ್ನಪ್ಪಿದ್ದಾರೆ. ಖದೀಮರು 93 ಲಕ್ಷ ರೂ. ಇದ್ದ ಹಣದ ಪೆಟ್ಟಿಗೆಯನ್ನು ತೆಗೆದು ಕೊಂಡು ಹೋಗುತ್ತಿರುವ ದೃಶ್ಯ ಸ್ಥಳೀಯರ ಫೋನ್‌ನಲ್ಲಿ ಸೆರೆಯಾಗಿದೆ. ಈ ವಿಚಾರ ತಿಳಿದ ಕೂಡಲೇ ■ 7ನೇ ಪುಟಕ್ಕೆ



ನಕ್ಕರೆ ಅದೇ ಸ್ವರ್ಗ

ಟೀಚರ್ : ಈಗಿನ ಅಜ್ಜಿ–ಮೊಮ್ಮಗಳಿಗೆ ಉದಾಹರಣೆ ಕೊಡು!

ಗುಂಡ : ಅಜ್ಜಿಗೆ ಹಿಟ್ಟು ಖಾಲಿಯಾಯ್ತು ಎಂದು ಚಿಂತೆಯಾದ್ರೆ, ಮೊಮ್ಮಗಳಿಗೆ ನೆಟ್ ಖಾಲಿ ಆಯ್ತು ಅನ್ನೋ ಚಿಂತೆ

ಮೈಸೂರು ಮಿತ್ರ

ಶುಕ್ರವಾರ, 17 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಮನುಷ್ಯ ಉರಿಯುವ ದೀಪದಂತೆ, ಆಸಕ್ತಿ ಅದಕ್ಕೆ ಹಾಕುವ ಎಣ್ಣೆಯಂತೆ.
–ಎ.ಪಿ.ಜೆ.ಅಬ್ದುಲ್ ಕಲಾಮ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಶಸ್ತ್ರದಿಂದಾದ ಗಾಯ ಮಾಯುತ್ತದೆ. ನಾಲಿಗೆಯಿಂದಾದ ಗಾಯ ಮಾಯುವುದಿಲ್ಲ.

ನಿಮ್ಮ ಪತ್ರಗಳು

■ ಸಂಬಂಧಗಳ ಭಾವನೆಗಳ ಸೆರೆಯೊಳಗೆ ಬಂಧಿ ನಾವು?!

ಮಾನ್ಯರೆ,

ನಮ್ಮೆಲ್ಲರಿಗೂ ತಿಳಿದ ಹಾಗೆ ಬಿಡಿಸಲಾಗದ ಬಂಧವೆಂದರೆ ಅದುವೇ ನಮ್ಮೊಟ್ಟಿಗಿರುವ ಕರುಳ ಬಳ್ಳಿಯ ಸಂಬಂಧ. ಆದಿ ಅನಾದಿಕಾಲದಿಂದಲೂ ನಮ್ಮವರು ನಮ್ಮೊಟ್ಟಿಗೆ ಇರುವವರು ಎಂಬ ದೃಢ ಸಂಕಲ್ಪದೊಂದಿಗೆ ಸಮಾಜದಲ್ಲಿ ಬದುಕು ಸಾಗಿಸುತ್ತೇವೆ. ಈ ಸಂಬಂಧ ಕೆಲವೊಮ್ಮೆ ಸಿಹಿ ಜೇನಿನಂತಿದ್ದರೂ ಮಗದೊಮ್ಮೆ ಬೇವಿನ ಗುಣವನ್ನು ಹೊಂದುವುದು. ಎರಡನ್ನು ಸವಿದು ಮಾನವ ಜೀವಿಸಬೇಕಾಗಿರುವ ಅನಿವಾರ್ಯಕ್ಕೆ ಸಿಲುಕಿದ್ದಾನೆ.

ಯಾರೆ ಎಷ್ಟೇ ದೂರವಾದರೂ ಕೆಲವೊಮ್ಮೆ ಸುಖ ದುಃಖಗಳು ನಮ್ಮನ್ನು ಗಾಢವಾಗಿ ಅಮರಿಕೊಂಡಾಗ ನಮ್ಮನ್ನು ತಕ್ಷಣ ಕಾಡುವುದು ನಮ್ಮವರು ನಮ್ಮೊಟ್ಟಿಗಿರಬೇಕಿತ್ತು ಎನ್ನುವುದು ಅಲ್ಲವೇ?. ಆದರೆ, ಕೆಲವು ಸಂಬಂಧಗಳು ಬೆಲೆ ಕಟ್ಟಲಾಗದ ಮೌಲ್ಯವನ್ನು ಹೊಂದಿರುತ್ತವೆ. ಈ ಜನ್ಮದಲ್ಲಿ ಅಷ್ಟೇ ಅಲ್ಲ ಮುಂದಿನ ಜನ್ಮದಲ್ಲೂ ನಮಗೆ ಇಂತಹ ಸಂಬಂಧಿಕರೇ ನಮಗೆ ಸಿಗಲಿ ಎಂದು ದೇವರಲ್ಲಿ ಮೊರೆ ಇಡುವ ಪರಿ ನಮ್ಮನ್ನು ಅಗಾಧವಾಗಿ ಆವರಿಸಿಕೊಂಡು ಬಿಟ್ಟಿರುತ್ತದೆ. ಹಾಗೆ ಇನ್ನು ಕೆಲವು ಸಂಬಂಧಗಳು ನಂಜನ್ನು ಕಾರುವ ಉರಗದಂತಾಗಿರುತ್ತವೆ. ಅವರ ಜೊತೆ ಸಂಬಂಧಕ್ಕೆ ಬೆಲೆ ಎಳ್ಳಷ್ಟು ಇರುವುದಿಲ್ಲ! ಅವಕಾಶವಾದಿಗಳಾಗಿರುತ್ತಾರೆ. ಕಬ್ಬಿನ ರಸವನ್ನು ಹೀರಿ ಕೊನೆಗೆ ಸಿಪ್ಪೆ ನಮಗೇಕೆ ಎಂದು ಬಿಸಾಡುವ ಹಾಗೆ ನಮ್ಮನ್ನು ಹತ್ತಿರವು ಸೇರಿಸಿಕೊಳ್ಳದೆ ದೂರವಿಡಲು ತವಕಿಸುತ್ತಾರೆ. ಇಂತಹವರಿಂದ ದೂರವಿರುವುದು ಮರ್ಯಾದೆಯ ಗುಣವಲ್ಲವೇ? ಇಂತಹ ಸಂಬಂಧಗಳು ನಮ್ಮನ್ನು ಜೀವನ ಪರ್ಯಂತ ಕಾಡುತ್ತಲೇ ಇರುತ್ತವೆ. ಈ ಸಂಬಂಧಗಳಿಗೆ ಬಲಿಪಶುಗಳ ರೀತಿಯಲ್ಲಿ ಮಾನವನು ಇರುವ ಅಯಸ್ಸನ್ನು ಕಳೆಯುವ ಅನಿವಾರ್ಯತೆ ಅವನ ಪಾಲಿಗೆ ಬಂದಿದೆ. ಕಣ್ಣಿಗೆ ಕಾಣದ ಮಾಯಾವಿ ಎಡಬಿಡದೆ ನಮ್ಮನ್ನು ಕಾಣುವ ಈ ಭಾವನೆಗಳ ಸುಳಿಯಲ್ಲಿ ಸಿಲುಕಿ ಮನುಜ ಕುಲದವರು ಜೀವನ ನಡೆಸಬೇಕಾಗಿರುವುದು ವಿಪರ್ಯಾಸ ಸಂಗತಿಯೇ ಸರಿ! ಏನೇ ಹಾಗಲಿ ಈ ಸಂಬಂಧಗಳು ಎಲ್ಲರ ಬಾಳಲ್ಲಿ ಬೆಲ್ಲದ ಸವಿಯನ್ನುಂಟು ಮಾಡಲಿ ಎಂಬುದೇ ನನ್ನ ಆಶಯವಷ್ಟೇ?!

–ಅನಿಲ್ ರಾಜ, ಸಹ ಶಿಕ್ಷಕರು, ಮೈಸೂರು.

■ ಮೌಲ್ಯ ಕಳೆದುಕೊಳ್ಳುತ್ತಿರುವ ಕೆ.ಆರ್. ಆಸ್ಪತ್ರೆ



ಮಾನ್ಯರೆ,

ಮೈಸೂರಿನ ಮಹಾರಾಜರ ಕಾಲದಲ್ಲಿ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಪ್ರಾರಂಭವಾಗಿ ಒಂದಾನೊಂದು ಕಾಲದಲ್ಲಿ ದೇಶದಲ್ಲೇ ಅತ್ಯುತ್ತಮ ಸಾರ್ವಜನಿಕ ಆಸ್ಪತ್ರೆ ಎಂದು ಖ್ಯಾತಿ ಪಡೆದಿದ್ದ ಮೈಸೂರಿನ ಕೃಷ್ಣ ರಾಜೇಂದ್ರ ಆಸ್ಪತ್ರೆ (ಕೆ.ಆರ್.ಆಸ್ಪತ್ರೆ) ದಿನೇ ದಿನೆ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ.

ಇಲ್ಲಿನ ಭ್ರಷ್ಟಾಚಾರ, ದರ್ಪ, ಅಧಿಕಾರಿಗಳ ಒಳಜಗಳ ಮತ್ತಿತರ ಅನೇಕ ಕಾರಣಗಳಿಂದ ಬಡರೋಗಿಗಳು ದಿನೇ ದಿನೆ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದಾರೆ.

ರೋಗಿಗಳ ಜೊತೆಗೆ ಬಂದವರಿಗೆ ಕನಿಷ್ಠ ಸೌಜನ್ಯ ಮತ್ತು ಮಾನವೀಯತೆ ತೋರುವಲ್ಲಿ ಸಿಬ್ಬಂದಿ ವರ್ಗದವರು ವಿಫಲರಾಗಿದ್ದಾರೆ. ಕೇವಲ ಹಣ ನೀಡಿದವರಿಗೆ ಸೌಲಭ್ಯ ಸಿಗುತ್ತ ದೆಯೇ ಹೊರತು ಬಡವರನ್ನು ಬೀದಿ ನಾಯಿಗಿಂತ ಕಡೆಯಾಗಿ ನಡೆಸಿಕೊಳ್ಳು ತ್ತಿದ್ದಾರೆ. ಈಗಾಗಲೇ ನೂರಾರು ನಿರಾಶ್ರಿತರು ಚಳಿ ತಾಳಲಾರದೆ ಸಾವನಪ್ಪಿದ್ದಾರೆ. ಅದರಂತೆಯೇ ಇಂದು ಒಬ್ಬ ವ್ಯಕ್ತಿಯು ಚಳಿ ತಾಳದೇ ಸಾವನ್ನಪ್ಪಿದ ಘಟನೆ ನಾಗರಿಕ ಸಮಾಜವನ್ನು ತಲೆತಗ್ಗಿಸುವಂತೆ ಮಾಡಿದೆ.

ಈ ಕೂಡಲೇ ಇದಕ್ಕೆ ಕಾರಣರಾದ ಸಿಬ್ಬಂದಿ ವರ್ಗದವರನ್ನು ನಿರ್ದಾಕ್ಷಿಣ್ಯವಾಗಿ ಸೇವೆಯಿಂದ ಹೊರಹಾಕಿ ಬಡ ರೋಗಿಗಳಿಗೆ ನೊಂದವರಿಗೆ ನ್ಯಾಯ ದೊರಕಿಸಿ ಕೊಡಲು ಸರ್ಕಾರ ಮುಂದಾಗಬೇಕು.

ಚಳಿಗಾಲದಲ್ಲಿ ಹೊದಿಕೆ ವಿತರಣೆ ಮಾಡಲು ಈಗಾಗಲೇ ಸಂಘ ಸಂಸ್ಥೆಗಳು ಮುಂದಾಗಿ ಈ ಕೆಲಸ ಮಾಡುತ್ತಿದ್ದು ಮಹಾನಗರ ಪಾಲಿಕೆ ಕಣ್ಮುಚ್ಚಿ ಕುಳಿತಿದೆ. ನಿರಾಶ್ರಿತರ ಅಭಿವೃದ್ಧಿ ಮಂಡಲಿಯವರು ನಿದ್ರೆಯಲ್ಲಿದ್ದಾರೆಯೇ ಎಂದು ಸಾರ್ವಜನಿಕರು ಪ್ರಶ್ನೆ ಕೇಳುತ್ತಿದ್ದಾರೆ.


–ವಿಕ್ರಂ ಅಯ್ಯಂಗಾರ್, ಅಧ್ಯಕ್ಷರು, ಕೆಎಂಪಿ ಕೆ ಚಾರಿಟಬಲ್ ಟ್ರಸ್ಟ್, ಮೈಸೂರು.

■ ಶೋಕೇಸ್ ರಸ್ತೆಗಳಾಗಿರುವ ಪಾದಚಾರಿ ಮಾರ್ಗಗಳು

ಮಾನ್ಯರೆ,

ಮೈಸೂರಿನ ಪ್ರಮುಖ ರಸ್ತೆಗಳು ಪಾದಚಾರಿ ಮಾರ್ಗಗಳು ಶೋರೂಮ್ ರಸ್ತೆಗಳಾಗಿರುವುದನ್ನು 'ಮೈಸೂರು ಮಿತ್ರ' ಮುಖ ಪುಟದ ಮುಖ್ಯ ಶೀರ್ಷಿಕೆಯಲ್ಲಿಯೇ ಬೆಳಕಿಗೆ ತಂದಿದೆ. ಯಾವುದೇ ರಸ್ತೆಯೂ ಇಂದು ಇದಕ್ಕೆ ಹೊರತಾಗಿಲ್ಲ. ಮೈಸೂರಿನ ಮುಖ್ಯ ಬಸ್ ನಿಲ್ದಾಣಕ್ಕೆ ಸಂಗಮ್ ಟಾಕೀಸಿನ ಕಡೆಯಿಂದ ಹೋಗುವಾಗ ಆ ವೃತ್ತವೇ ಹಣ್ಣು ಮತ್ತು ಹೂವಿನ ಅಂಗಡಿಗಳಿಂದ ಮುಚ್ಚಿ ಹೋಗಿದೆ. ಸ್ವಲ್ಪ ಮುಂದೆ ಹೋದರೆ ಚರ್ಚಿನ ತಿರುವಿನಿಂದ ಬಸ್ ನಿಲ್ದಾಣದವರೆಗೆ ಇರುವುದೇ 9 ಅಡಿ ರಸ್ತೆ ಅದರಲ್ಲಿ ಆಟೋಗಳ ಸಾಲಿಗಾಗಿ ಯಾರೋ ಪುಣ್ಯಾತ್ಮ ಇಂಜಿನಿಯರ್ 6 ಅಡಿ ಗುರುತು ಮಾಡಿ ಚೈನ್ ಹಾಕಿದ್ದಾನೆ. ಉಳಿದ 3 ಅಡಿಯಲ್ಲಿ ರಸ್ತೆಯ ಕಡೆಯ 2 ಅಡಿಯನ್ನು ಸಂಪೂರ್ಣ ರಸ್ತೆ ಬದಿ ವ್ಯಾಪಾರಿಗಳು ವಿವಿಧ ವಸ್ತುಗಳ, ಬಟ್ಟೆ, ಮಹಿಳೆಯರ ಉಡುಪು ಮತ್ತಿತರೆ ಪ್ರಸಾದನ ಸಾಮಗ್ರಿಗಳ ಅಂಗಡಿಗಳನ್ನು ಬಸ್ ಸ್ಟ್ಯಾಂಡ್ ತಲುಪುವವರೆಗೂ ಉದ್ದಕ್ಕೂ ಹರಡಿಕೊಂಡು ತಾವು ಜಾಗ ಹಿಡಿದು ನಿಂತಿರುತ್ತಾರೆ. ಉಳಿದ ಒಂದು ಅಡಿಯಲ್ಲಿ ಸಾವಿರಾರು ಜನ ಬಸ್ಸುಗಳಿಗೆ ನುಗ್ಗುತ್ತಿರುತ್ತಾರೆ. ಬಸ್ಸಿಳಿದವರು ಅದೇ ದಾರಿಯಲ್ಲಿ ಎದುರು ಬಂದವರನ್ನು ನೂಕಿಕೊಂಡೇ ಬರಬೇಕು. ಹೆಂಗಸರು ಮಕ್ಕಳ ಪಾಡು ನಾಯಿಪಾಡು. ವಯಸ್ಸಾದವರು ಆ ದಾರಿಯಲ್ಲಿ ನುಗ್ಗುವುದು ಸಾಧ್ಯವೇ ಇಲ್ಲ. ಬಸ್ಸು ಹಿಡಿಯಲು ದಾವಂತದಿಂದ ಬಂದವರು ಕೂಗಾಡುತ್ತ ಓಡುತ್ತಾರೆ. ಇದು ಮಹಾ ನಗರಪಾಲಿಕೆಯ ಕುರುಡು ಕಾರ್ಯವೈಖರಿಗೆ ಅಥವಾ ಎಲ್ಲವನ್ನು ಕಮಾಯಿಗೆ ಮಾಡಿಕೊಳ್ಳುವ ಅಧಿಕಾರಿಗಳ ದುಷ್ಕೃತ್ಯಕ್ಕೆ ಹಿಡಿದ ದಿನ ನಿತ್ಯದ ಕೈಗನ್ನಡಿ. ನನಗೆ ಇನ್ನು ಅಚ್ಚರಿಯಾಗುವುದೆಂದರೆ ಕರ್ನಾಟಕ ಸರಕಾರ ಈ ವ್ಯವಸ್ಥೆಯನ್ನು ರೂಪಿಸಿದ ಮಹಾ ನಗರಪಾಲಿಕೆ ಅಧಿಕಾರಿಗಳಿಗೆ ಭಾರತ ರತ್ನ ಪ್ರಶಸ್ತಿಗೆ ಯಾಕಿನ್ನೂ ಶಿಫಾರಸ್ಸು ಮಾಡಿಲ್ಲವೆಂಬುದು.

–ಕೆ.ಎ. ಸಿದ್ದಲಿಂಗಪ್ಪ, ಮೈಸೂರು.



ಕೆಬಿಜೆಯವರ

ಘೂಮಂತ್ರ... ಘೂಮಂತ್ರ... ಘೂಮಂತ್ರ...

ಕೆಆರ್‌ಎಸ್ ಬೃಂದಾವನ ಉದ್ಯಾನವನಕ್ಕೆ ಇಂತಹ ದುರ್ಗತಿ ಒದಗಿಬರಬಾರದು...!

ಪ್ರತಿ ಬಾರಿ ಕ್ರಿಸ್‌ಮಸ್ ಹಿಂದೆಯೇ ಹೊಸ ವರ್ಷದ ಸಂಭ್ರಮವೂ ಕಾದಿರುತ್ತದೆ. ಕ್ರಿಸ್‌ಮಸ್ ಕೇಕ್ ಕತ್ತರಿಸುವುದಕ್ಕೂ ಮುನ್ನವೇ ಹೊಸ ವರ್ಷವು ನಿಮ್ಮನ್ನು ವಿಸ್ಕಿ ಬಾಟಲುಗಳೊಂದಿಗೆ ಪಾರ್ಟಿಗೆ ಕೈಬೀಸಿ ಕರೆಯುತ್ತದೆ. ಹೊಸ ವರ್ಷದ ಪ್ರಸ್ತಾಪಗಳ ಶುಭ ಸುದ್ದಿಗಳೊಂದಿಗೆ ಮೋಜು ಮಸ್ತಿ ಪ್ರಾರಂಭವಾಗಿ, ಕುಡಿತದ ಮತ್ತಲ್ಲಿ ಜಗಳ ಹಾಗೂ ರಸ್ತೆ ಅವಘಡಗಳು, ಅಂತೂ ಕೆಟ್ಟ ಸಂಗತಿಯೊಂದಿಗೆ ಕೊನೆಗೊಳ್ಳುತ್ತದೆ.

ಕ್ರಿಶ್ಚಿಯನ್ ಕ್ಯಾಲೆಂಡರ್‌ನ ಈ ಎರಡು ದಿನಗಳು ಹಣವನ್ನ ಖರ್ಚು ಮಾಡಲು ಹಾಗೂ ಸಮಯ ಕಳೆಯಲು ಸಜ್ಜಾಗಿರುವ ವಿದ್ಯಾರ್ಥಿಗಳು ಹಾಗೂ ಯುವ ಸಮೂಹಕ್ಕೆ ಬಹುದೊಡ್ಡ ಆಕರ್ಷಣೆಯಾಗಿವೆ. ಕೆಲವು ಹಿರಿಯರಿಗೆ ಮನೆಯೇ ಕ್ಷೇಮಕರವಾಗಿದ್ದು ಇನ್ನು ಕೆಲ ಹೆಣ್ಣು ಮಕ್ಕಳ ಈಗಿನ ಈ ಎರಡು ದಿನಗಳ ಆಚರಣೆ ನೋಡಿದರೆ ಮನೆಯೇ ಆರಾಮದಾಯಕ.

ಕೆಲವರು ತಮ್ಮ ಸ್ನೇಹಿತರ ಜೊತೆ ತಮ್ಮಿಷ್ಟದ ಸ್ಥಳಗಳಿಗೆ ಹೋಗುತ್ತಾರೆ. ಕ್ಲಬ್ಬುಗಳ ಸದಸ್ಯರಾಗಿರುವವರು ಸಾಮಾನ್ಯವಾಗಿ ಅದಕ್ಕೆ ತಕ್ಕಂತಹ ವೇಷಭೂಷಣ, ಧಿರಿಸುಗಳೊಂದಿಗೆ ಲಗ್ಗೆಯಿಟ್ಟು ಅಲ್ಲಿರುವ ಆಕರ್ಷಕ ನಾರಿಮಣಿಯರಲ್ಲಿ ಮುಜುಗರ ಉಂಟುಮಾಡುತ್ತಾರೆ. ಅದು ಹಾಗಿರಲಿ.

ನನ್ನ ವಿಚಾರಕ್ಕೆ ಬಂದರೆ, ಆರೋಗ್ಯ, ವಯಸ್ಸು ಹಾಗೂ ನಾನು ಯುವಕನಾಗಿದ್ದಾಗ ಇದ್ದಂತಹ ಸ್ನೇಹಿತರ ಅಲಭ್ಯತೆ, ಜೊತೆಗೆ ನಿರಾಸಕ್ತಿಯ ಕಾರಣ ಮನೆಯಲ್ಲಿಯೇ ಇರಲು ನಿರ್ಧರಿಸಿದೆ!

ಆದರೆ, ಈ ಹೊಸ ವರ್ಷ ಒಂದು ಅಚ್ಚರಿ ನಡೆಯಿತು. ಸ್ನೇಹಿತರೊಬ್ಬರು, ನನ್ನ ಮುಂದೆ ಮೈಸೂರು ರಾಜರ ಆಳ್ವಿಕೆಯ ಭವ್ಯತೆಯನ್ನು ಒಳಗೊಂಡಿರುವ ಕೃಷ್ಣರಾಜ ಸಾಗರದ (ಕೆಆರ್‌ಎಸ್) ಪಾರಂಪರಿಕ ಬೃಂದಾವನ ಹೋಟೆಲ್ಲಿಗೆ ಹೋಗೋಣವೇ ಎಂಬ ಪ್ರಸ್ತಾಪವಿಟ್ಟರು.

ಹಿಂದೆಲ್ಲಾ ಗಣ್ಯಾತಿಗಣ್ಯರು, ಐಷಾರಾಮಿಯಾಗಿ ಅಲ್ಲಿ ಕುಳಿತು ಮೋಜು ಮಸ್ತಿಯೊಂದಿಗೆ ಕ್ರಿಸ್ಮಸ್ ಮತ್ತು ಹೊಸ ವರ್ಷಾಚರಣೆಗಳಲ್ಲಿ ಸಂಭ್ರಮಪಡುತ್ತಾ, ತಮ್ಮದೇ ಲೋಕದಲ್ಲಿ ವಿಹರಿಸುತ್ತಿದ್ದರು. ಪ್ರಸಿದ್ಧ ಬೃಂದಾವನ ಉದ್ಯಾನವನ ಹೊರತಾಗಿಯೂ ಹೋಟೆಲ್ ತನ್ನ ಗತವೈಭವವನ್ನು ಉಳಿಸಿಕೊಂಡಿದೆ ಎಂಬ ಅತೀವ ವಿಶ್ವಾಸದಿಂದಲೇ ಮರು ಯೋಚನೆ ಮಾಡದೆ ಬಹಳ ನಿರೀಕ್ಷೆಯಿಂದ ಒಪ್ಪಿಕೊಂಡೆ.

ಅದೊಂದು ಆಹ್ಲಾದಕರ ಸಂಜೆ. ತಂಗಾಳಿಯ ಮೊರೆತವಿದ್ದರೂ ಹಿತವಾಗಿತ್ತು. **ಅಲ್ಲಿಗೆ ತಲುಪುತ್ತಿದ್ದಂತೆ ಅತ್ತಿತ್ತ ಕಣ್ಣಾಡಿಸುತ್ತೇನೆ. ಅರೆ, ಉದ್ಯಾನವನದಲ್ಲಿ ಹೂವುಗಳೇ ಇಲ್ಲ. ಸ್ವಾಭಾವಿಕ ಸೌಗಂಧವಂತೂ ಇಲ್ಲವೇ ಇಲ್ಲ.**



ದಂತಕಥೆಯೊಂದಿಗೆ ಕೃಷ್ಣರಾಜ ಒಡೆಯರ್ IVರ ಭಾವಚಿತ್ರ: (ನಾಲ್ವಡಿ ಕೃಷ್ಣರಾಜ ಒಡೆಯರ್ IV (ಜೂನ್ 4, 1884 – ಆಗಸ್ಟ್ 3, 1940)

ಮಹಾರಾಜ ಕೃಷ್ಣರಾಜ ಒಡೆಯರ್ IV ಮೈಸೂರು ಸಾಮ್ರಾಜ್ಯದ 24ನೇ ಮಹಾರಾಜ. ಅವರನ್ನು ಸಾಮಾನ್ಯವಾಗಿ "ಆಧುನಿಕ ಮೈಸೂರಿನ ಪಿತಾಮಹ" ಎಂದು ಪರಿಗಣಿಸಲಾಗುತ್ತದೆ. ಅವರ ಮರಣದ ಸಮಯದಲ್ಲಿ, ಅವರು ವಿಶ್ವದ ಶ್ರೀಮಂತ ರಾಜರಲ್ಲಿ ಒಬ್ಬರಾಗಿದ್ದರು. 1940ರಲ್ಲಿ US $ 400 ಮಿಲಿಯನ್ ಮೌಲ್ಯದ ವೈಯಕ್ತಿಕ ಸಂಪತ್ತು ಅವರ ಬಳಿ ಇತ್ತು ಎಂದು ಅಂದಾಜಿಸಲಾಗಿದೆ. ಅವರ ಆಳ್ವಿಕೆಯಲ್ಲಿ ಮೈಸೂರು ಏಷ್ಯಾದಲ್ಲೇ ಜಲವಿದ್ಯುತ್ ಉತ್ಪಾದಿಸುವ ಮೊದಲ ಭಾರತೀಯ ರಾಜ್ಯವಾಯಿತು ಮತ್ತು ಬೆಂಗಳೂರು ಬೀದಿದೀಪಗಳನ್ನು ಹೊಂದಿರುವ ಏಷ್ಯಾದ ಮೊದಲ ನಗರವಾಗಿತ್ತು. ಅವರು 11ನೇ ನವೆಂಬರ್ 1911 ರಂದು KRS ಅಣೆಕಟ್ಟೆಗೆ ಅಡಿಪಾಯ ಹಾಕಿದರು. ಈ ಅಣೆಕಟ್ಟನ್ನು ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲಾಯಿತು ಮತ್ತು 1924ರಲ್ಲಿ ಅದು ಪೂರ್ಣಗೊಂಡಿತು.

ಹಲವು ದಶಕದ ಹಿಂದೆ ಅಂದರೆ, 1958ರಲ್ಲಿ ನಾನು ಪ್ರಥಮ ಬಾರಿಗೆ ಬೃಂದಾವನ ಉದ್ಯಾನವನಕ್ಕೆ ಭೇಟಿ ನೀಡಿದ್ದಾಗ, ಅಲ್ಲಿದ್ದ ಮಲ್ಲಿಗೆ ಮಾತ್ರವಲ್ಲ ಗುಲಾಬಿ ಮತ್ತು ಸಂಪಿಗೆ ಹೂವುಗಳ ಸುಗಂಧ ಪರಿಮಳವನ್ನು ಗಾಳಿಯಲ್ಲಿ ಆಸ್ವಾದಿಸಿದ್ದೆ. ಆ ಕಾಲದಲ್ಲೇ ದೇಶ ಮಾತ್ರವಲ್ಲ ವಿದೇಶಗಳಲ್ಲೂ ಬೃಂದಾವನ ಉದ್ಯಾನವನ ಹೆಸರು ಮಾಡಿತ್ತು. ಏಕೆಂದರೆ, ವಿ.ಶಾಂತರಾಂ ನಿರ್ದೇಶನದ **'ಜನಕ್ ಜನಕ್ ಪಾಯಲ್ ಬಾಜೇ'** (Jhanak Jhanak Payal Baaje) ಹಿಂದಿ ಚಿತ್ರದಲ್ಲಿ ಸಂಧ್ಯಾ ಮತ್ತು ಗೋಪಿಕೃಷ್ಣ ಅಭಿನಯದ ನೃತ್ಯ ಹಾಗೂ ಇತರ ಸನ್ನಿವೇಶಗಳ ಚಿತ್ರೀಕರಣ ಇಲ್ಲಿಯೇ ನಡೆದಿತ್ತು. ಅದು ಎಷ್ಟರ ಮಟ್ಟಿಗೆ ಜನಪ್ರಿಯವಾಗಿತ್ತೆಂದರೆ, ಈ ಚಿತ್ರದ ಒಂದು ಸನ್ನಿವೇಶವನ್ನು ಮೈಸೂರು ಅರಮನೆಯ ಉತ್ತರ ಭಾಗದ ಜಯರಾಮ–ಬಲರಾಮ ಕಮಾನು ಗೇಟಿನ ಒಳಭಾಗದ ಗೋಡೆಯಲ್ಲಿ ಚಿತ್ರಕಲೆ ಮೂಡಿಸಲಾಗಿತ್ತು. ನಂತರದ ವರ್ಷಗಳಲ್ಲಿ ಮಾಸಿಹೋದ ಚಿತ್ರ ಕಲೆಯನ್ನು ಸರಿಪಡಿಸುವ ಹೆಸರಿನಲ್ಲಿ ಅವರು ಹಿಂದೆ ಇದ್ದ ಚಿತ್ರಕಲೆಯನ್ನು ನಾಶಪಡಿಸಿದ್ದರು. ಹಾಗಾಗಿ ಈಗ ಅದು ಇಲ್ಲವಾಗಿದೆ.

ಆನಂತರ, ಬೃಂದಾವನ ಉದ್ಯಾನವನವು ಒಂದು ಪ್ರಸಿದ್ಧ ಆಕರ್ಷಕ ಪ್ರವಾಸಿ ತಾಣವಾಗಿ ಪರಿಣಮಿಸಿತು. ಹಾಗೂ ಹಿಂದಿನ ಕಾಶ್ಮೀರದ ಹಾಗೆ ಎಲ್ಲಾ ಭಾಷೆಗಳ ಚಿತ್ರಗಳ ಹೊರಾಂಗಣ ಚಿತ್ರೀಕರಣಕ್ಕಾಗಿ ಇದೊಂದು ನೆಚ್ಚಿನ ತಾಣವಾಗಿತ್ತು.

ದುಃಖಕರ ಸಂಗತಿ ಏನು ಗೊತ್ತಾ, ಈ ಎರಡು ಸ್ಥಳಗಳ ಆಕರ್ಷಣೆ ಈಗ ಚಿತ್ರ ನಿರ್ಮಾಪಕರಲ್ಲಿ ಇಲ್ಲವಾಗಿದೆ. ಹೆಸರಿಗೆ ಮಾತ್ರ ಇದು ಬೃಂದಾವನ ಉದ್ಯಾನವನವಾಗಿದ್ದರೆ, ಕಾಶ್ಮೀರವು ಉಗ್ರಗಾಮಿಗಳ ಸ್ವರ್ಗವಾಗಿದೆ. ಅದಕ್ಕಾಗಿ ನಮ್ಮ ರಾಜಕಾರಣಿಗಳಿಗೆ ವಂದಿಸೋಣ!

ವಿಶ್ವ ವಿಖ್ಯಾತ ಕೃಷ್ಣರಾಜಸಾಗರ ಅಣೆಕಟ್ಟೆಯ ನಿರ್ಮಾಣದ ಕೀರ್ತಿಯು ರಾಜರ್ಷಿ ಎಂದೇ ಮಹಾತ್ಮ ಗಾಂಧೀಜಿಯವರಿಂದ ಕರೆಯಲ್ಪಡುತ್ತಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಅವರ ಅವಧಿಯಲ್ಲಿ ದಿವಾನರಾಗಿದ್ದ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರಿಗೆ ಸಲ್ಲುತ್ತದೆ. ಅದೇ ರೀತಿ. **ನಮಗೆ ಬೃಂದಾವನ ಉದ್ಯಾನವನವನ್ನು ಕಲ್ಪಿಸಿದ ಕೀರ್ತಿ, ಮೈಸೂರಿನ ಮತ್ತೋರ್ವ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರಿಗೆ ಸಲ್ಲುತ್ತದೆ.** ಇವರು ಈ ಬೃಂದಾವನವನ್ನು ಕಾಶ್ಮೀರದ ಶ್ರೀನಗರದ ದಾಲ್ ಸರೋವರದ ಬಳಿಯ ಮೊಗಲ್‌ರ ಶೈಲಿಯ ಶಾಲಿ ಮಾರ್ ಗಾರ್ಡನ್ ಮಾದರಿಯಲ್ಲಿ ಅಭಿವೃದ್ಧಿಪಡಿಸಿದರು. ಕೆಲವು ವರ್ಷಗಳ ಹಿಂದೆ, ನಾನು ಈ ಶಾಲಿ ಮಾರ್ ಉದ್ಯಾನವನಕ್ಕೆ ಭೇಟಿ ನೀಡಿದ್ದಾಗ ಹತಾಶೆಗೊಂಡಿದ್ದೆ. ಹೊಸ ವರ್ಷದ ದಿನದಂದು ಬೃಂದಾವನದ ಸ್ಥಿತಿ ಕಂಡು ತೀವ್ರ ನಿರಾಶೆಗೊಂಡೆ.

ಒಂದು ಪುಷ್ಪ ಉದ್ಯಾನವನ ಜೀವಂತ ಜೈವಿಕ ಸ್ಥಿತಿ. ಇದರ ಬಗ್ಗೆ ಪ್ರತಿದಿನ ಅತ್ಯಂತ ಮುತುವರ್ಜಿ ವಹಿಸಬೇಕಾಗುತ್ತದೆ. ಅವುಗಳನ್ನು ನಿರ್ವಹಿಸಲೆಂದೇ ನಾವು ಸೂಕ್ತ ಅರ್ಹ ತೋಟಗಾರಿಕೆ ತಜ್ಞರ ಹೊಂದಿದ್ದೇವೆ. ಇವರು ಸಹ ಪರಿಣಿತಿ, ಜೊತೆಗೆ ಸೌಂದರ್ಯ ಪ್ರಜ್ಞೆವುಳ್ಳವರಾಗಿದ್ದು, ಹೂವಿನ ಹಾಸು (flower beds), ಹುಲ್ಲು ಹಾಸುಗಳು ಹಾಗೂ ಜಲ ಮೂಲಗಳನ್ನು ಸೃಷ್ಟಿಸುವಂತಹವರಾಗಬೇಕು. **ಒಂದು ವೇಳೆ, ಉದ್ಯಾನವನಕ್ಕಿಂತ ಅವರು ಹಣವನ್ನೇ ಹೆಚ್ಚು ಪ್ರೀತಿಸಿದರೆ, ನೀವು ಉದ್ಯಾನವನ್ನು ನೋಡಲಾಗದು.** ಬದಲಿಗೆ "ಕೆಲಸ ಪ್ರಗತಿಯಲ್ಲಿದೆ" ಎಂಬ ಫಲಕವನ್ನು ನೋಡುತ್ತೀರಿ. ಬೃಂದಾವನ ಉದ್ಯಾನವನಕ್ಕೆ ಆಯವ್ಯಯದಲ್ಲಿ ಹೆಚ್ಚಿನ ಹಣವನ್ನು ಮೀಸಲಿಡುವುದರ ಬಗ್ಗೆ ಪತ್ರಿಕೆಗಳಲ್ಲಿ ಓದುತ್ತೇವೆ. ಆದರೆ ವಾಸ್ತವದಲ್ಲಿ ಇಲ್ಲಿ ನಾವು ಯಾವುದೇ ಬದಲಾವಣೆಯನ್ನು ಕಾಣುವುದಿಲ್ಲ. ಈ ಬಾರಿ ನನ್ನ ಗಮನಕ್ಕೆ ಬಂದ ಒಂದೇ ಒಂದು ಬದಲಾವಣೆ ಎಂದರೆ, ಇಲ್ಲಿನ ಕಾಲು ದಾರಿಗಳಿಗೆ ಕಾಂಕ್ರೀಟ್ ಬ್ಲಾಕುಗಳನ್ನು ಹಾಕಿರುವುದು.

ಇದು ಫಲಪುಷ್ಪ ಪ್ರದರ್ಶನಗಳ ಋತುಮಾನವಾದರೂ ಬೃಂದಾವನ ಉದ್ಯಾನವನ ನೋಡಲು ಬಂಜರಾಗಿತ್ತು. ಹೂವು ಹಾಸುಗಳು ಬರೀ ಮಣ್ಣಿನ ರಾಶಿಯಾಗಿತ್ತು. ಮುಂಚೆ ಇದ್ದಂತಹ ಮನಸೆಳೆಯುವ ತುಂತುರು ನೀರು ಹನಿಯ ಕಾರಂಜಿಗಳೂ ಇರಲಿಲ್ಲ.

ಆರ್.ಗುಂಡೂರಾಯರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ, ಅತ್ಯಂತ ಆಕರ್ಷಕ "ಸಂಗೀತ ಕಾರಂಜಿ"ಯನ್ನು ಪರಿಚಯಿಸಿದ್ದರು. ಜೊತೆಗೆ 65 ಎಕರೆ ವಿಸ್ತಾರವಾದ ಉದ್ಯಾನವನದಲ್ಲೆಡೆ ಸಂಗೀತ ನಾದವನ್ನು ಹೊಮ್ಮಿಸಿದ್ದರು. ಇವುಗಳ ಹೊರತಾಗಿ, ಬೃಂದಾವನದಲ್ಲಿ, ಪ್ರಾಣಿ–ಪಕ್ಷಿಗಳ ಸಸ್ಯಾಲಂಕರಣ ಕಲಾಕೃತಿ ಕೆತ್ತನೆಗಳಿದ್ದವು. ಆಕರ್ಷಕ ಜರಿಯ ಎರಡೂ ಕಡೆ ನೀರಿನ ಜೆಟ್‌ಗಳಿದ್ದವು ಹಾಗೂ ಪಿಂಗ್‌ಪಾಂಗ್ ಚೆಂಡುಗಳು ನೀರಿನ ಜೆಟ್ಟುಗಳ ತುದಿಯಲ್ಲಿ ನೃತ್ಯ ಮಾಡುತ್ತಿದ್ದವು. ವಿಶೇಷವಾಗಿ ಮಕ್ಕಳಿಗೆ ಇದೊಂದು ಮಹದಾಶ್ಚರ್ಯ ಹಾಗೂ ವಿಶೇಷ ಆಕರ್ಷಣೆಯಾಗಿತ್ತು. ಈಗ ಯಾವುದೂ ಇಲ್ಲ. ಕೆಲಸ ಪ್ರಗತಿಯಲ್ಲಿದೆ!

ಸಂಜೆ ಹೊತ್ತು ಮಂದ ಬೆಳಕಿನ ದೀಪಾಲಂಕಾರವಿತ್ತು. ಬಹುಶಃ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್‌ರವರು ಡಿ.26ರಂದು ನಿಧನ ಹೊಂದಿದ ಪ್ರಯುಕ್ತ ಅವರಿಗೆ ರಾಷ್ಟ್ರೀಯ ಶೋಕಾಚರಣೆ ಘೋಷಿಸಿದ ಹಿನ್ನೆಲೆಯಲ್ಲಿ ಇರಬಹುದು ಎಂದುಕೊಂಡೆ. **ಏನಾದರಾಗಲಿ, ಬೃಂದಾವನ ಉದ್ಯಾನವನವು 1980ರ ದಶಕ ಹಾಗೂ ಅದಕ್ಕಿಂತ ಮುಂಚೆ ಇದ್ದ ರೀತಿಯಲ್ಲಿ ಇಲ್ಲ. ವಾಹನ ನಿಲುಗಡೆ ಮತ್ತು ಪ್ರವೇಶದ್ವಾರಗಳಲ್ಲಿ ಅವ್ಯವಸ್ಥೆ ತಾಂಡವವಾಡುತ್ತಿದೆ.**

ಇಷ್ಟಾದರೂ ಪ್ರವಾಸಿಗರು ಇಲ್ಲಿಗೆ ಏಕೆ ಬರುತ್ತಾರೆ ಎಂದು ಯೋಚಿಸಿದಾಗ ದಾರಿ ತಪ್ಪಿ ಇಲ್ಲ ಗತವೈಭವದ ಅನುಭವದ ಆಧಾರದ ಮೇಲೆ ಬಂದಿರಬಹುದು. ಆದರೆ, ಇಲ್ಲಿ ಅವರಿಗೆ ಆಗುವ ಅನುಭವದಿಂದ ಮತ್ತೆಂದು ಅವರು ಇಲ್ಲಿಗೆ ಬರುವ ಧೈರ್ಯ ಮಾಡಲಾರರು ಇಲ್ಲವೇ ಬೃಂದಾವನ ಉದ್ಯಾನವನಕ್ಕೆ ಹೋಗಲೇಬೇಕು ಎಂದು ಯಾರಿಗೂ ಶಿಫಾರಸ್ಸು ಮಾಡಲಾರರು. ಇಲ್ಲಿ ಅಣೆಕಟ್ಟೆ ಇದೆ. ಯಥೇಚ್ಛವಾಗಿ ನೀರೂ ಇದೆ. ಆದರೆ ಹುಲ್ಲು ಹಾಸು (Lawn) ಮಾತ್ರ ಒಣಗಿದೆ.

ಉದ್ಯಾನವನದ ಸಮರ್ಪಕ ಹಾಗೂ ಜವಾಬ್ದಾರಿಯುತ ನಿರ್ವಹಣೆ ಇಲ್ಲವಾಗಿದೆ. ಅತಿಯಾದ ರಾಜಕಾರಣ ಮತ್ತು ಬೃಂದಾವನ ಉದ್ಯಾನವನದ ಮೂಲಕ ಹಣ ಮಾಡುವ ದುರಾಸೆಯೇ ಕಾರಣವಾಗಿರಬಹುದು.

ಬೃಂದಾವನ ಉದ್ಯಾನವನದ ಹಣೇಬರಹವನ್ನ ನೋಡಿದ ಮೇಲೆ, ಇನ್ನು ಪ್ರವೇಶ ರಸ್ತೆಗಳ ದುಸ್ಥಿತಿ, ಶುಲ್ಕ ಸಂಗ್ರಹಕಾರರು (Toll Collectors) ಜೊತೆಗೆ, ವಾಹನ ನಿಲುಗಡೆ ಸ್ಥಳಗಳಲ್ಲಿ ಶುಲ್ಕ ವಸೂಲು ಮಾಡುವವರ ಶೋಷಣಾ ಪೂರ್ವಕ ವರ್ತನೆ, ರಸ್ತೆ ಬದಿಯ ಅಂಗಡಿ ಹಾಗೂ ನಾನಾ ತಿನಿಸುಗಳ ಮಾರಾಟ ಮಳಿಗೆಗಳ ಕ್ರಮಬದ್ಧವಲ್ಲದ ಅಸ್ತವ್ಯಸ್ತ ಸ್ಥಿತಿ, ಪರಿಸರವನ್ನು ನೋಡಿದರೆ ಆ ಸ್ಥಳದಿಂದ ಆದಷ್ಟು ಬೇಗ ಹೊರಟು ಬಿಡೋಣ ಎಂದು ಯಾರೊಬ್ಬರಿಗಾದರೂ ಅನ್ನಿಸದೆ ಇರದು.

ನನಗೆ ತಿಳಿದು ಬಂದಂತೆ ಈಗ ಪ್ರವೇಶದ್ವಾರದ ಶುಲ್ಕ ಸಂಗ್ರಹ (gate collection) ತುಂಬಾ ಚೆನ್ನಾಗಿದ್ದು, ಅದರಿಂದ ಬರುವ ಆದಾಯದಿಂದಲೇ ಉದ್ಯಾನವನವನ್ನು ವರ್ಷದ ಯಾವುದೇ ಕಾಲಮಾನದಲ್ಲೂ – ಬೇಸಿಗೆ, ಮುಂಗಾರು, ಚಳಿಗಾಲ. ಸುಸ್ಥಿತಿಯಲ್ಲಿ ನಿರ್ವಹಿಸಬಹುದು. ಆದರೆ...

ಮಾರನೆಯ ದಿನ ಬೆಳಿಗ್ಗೆ ನಾನು ರಾಯಲ್ ಆರ್ಕಿಡ್ ಬೃಂದಾವನ್ ಗಾರ್ಡನ್ ಪ್ಯಾಲೆಸ್ ಮತ್ತು ಸ್ಪಾ ಹೋಟೆಲ್‌ನಿಂದ ಹೊರಟಾಗ ನನಗೆ ಹೊಳೆದ ಒಂದೇ ಒಂದು ಆಲೋಚನೆಯೆಂದರೆ: ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್‌ರವರ ಆತ್ಮ, ತಾವು ಅತ್ಯಂತ ಸೌಂದರ್ಯ ಪ್ರಜ್ಞೆ ಹಾಗೂ ಅತೀವ ಕಾಳಜಿಯಿಂದ ನಿರ್ಮಿಸಿದ್ದ ಉದ್ಯಾನವನಕ್ಕೆ ಒದಗಿ ಬಂದಿರುವ ದುಸ್ಥಿತಿಗೆ ಮರುಗುತ್ತಿರಬಹುದೇನೋ ಎಂಬುದು.

e-mail: voice @starofmysore.com







ಚಿತ್ರ 1: ಬೃಂದಾವನ ಉದ್ಯಾನವನದಲ್ಲಿ ಕೃಷ್ಣರಾಜ ಒಡೆಯರ್ IVರ ಅಮೃತಶಿಲೆಯ ಪ್ರತಿಮೆ. ಚಿತ್ರ 2: ಕೆಆರ್‌ಎಸ್ ಅಣೆಕಟ್ಟೆಯ ಗೋಡೆಯ ಮೇಲೆ ಕಾವೇರಿ ಮಾತೆಯ ಪ್ರತಿಮೆ. ಚಿತ್ರ 3 : ಹೋಟೆಲ್‌ನಿಂದ ಬಣ್ಣ ಬಣ್ಣದ ದೀಪಗಳಿಂದ ಕಂಗೊಳಿಸುವ ಅಣೆಕಟ್ಟೆ ಅಂದ. ಚಿತ್ರ 4: ಹಿನ್ನಲೆಯಲ್ಲಿ ಹೋಟೆಲ್ ಮತ್ತು ಮುಂಭಾಗದಲ್ಲಿ ಪಾರ್ಥೆನಿಯಂ ಕಳೆವುಳ್ಳ ಕುದುರೆ ಲಾಳ ಆಕಾರದ ಹಸಿರು ಹಾಸಿಗೆ. ಚಿತ್ರ 5: ಗತವೈಭವ: ಇಂಗ್ಲೆಂಡಿನಿಂದ ತರಿಸಿದ ಹೋಟೆಲ್‌ನ ಫ್ಲೋರಿಂಗ್ ಟೈಲ್ಸ್.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ತಿದ್ದುಪಡಿ

ದಿನಾಂಕ 16 ಜನವರಿ 2025ರ "ಮೈಸೂರು ಮಿತ್ರ" ದಿನಪತ್ರಿಕೆಯಲ್ಲಿ ಪುಟ 12ರಲ್ಲಿ ಪ್ರಕಟವಾಗಿದ್ದ ಜಾಹೀರಾತು 'MEGAVIN'- ವೆರಿಕೋಸ್ ವೇಯಿನ್ಸ್ ಚಿಕಿತ್ಸೆಯ ಸಂದರ್ಶನ ದಿನಾಂಕ ತಪ್ಪಾಗಿ 13 ಜನವರಿ 2025 ಎಂದಾಗಿದ್ದು, ಅದನ್ನು 17 ಜನವರಿ ಎಂದು ಓದಿಕೊಳ್ಳುವುದು ಮತ್ತು ಸಂಪರ್ಕಿಸಲು ಮೊಬೈಲ್ ನಂಬರಿಗೆ **9880462229** ಗೆ ಕರೆ ಮಾಡಿ **(ರಾಮಕೃಷ್ಣ ಹಾಸ್ಪಿಟಲ್, ವಿದ್ಯಾರಣ್ಯಪುರಂ, ಮೈಸೂರು)**

16ನೇ ವರ್ಷದ ಚಿರಸ್ಮರಣೆ



ನಿಧನ : 17.1.2009

ಯಜಮಾನ್ **ಎಲ್.ಲಿಂಗಪ್ಪ**ರವರು
ಕೆ.ಜಿ.ಕೊಪ್ಪಲು. ಮೈಸೂರು

ನೀವು ನಮ್ಮನ್ನು ಅಗಲಿ ಇಂದಿಗೆ 16 ವರ್ಷವಾಯಿತು. ನೀವು ತಂದೆಯಾಗಿ ಗುರುಗಳಾಗಿ ಕಲಿಸಿದ ಪಾಠ ನನಗೆ ಜೀವನದ ಪಾಠವಾಗಿದೆ. ನೀವು ನನಗೆ ವಹಿಸಿದ ಜವಾಬ್ದಾರಿಯನ್ನು ಮುಂದುವರೆಸಿಕೊಂಡು ಬಂದಿರುತ್ತೇನೆ. ನೀವು ತೋರಿಸಿಕೊಟ್ಟ ಮಾರ್ಗದಲ್ಲೇ ಮುನ್ನಡೆದು ಸದಾ ನಿಮ್ಮ ನೆನಪಲ್ಲಿರುವ

ಇಂತಿ ದುಃಖತಪ್ತರು
ಪತ್ನಿ ಮಾದಮ್ಮ, ಮಗ ಎಲ್.ಚಂದ್ರು ಮತ್ತು ಮಕ್ಕಳು

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಮೂಲ ಪತ್ರಗಳು ಕಳೆದಿದೆ

ಈ ಮುಖಾಂತರ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಶ್ರೀ ನಂದ ಕಿಶೋರ್ ಡಿ. ಬಿನ್ ಲೇಟ್ ಎಸ್.ಎ. ದೇವಪ್ಪ, ವಾಸ: ನಂ. 38, ಗ್ರೌಂಡ್ ಫ್ಲೋರ್, ಅಜ್ಜಯ್ಯನ ಹುಂಡಿ, ದಟ್ಟಗಳ್ಳಿ, ಮೈಸೂರು-570033 ಆದ ನಾನು ನನ್ನ ಮೂಲ ದಾಖಲೆಗಳಾದ 1) ಒ.ಎಸ್.ನಂ. 38/2005ರ ತೀರ್ಪು ಮತ್ತು ಡಿಕ್ರಿ 2) ದಿನಾಂಕ: 20-11-1991 ಸಂಖ್ಯೆ ಡಿ.ಜೆ.ಪಿ, ಕೆಎಲ್.ಆರ್.91-92ರ ಮೂಲ ಭೂ-ಪರಿವರ್ತನೆ ಆದೇಶ ಪ್ರತಿ. 3) ಸೈಟ್ ನಂ. 364/2 ರ ಮೂಲ ನಕ್ಷೆ. 4) ದಿನಾಂಕ: 31.12.1991 ಸಂಖ್ಯೆ ಎ.ಎಲ್.ಎನ್.ಎಸ್.ಆರ್.: 16/1991-92ರ ಮೂಲ ಭೂ-ಪರಿವರ್ತನೆ ಆದೇಶ ಪ್ರತಿ. 5) ಸೈಟ್ ನಂ. 2627/364/1 ರ ಮೂಲ ನಕ್ಷೆ. 6) ದಿನಾಂಕ: 24.02.1970ರ ಮೂಲ ಪತ್ರ [ಮದರ್ ಡೀಡ್] ದಸ್ತಾವೇಜು ಸಂಖ್ಯೆ 2727, ಎಸ್.ಎಲ್. ಸಂಖ್ಯೆ 2908. 7) ದಿನಾಂಕ: 24.09.2019ರ ಮೂಲ ವಿಭಾಗ ಪತ್ರ ದಸ್ತಾವೇಜು ಸಂಖ್ಯೆ 2881/19-20. ನಾನು ದಿನಾಂಕ: 08.01.2025 ರಂದು ಮೈಸೂರು ವಿಶ್ವವಿದ್ಯಾನಿಲಯ ನೌಕರರ ಸಹಕಾರ ಸಂಘ, ಮಹಾರಾಜ ಕಾಲೇಜು ಆವರಣದಿಂದ ನನ್ನ ನಿವಾಸ ನಂ. 38, ಗ್ರೌಂಡ್ ಫ್ಲೋರ್, ಅಜ್ಜಯ್ಯನ ಹುಂಡಿ, ದಟ್ಟಗಳ್ಳಿ, ಮೈಸೂರು ಇಲ್ಲಿಗೆ ಹೋಗುವ ಸಂದರ್ಭದಲ್ಲಿ ಮಹಾರಾಜ ಕಾಲೇಜು ಹತ್ತಿರ ಈ ಮೇಲೆ ಹೇಳಿದ ದಾಖಲೆಗಳು ಕಳೆದು ಹೋಗಿರುತ್ತವೆ, ಯಾರಿಗಾದರು ಸಿಕ್ಕಿದ್ದಲ್ಲಿ ನನ್ನ ಮೊಬೈಲ್ ಸಂಖ್ಯೆ **98862 20160** ಕರೆ ಮಾಡಿ ತಿಳಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತೇನೆ.

ಹಸಿರು ನಮ್ಮ ಉಸಿರು



ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ

ಗುರು ರಾಘವೇಂದ್ರ ಚಿತ್ರಮಂದಿರಕ್ಕೆ ಹೋಗುವ ರಸ್ತೆ, ಎಸ್.ಪಿ.ಆಫೀಸ್ ಹಿಂಭಾಗ, ಚನ್ನಿಮರದಮೋಳೆ, ಚಾಮರಾಜನಗರ-571313
e-mail: udachngr@gmail.com | ದೂರವಾಣಿ ಮತ್ತು ಫ್ಯಾಕ್ಸ್ ಸಂ: 08226-223166, +918226-295066

ಸಂಖ್ಯೆ:ಚಾರಾನ ಅಪ್ರಾ/ನಿ.ಹ.ಪ್ರ/2024-25 ದಿನಾಂಕ: 15-01-2025

ನಿಮ್ಮ ಮನೆಯ ಕನಸನ್ನು ಸಾಕಾರಗೊಳಿಸಿಕೊಳ್ಳಿ

ಅರ್ಜಿಗಳ ಆಹ್ವಾನ ಪ್ರಕಟಣೆ

ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಚಾಮರಾಜನಗರ-ಟಿ.ನರಸೀಪುರ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಚಾಮರಾಜನಗರ ಗ್ರಾಮದ ಸ.ನಂ.109/1. 110 ಮತ್ತು ಮಸಗಾಪುರ ಗ್ರಾಮದ ಸ.ನಂ. 9/1, 2ಎ, 2ಬಿ, 3ಎ, 3ಬಿ, 4, 5, 6, 7, 8ಎ, 8ಬಿ, 9, 10/1, 2ಎ, 11/3, 4, 12/3, 4, 5ಬಿ, 6 ರಲ್ಲಿ ಒಟ್ಟು 10ಎ-30 ಗುಂಟೆ ಹಾಗೂ ಮಸಗಾಪುರ ಗ್ರಾಮದ ಸ.ನಂ. 10/2ಬಿ, 3, 11/1, 2, 5ಎ, 5ಬಿ6, 12/1, 2, 5ಎ, 63/3 ರಲ್ಲಿ ಒಟ್ಟು 03ಎ-34 ಗು ಒಟ್ಟು 14 ಎಕರೆ-24 ಗುಂಟೆರಲ್ಲಿ "ವಸತಿ ಬಡಾವಣೆ"ಯನ್ನು ನಿರ್ಮಾಣ ಮಾಡುತ್ತಿದ್ದು, ಪ್ರಾಧಿಕಾರದ ಶೇ.50 ರಷ್ಟು ಪಾಲಿನ ವಿವಿಧ ಅಳತೆಯ ನಿವೇಶನಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ(ನಿವೇಶನಗಳ ಹಂಚಿಕೆ) ನಿಯಮ-1991ರ ನಿಯಮ 13(2)ರನ್ವಯ ವಿವಿಧ ಪ್ರವರ್ಗಗಳಡಿಯಲ್ಲಿ ನಿವೇಶನಗಳನ್ನು ಕಡಿಮೆ ದರದಲ್ಲಿ ನೀಡಲು ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿವೇಶನಾಕಾಂಕ್ಷಿಗಳು ನಿವೇಶನದ ಶೇ.10 ರಷ್ಟು ಪ್ರಾರಂಭಿಕ ಠೇವಣಿ, ನೋಂದಣಿ ಶುಲ್ಕ ಮತ್ತು ಅರ್ಜಿ ಶುಲ್ಕಗಳನ್ನು ಪಾವತಿಸಿ ನೋಂದಣಿ ಮಾಡಿಕೊಳ್ಳಲು ಕೋರಲಾಗಿದೆ.

ಕ್ರಸಂ	ನಿವೇಶನಗಳ ಅಳತೆ ಮೀಟರ್‌ಗಳಲ್ಲಿ	ಅರ್ಜಿ ಶುಲ್ಕ	ನೋಂದಣಿ ಶುಲ್ಕ	ನಿವೇಶನಗಳ ಒಟ್ಟು ಮೌಲ್ಯ	ಶೇ.10 ರಷ್ಟು ಮೊತ್ತ
01	6.0ಮೀ. x 8.3 ಮೀ	ರೂ. 500/-	ರೂ.100/-	ರೂ.6,69,810/-	ರೂ. 66,980/-
02	9.0ಮೀ x 15.0 ಮೀ	ರೂ. 500/-	ರೂ.250/-	ರೂ.18,15,750/-	ರೂ.1,81,575/-
03	12.0ಮೀ x 18.0 ಮೀ	ರೂ. 500/-	ರೂ.500/-	ರೂ. 29,05,200/-	ರೂ. 2,90,520/-

ಪ್ರಾಧಿಕಾರದಿಂದ ನಿವೇಶನಗಳಿಗೆ ನಿಗಧಿಪಡಿಸಿರುವ ದರ ಪ್ರತಿ ಚ.ಮೀ.ಗೆ ರೂ. 13,450/- (ಚದರ ಅಡಿಗೆ ರೂ. 1,250/-)

ನಿವೇಶನಾಕಾಂಕ್ಷಿಗಳು ಮೇಲಿನ ಪಟ್ಟಿಯಲ್ಲಿ ಹೇಳಿರುವಂತೆ ಶೇ.10%ರಷ್ಟು ಶುಲ್ಕ ಮತ್ತು ನೋಂದಣಿ ಶುಲ್ಕವನ್ನು ದಿ:28-02-2025 ರೊಳಗಾಗಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ ಇವರ ಹೆಸರಿನಲ್ಲಿ ಈ ಕೆಳಕಂಡ ಬ್ಯಾಂಕ್‌ನಲ್ಲಿ ಪಾವತಿಸಿ ನೋಂದಣಿ ಮಾಡಿಕೊಳ್ಳಲು ಕೋರಿದೆ. "ನೋಂದಣಿ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ".

Bank Name	Account Number	IFSC Code
Indian Bank Chamarajanagar	7949125160	IDIB000C008

ಸಹಿ/- ಶ್ರೀ ಮಹಮ್ಮದ್ ಅಸ್ಕರ್(ಮುನ್ನಾ)
ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ.

ಸಹಿ/- ಶ್ರೀಮತಿ ಸೀಮಾ ಹೆಚ್.ವಿ
ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ,

ಸಂ;ವಾಸಾಸಂಇ:ಚಾ.ನಗರ;557:2024-25

ಕೈಲಾಸ ಶಿವಗಣಾರಾಧನಾ ಆಹ್ವಾನ ಪತ್ರಿಕೆ



ಶ್ರೀ ಎನ್.ಎಸ್ ಬಸವರಾಜು
ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿಗಳು

ಇವರು ದಿನಾಂಕ 08-01-2025 ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ದಿನಾಂಕ 18.01.2025 ಶನಿವಾರ ಬೆಳಗ್ಗೆ 7 ಗಂಟೆಗೆ ಕುದೇರು ಮಠದ ಶ್ರೀ ಮ॥ ನಿ॥ ಪ್ರ॥ ಗುರುಶಾಂತಸ್ವಾಮಿಗಳವರ ದಿವ್ಯ ಪಾದಪೂಜೆಯನ್ನು ಹಾಗೂ ಶಿವೈಕ್ಯರ ಕೈಲಾಸ ಶಿವಗಣಾರಾಧನೆಯನ್ನು ಹೆಬ್ಯಾ ಗ್ರಾಮದ ನಮ್ಮ ತೋಟದ ಮನೆಯಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಪತ್ನಿ ಎನ್.ಬಿ.ಅಕ್ಕಮಹಾದೇವಿ ಕುಟುಂಬವರ್ಗದವರು ಹಾಗೂ ಹೆಬ್ಯಾ ಗ್ರಾಮಸ್ಥರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಮತ್ತು ಲೇಟ್ ಪಿ.ವಿ. ಮಂಜುನಾಥ್ ರವರ ವಾರಸುದಾರರಾದ 1] ಶ್ರೀಮತಿ ಸಿ.ಎಸ್. ಪುಷ್ಪಲತ, 2] ಶ್ರೀಮತಿ ಅಕ್ಷತ ಪಿ.ಎಂ. ಹಾಗೂ 3] ಶ್ರೀ ಪ್ರಮೋದ್ ಪಿ.ಎಂ. ರವರು ಒಟ್ಟಾಗಿ ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಪಿರಿಯಪಟ್ಟಣ ತಾಲ್ಲೂಕು, ಹಾರನಹಳ್ಳಿ ಹೋಬಳಿ, ಕೊಪ್ಪ ಗ್ರಾಮ, ಸ್ವತ್ತಿನ ಸಂಖ್ಯೆ 47/78, 47/79 & 47/79/1 & ಜಂಜರ್ ನಂ. 47/78, 47/79 & 47/79/1 ಹಾಲಿ ಕೊಪ್ಪ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟ ಪಿ.ಐ.ಡಿ ನಂ. 152200622098000098, 152200622098000099 & 152200622098000100, ಸ್ವತ್ತಿನ ಒಟ್ಟು ವಿಸ್ತೀರ್ಣ: 494.255 ಚದರ ಮೀಟರ್‌ಗಳು, ಇದರಲ್ಲಿರತಕ್ಕ ಕಟ್ಟಡವನ್ನೊಳಗೊಂಡ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ: ಸಿಂಡಿಕೇಟ್ ಬ್ಯಾಂಕ್ ರೈತರ ಸಹಕಾರ ಭವನ & ಶ್ರೀ ಮಾದೇಶ ಮತ್ತು ಶ್ರೀ ರಾಮಸ್ವಾಮಿ ರವರ ಸ್ವತ್ತು, ಪಶ್ಚಿಮಕ್ಕೆ: ಕಾಳೇಗೌಡರ ಮನೆ, ಉತ್ತರಕ್ಕೆ: ಬಿ.ಎಂ. ರಸ್ತೆ ಮತ್ತು ದಕ್ಷಿಣಕ್ಕೆ: ಸರ್ವೆ ನಂಬರ್ 9ರ ಜಮೀನು.

ಸಹಿ/- ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641. email: sldlawfirm2021@gmail.com



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)

ಸುವರ್ಣ ಸಂಭ್ರಮ ಹಾಗೂ 11ನೇ ರಾಜ್ಯಮಟ್ಟದ ಬ್ರಾಹ್ಮಣ ಸಮ್ಮೇಳನ


ವಿಶ್ವಾಮಿತ್ರ

ಸ್ಥಳ : ತ್ರಿಪುರವಾಸಿನಿ ಸಭಾಂಗಣ, ಅರಮನೆ ಮೈದಾನ
ಮೇಕ್ರಿ ಸರ್ಕಲ್ ಬಳಿ, ಬೆಂಗಳೂರು

ದಿನಾಂಕ: 18 ಮತ್ತು 19 ಜನವರಿ 2025

ಆತ್ಮೀಯ ವಿಪ್ರ ಬಂಧುಗಳೆ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಪ್ರಾರಂಭವಾಗಿ 50 ವರ್ಷವಾಗಿದ್ದು, ಇದರ ಸವಿನೆನಪಿಗಾಗಿ **ಸುವರ್ಣ ಸಂಭ್ರಮ ಹಾಗೂ 11ನೇ ರಾಜ್ಯ ಮಟ್ಟದ ಬ್ರಾಹ್ಮಣ ಸಮ್ಮೇಳನ**ವನ್ನು ಆಯೋಜಿಸಲಾಗಿದ್ದು ಇದಕ್ಕೆತಾವುಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿಸುತ್ತೇನೆ.



ಶುಭ ಕೋರುವವರು
ಕೆ. ಆರ್. ಸತ್ಯನಾರಾಯಣ
ಅಧ್ಯಕ್ಷರು
ಹೊಯ್ಸಳ ಕರ್ನಾಟಕ ಸಂಘ ಮೈಸೂರು
ಉಪಾಧ್ಯಕ್ಷರು
ಸುವರ್ಣ ಮಹೋತ್ಸವ ಸಮಿತಿ
AKBMS, ಬೆಂಗಳೂರು



ಮೂರನೇ ಪುಟದಿಂದ

ಅಂಗಡಿಯಲ್ಲಿ ಸಿಗುವಂತದ್ದಾ...

ಪಕ್ಷದ ನಾಯಕರು ಗುರುತಿಸಿ ಸೂಕ್ತ ಹುದ್ದೆ ನೀಡುತ್ತಾರೆ. ಮಾಧ್ಯಮಗಳ ಮುಖಾಂತರ ಯಾರಾದರೂ ಹುದ್ದೆ ಕೇಳುತ್ತಾರೆಯೇ, ಇದನ್ನೆಲ್ಲಾ ಹೊಸದಾಗಿ ಕೇಳುತ್ತಿರುವೆ ಎಂದು ವ್ಯಂಗ್ಯವಾಡಿದರು.

ಪಕ್ಷದ ವಿಚಾರದಲ್ಲಿ ಯಾವುದೇ ಬೆಳವಣಿಗೆ ಇದ್ದರೂ ನಾನೇ ಮಾಧ್ಯಮಗೋಷ್ಠಿ ಕರೆದು ಮಾಹಿತಿ ನೀಡುತ್ತೇನೆ. ಈಗ ಪಕ್ಷ ಸಂಘಟನೆ ಮಾಡಿ, ಉಳಿಸಿ, ಬೆಳೆಸುವ ಕೆಲಸ ಮಾಡಬೇಕಿದೆ. ಎಲ್ಲರೂ ಶಿಸ್ತು ಕಾಯ್ದುಕೊಳ್ಳಲು ಮುಖ್ಯಮಂತ್ರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ಬುದ್ಧಿವಾದ ಹೇಳಿದ್ದಾರೆ. ಯಾವುದೇ ವಿಚಾರ ಕುರಿತು ಬಹಿರಂಗವಾಗಿ ಚರ್ಚೆ ಮಾಡದಂತೆ ಸೂಚಿಸಿದ್ದಾರೆ. ಪಕ್ಷದ ವಿಚಾರವನ್ನು ಎಐಸಿಸಿ ಅಧ್ಯಕ್ಷರು, ರಾಹುಲ್ ಗಾಂಧಿ, ಮುಖ್ಯಮಂತ್ರಿ ಅಥವಾ ನನ್ನ ಬಳಿ ಬಂದು ಮಾತನಾಡಲಿ. ಇದು ಕೇವಲ ಕಾಂಗ್ರೆಸ್ ಮಾತ್ರವಲ್ಲ, ಬಿಜೆಪಿ, ಜೆಡಿಎಸ್, ರೈತ ಸಂಘ ಸೇರಿದಂತೆ ಯಾವುದೇ ಪಕ್ಷಾದರೂ ಆಂತರಿಕವಾಗಿ ಚರ್ಚೆ ಮಾಡಬೇಕು.

ಮಾಧ್ಯಮಗಳು ಕೊಡಿಸುತ್ತವೆಯೇ?: ನಾನು ಯಾವುದಾದರೂ ಹುದ್ದೆ ಬಯಸಿದರೆ ಮಾಧ್ಯಮಗಳು ಕೊಡಿಸಲು ಸಾಧ್ಯವೇ ಅಥವಾ ಈ ಹುದ್ದೆಗಳು ಅಂಗಡಿಯಲ್ಲಿ ಸಿಗುತ್ತವೆಯೇ. ಮಾಧ್ಯಮಗಳ ಮುಂದೆ ಹೇಳಿಕೆ ನೀಡುವುದರಿಂದ ಯಾವುದೇ ಪ್ರಯೋಜನವಿಲ್ಲ, ಬದಲಿಗೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದರು.

ಪಕ್ಷವನ್ನು ಕೇವಲ ಡಿ.ಕೆ.ಶಿವಕುಮಾರ್ ಒಬ್ಬನೇ ಅಧಿಕಾರಕ್ಕೆ ತಂದಿಲ್ಲ. ಕಾರ್ಯಕರ್ತರು, ಮತದಾರರು ನಮ್ಮ ಮೇಲೆ ಅಪಾರ ವಿಶ್ವಾಸವಿಟ್ಟು ಅಧಿಕಾರ ನೀಡಿದ್ದಾರೆ. ಇದನ್ನು ಉಳಿಸಿಕೊಳ್ಳಬೇಕು, ಉಳಿಸಿಕೊಳ್ಳುತ್ತೇವೆ. ಇದು ಕಾರ್ಯಕರ್ತರ ಹಾಗೂ ಮತದಾರರ ಪಕ್ಷ, ಇದಕ್ಕೆ ತನ್ನದೇ ಆದ ದೊಡ್ಡ ಇತಿಹಾಸವಿದೆ. ಯಾರೇ ಇರಲಿ, ಹೋಗಲಿ, ತನ್ನನ್ನು ತಾನು ಉಳಿಸಿಕೊಳ್ಳುವ ಶಕ್ತಿ ಪಕ್ಷಕ್ಕೆ ಇದೆ. ಮಹಾತ್ಮಗಾಂಧಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟು ಅಧಿಕಾರ ತ್ಯಾಗ ಮಾಡಿದ್ದಾರೆ. ಡಾ.ಅಂಬೇಡ್ಕರ್ ಸಂವಿಧಾನ ಕೊಟ್ಟರೂ ಯಾವ ಅಧಿಕಾರ ಪಡೆದರು? ಅವರನ್ನೆಲ್ಲ ಸ್ಮರಿಸಬೇಕು.

ಪಕ್ಷ ಬಹಳ ಮುಖ್ಯ ಎಂಬುದಾಗಿ ನಾನು ಬಹಳ ನಮ್ರತೆಯಿಂದ ಮನವಿ ಮಾಡುತ್ತೇನೆ. ಯಾರಿಗೆ ಏನೇ ಸಮಸ್ಯೆ ಇದ್ದರೂ ಹೈಕಮಾಂಡ್ ಜತೆ ಚರ್ಚಿಸಿ, ಬಗೆಹರಿಸಿಕೊಳ್ಳಿ. ಸದ್ಯಕ್ಕೆ ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಸಮಾವೇಶ ಸಿದ್ಧತೆಯಲ್ಲಿದ್ದು, ಪರಿಶೀಲನೆಗೆ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಶುಕ್ರವಾರ ಬೆಳಗಾವಿಗೆ ಆಗಮಿಸಲಿದ್ದಾರೆ, ನಿಮ್ಮ ಪ್ರಶ್ನೆಗಳು ಏನೇ ಇದ್ದರೂ ಅವರನ್ನು ಕೇಳಿ ಎಂದರು.

ಆರು ಬಾರಿ ಇರಿದ ದುಷ್ಕರ್ಮಿ!

ಆರೋಪಿಗಳಲ್ಲಿ ಒಬ್ಬನನ್ನು ಗುರುತಿಸಲಾಗಿದ್ದು, ಆರೋಪಿಯ ಪತ್ತೆಗೆ ವಿಶೇಷ ತಂಡಗಳನ್ನು ರಚಿಸಲಾಗಿದೆ ಎಂದು ಮುಂಬೈ ಪೊಲೀಸರು ತಿಳಿಸಿದ್ದಾರೆ. ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಬಳಸಿಕೊಂಡು ಆರೋಪಿಯನ್ನು ಗುರುತಿಸಲಾಗಿದೆ. ಆತ ಕಟ್ಟಡವನ್ನು ಪ್ರವೇಶಿಸಲು ಮತ್ತು ಹೊರಬರಲು ಮೆಟ್ಟಿಲುಗಳನ್ನು ಬಳಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಯ ಬಂಧನಕ್ಕೆ 10 ವಿಶೇಷ ತಂಡಗಳನ್ನು ನಿಯೋಜಿಸಲಾಗಿದೆ ಎಂದು ಪೊಲೀಸ್ ಅಧಿಕಾರಿ ಹೇಳಿದ್ದಾರೆ. ಪೊಲೀಸರ ಪ್ರಕಾರ ಸೈಫ್ ಅವರ ಮನೆಯ ಸಹಾಯಕರು ಅತಿಕ್ರಮ ಪ್ರವೇಶ ಮತ್ತು ಕೊಲೆ ಯತ್ನಕ್ಕಾಗಿ ದೂರು ದಾಖಲಿಸಿದ್ದಾರೆ. 2.30ರ ಸುಮಾರಿಗೆ ಒಳನುಗ್ಗಿದವನನ್ನು ಗಮನಿಸಿದ ಸೇವಕಿ ಮೊದಲ ಬಾರಿಗೆ ಎಚ್ಚರಿಕೆ ನೀಡಿದರು, ನಂತರ ನಟ ಮಧ್ಯಪ್ರವೇಶಿಸಿದರು.

ಬಾಲಿವುಡ್ ನಟ ಸೈಫ್ ಅಲಿ ಖಾನ್ ನಿವಾಸಕ್ಕೆ ನುಗ್ಗಿ ಅವರಿಗೆ ಚಾಕುವಿನಿಂದ ಇರಿದ ಶಂಕಿತ ವ್ಯಕ್ತಿಯ ಮೊದಲ ಫೋಟೋವನ್ನು ಮುಂಬಯಿ ಪೊಲೀಸರು ಬಿಡುಗಡೆ ಮಾಡಿದ್ದಾರೆ. ಆರೋಪಿ ಅಪಾರ್ಟ್‌ಮೆಂಟ್‌ನಿಂದ ಇಳಿದುಕೊಂಡು ಹೋಗುತ್ತಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಆರೋಪಿ ಕಪ್ಪು ಬಣ್ಣ ಟೀ-ಶರ್ಟ್ ಹಾಗೂ ಬ್ಯಾಗ್ ಧರಿಸಿದ್ದ. ಜತೆಗೆ ಭುಜದ ಮೇಲೆ ಕಿತ್ತಳೆ ಬಣ್ಣದ ಸ್ಕಾರ್ಫ್ ಸಿಕ್ಕಿಸಿಕೊಂಡಿದ್ದ. ಮೆಟ್ಟಿಲು ಇಳಿಯುತ್ತಿದ್ದ ಸಂದರ್ಭದಲ್ಲಿ ಆರೋಪಿ ಕ್ಯಾಮರಾವನ್ನು ನೇರವಾಗಿ ನೋಡಿದ್ದಾನೆ. ಸದ್ಯ ಈ ದೃಶ್ಯಾವಳಿಗಳನ್ನು ಆಧರಿಸಿ ಆರೋಪಿಯ ಪತ್ತೆಗೆ ಪೊಲೀಸರು ಮುಂದಾಗಿದ್ದಾರೆ.

ನಟ ಸೈಫ್ ಅಲಿ ಖಾನ್ ಕುಟುಂಬ ಸಮೇತ ಬಾಂದ್ರಾ ವೆಸ್ಟ್‌ನಲ್ಲಿರುವ 12 ಅಂತಸ್ತಿನ ಕಟ್ಟಡದಲ್ಲಿನ ವಿಶಾಲವಾದ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದಾರೆ. ದಾಳಿಕೋರ ದರೋಡೆ ಮಾಡುವ ಉದ್ದೇಶದಿಂದ ಒಳನುಗ್ಗಿದ್ದಾನೆ. ಸೈಫ್ ಅಲಿ ಖಾನ್ ವಾಸವಾಗಿರುವ ಕಟ್ಟಡದ ಮುಂದಿನ ಕಾಂಪೌಂಡ್‌ಗೆ ಪ್ರವೇಶಿಸಿ, ನಂತರ ಗೋಡೆಯನ್ನು ಏರಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿಚಾರಣೆ ಕೋರಿ ರಾಜ್ಯ ಸರ್ಕಾರದ ಅರ್ಜಿ

ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದರೂ ಅದನ್ನು ತಿರಸ್ಕರಿಸಲಾಗಿದೆ.

ಅಲ್ಲದೇ, ಸರ್ವೋಚ್ಚ ನ್ಯಾಯಾಲಯದ 2001ರ ಆದೇಶವನ್ನು ಉಲ್ಲಂಘಿಸಿ ಬೆಂಗಳೂರು ಅರಮನೆಯ ಸುಮಾರು 2 ಲಕ್ಷ ಚ.ಮೀಟರ್ ವ್ಯಾಪ್ತಿಯಲ್ಲಿ ಖಾಯಂ ಕಟ್ಟಡಗಳನ್ನು ನಿರ್ಮಿಸಿರುವ ಮಹಾರಾಜರ ಉತ್ತರಾಧಿಕಾರಿಗಳ ಮೇಲೆ ನ್ಯಾಯಾಂಗ ನಿಂದನೆ ಅರ್ಜಿಯನ್ನು ಸಲ್ಲಿಸಲು ಸಹ ಸಚಿವ ಸಂಪುಟ ತೀರ್ಮಾನಿಸಿದೆ. 15 ದಿನಗಳಲ್ಲಿ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ಬಗ್ಗೆ 9-01-2025ರಂದು ಸರ್ಕಾರದ ವತಿಯಿಂದ ನೋಟಿಸ್‌ಗಳನ್ನು ಜಾರಿ ಮಾಡಲಾಗಿದೆ ಎಂದು ಸಚಿವರು ವಿವರಿಸಿದರು. ಇಂತಹ ಸ್ಥಳದಲ್ಲಿ ಯಾವುದೇ ಕಾರ್ಯಕ್ರಮಗಳನ್ನು ನಡೆಸಲು ಸರ್ಕಾರ ದಿಂದ ಇನ್ನೂಮುಂದೆ ಅನುಮತಿ ನೀಡಲು ಸಚಿವ ಸಂಪುಟ ನಿರ್ಬಂಧ ವಿಧಿಸಿದೆ.

ಕರ್ನಾಟಕ ರಾಜ್ಯವು ಬೆಂಗಳೂರು ಅರಮನೆ (ಭೂಸ್ವಾಧಿನ ಮತ್ತು ವರ್ಗಾವಣೆ) ಅಧಿನಿಯಮ, 1996 ಎಂದು ಕರೆಯಲ್ಪಡುವ ಶಾಸನವನ್ನು ಅಧಿನಿಯಮಿಸಿ 21.11.1996ರಿಂದ ಜಾರಿಗೆ ಬರುವಂತೆ ಬೆಂಗಳೂರು ಅರಮನೆಗೆ ಸೇರಿದ ಎಲ್ಲಾ ಸ್ಥಿರ ಚರ ಸ್ವತ್ತುಗಳ (ಕಾಯ್ದೆಯಲ್ಲಿ ನಿರ್ದಿಷ್ಟ ಪಡಿಸಲಾದ ಸ್ವತ್ತುಗಳು) ಎಲ್ಲಾ ವಿಧವಾದ ಹಕ್ಕು ರಾಜ್ಯ ಸರ್ಕಾರದಲ್ಲಿ ವಿಹಿತವಾಗುತ್ತದೆ ಎಂದು ತಿಳಿಸಲಾಗಿತ್ತು. ಈ ಅಧಿ ನಿಯಮವನ್ನು ಪ್ರಶ್ನಿಸಿ ರಿಟ್ ಅರ್ಜಿ ಸಂಖ್ಯೆ: 3383/1997ರಲ್ಲಿ ಮತ್ತು ಇತರೆ ಸಂಬಂಧಿತ ವಿಷಯಗಳಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಿದ ಸಂದರ್ಭದಲ್ಲಿ ರಾಜ್ಯದ ಶಾಸನದ ಮಾನ್ಯತೆಯನ್ನು ರಾಜ್ಯ ಉಚ್ಚ ನ್ಯಾಯಾಲಯವು ಎತ್ತಿ ಹಿಡಿದಿತ್ತು. ರಾಜ್ಯ ಉಚ್ಚ ನ್ಯಾಯಾಲಯದ ಈ ತೀರ್ಪನ್ನು ಪ್ರಶ್ನಿಸಿ ಅರ್ಜಿದಾರರು ವಿಶೇಷ ಅನುಮತಿ ಅರ್ಜಿ (ಸಿವಿಲ್) ಸಂಖ್ಯೆ: 8650/1997ರಲ್ಲಿ ಮತ್ತು ಇತರೆ ಸಂಬಂಧಿತ ವಿಷಯಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಸರ್ವೋಚ್ಚ ನ್ಯಾಯಾಲಯವು ಈ ಪ್ರಕರಣದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶ ನೀಡಿದೆ. ಈ ಅರ್ಜಿ ವಿಲೇವಾರಿ ಆಗುವವರೆಗೆ ಮಾಲಿಕತ್ವ ಪ್ರಶ್ನೆಯು ಇತ್ಯರ್ಥವಾಗುವವರೆಗೆ ಟಿಡಿಆರ್ ಪ್ರಕರಣವನ್ನು ಕಾನೂನು ಪ್ರಕಾರ ನಿರ್ವಹಿಸಲು ಸಚಿವ ಸಂಪುಟ ನಿರ್ದೇಶಿಸಿದೆ ಎಂದು ಅವರು ಹೇಳಿದರು.

ಕೇಂದ್ರ ಸಂಪುಟ ಅಸ್ತು

ಮೊದಲು ಕೇಂದ್ರ ಸಚಿವ ಸಂಪುಟವು 8ನೇ ವೇತನ ಆಯೋಗದ ಘೋಷಣೆಯನ್ನು ಅನು ಮೋದಿಸಿದೆ. 7ನೇ ವೇತನ ಆಯೋಗ ವನ್ನು 2014ರಲ್ಲಿ ರಚಿಸಲಾಯಿತು ಮತ್ತು ಅದರ ಶಿಫಾರಸುಗಳನ್ನು ಜ.1, 2016 ರಂದು ಜಾರಿಗೆ ತರಲಾಯಿತು. 1947ರಿಂದ ಸರ್ಕಾರವು ಏಳು ವೇತನ ಆಯೋಗಗಳನ್ನು ರಚಿಸಿದೆ. ಸರ್ಕಾರಿ ನೌಕರರಿಗೆ ವೇತನ ರಚನೆಗಳು, ಪ್ರಯೋ ಜನಗಳು ಮತ್ತು ಭತ್ಯೆಗಳನ್ನು ನಿರ್ಧರಿಸುವಲ್ಲಿ ವೇತನ ಆಯೋಗವು ಪ್ರಮುಖ ಪಾತ್ರ ವಹಿಸುತ್ತದೆ ಹೆಚ್ಚಿನ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಆಯೋಗದ ಶಿಫಾರಸುಗಳನ್ನು ಅನುಸರಿಸುತ್ತವೆ.

ಪರಮೇಶ್ವರ್ ಕೂಡ ಆಕ್ಷೇಪ

ಖಾತೆಗಳಿರುವುದರಿಂದ ಅವು ಗಳನ್ನು ಬದಲಾಯಿಸಿ, ಬೇರೆಯವರನ್ನು ನೇಮಿಸಬೇಕು ಅಂತ ಕೇಳುತ್ತಾರೆ. ನಾನು ಕೆಪಿಸಿಸಿ ಅಧ್ಯಕ್ಷನಾಗಿದ್ದಾಗ ನನಗೂ ಇದೇ ಪರಿಸ್ಥಿತಿ ಬಂದಿತ್ತು.

ಸಚಿವ ಸತೀಶ್ ಜಾರಕಿಹೊಳಿ ಅವರು, ಸುರ್ಜೇವಾಲಾ ಅವರನ್ನು ಭೇಟಿಯಾಗಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕಾಗಿ ಒತ್ತಾಯ ಮಾಡಿದ್ದು ನಿಜ. ಮುಖ್ಯಮಂತ್ರಿ ಆಯ್ಕೆ ಸಂದರ್ಭದಲ್ಲಿ ಲೋಕಸಭಾ ಚುನಾವಣೆ ವರೆಗೆ ಅಧ್ಯಕ್ಷರಾಗಿ ಮುಂದುವರೆಯಲು ಶಿವಕುಮಾರ್ ಅವರಿಗೆ ಎಐಸಿಸಿ ನಾಯಕರು ಹೇಳಿದ್ದರು. ಇದನ್ನು ನೆನಪಿಸಲು ಹೋಗಿರುವುದಾಗಿ ಸತೀಶ್ ಹೇಳಿದ್ದಾರೆ ಎಂದು ಪ್ರತಿಕ್ರಿಯಿಸಿದರು. ನಾನು ಕೆಪಿಸಿಸಿ ಅಧ್ಯಕ್ಷ ಮತ್ತು ಸಚಿವ ನಾಗಿದ್ದಾಗ ಮಂತ್ರಿ ಸ್ಥಾನ ಆಯ್ಕೆ ಮಾಡಿಕೊಳ್ಳಿ ಅಥವಾ ಅಧ್ಯಕ್ಷರಾಗಿ ಯಾದರೂ ಮುಂದುವರೆಯಿರಿ ಎಂಬುದಾಗಿ ಹೈಕಮಾಂಡ್ ಹೇಳಿತ್ತು, ಆಗ ಪಕ್ಷ ಸಂಘಟನೆಗೆ ಪ್ರಾಮುಖ್ಯತೆ ಕೊಟ್ಟು, ನಾನು ಅಧ್ಯಕ್ಷನಾಗಿ ಮುಂದು ವರೆಯುವುದಾಗಿ ಹೇಳಿ, ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದೆ. ಪಕ್ಷ ಸಂಘಟನೆ ಸಂಪೂರ್ಣ ಸ್ಥಗಿತಗೊಂಡಿದೆ, ಕಾಂಗ್ರೆಸ್ ಸರ್ಕಾರ ಬಂದ ನಂತರ ಪಕ್ಷದ ಕೆಲಸಗಳ ಬಗ್ಗೆ ಗಮನ ಹರಿಸುತ್ತಿಲ್ಲ ಎಂಬುದನ್ನು ಹೈಕಮಾಂಡ್ ಗಮನಿಸುತ್ತದೆ. ಒಂದು ಸಮುದಾಯ ಸೇರಿ ಸಭೆ ಮಾಡುವುದನ್ನು ಗಮನಿಸಿ ರಬೇಕಲ್ಲವೆ. ಪಕ್ಷ ಸಂಘಟನೆ ದೊಡ್ಡ ಜವಾಬ್ದಾರಿ, ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆ ನೋಡಬೇಕು ಎಂದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ್ ಭಂಡಾರಿ ಅವರು ಸಚಿವರ ಹೆಸರು ಉಲ್ಲೇಖಿಸಿ ಪತ್ರ ಬರೆದಿರುವ ಬಗ್ಗೆ ಪ್ರತಿಕ್ರಿಯಿಸಿ, ವರದಿ ಕೊಡುವವರನ್ನು ಯಾರು ಬೇಡ ಅನ್ನುತ್ತಾರೆ, ವರದಿ ತೆಗೆದುಕೊಳ್ಳಲು ಅವರಿದ್ದಾರೆ, ಕೊಡಲು ಇವರಿದ್ದಾರೆ ಎಂದರು.

ಮೀಟರ್ ಬಡ್ಡಿ ವಿಧಿಸಿ ಮೈಕ್ರೊ ಫೈನಾನ್ಸ್‌ಗಳಿಂದ ಕಿರುಕುಳ

● ರಾಜ್ಯ, ಜಿಲ್ಲಾ ಮಟ್ಟದಲ್ಲಿ ಸಮಿತಿ ರಚನೆಗೆ ರಘು ಕೌಟಿಲ್ಯ ಆಗ್ರಹ ● ಬಡ್ಡಿ, ಮೀಟರ್ ಬಡ್ಡಿ ಸೇರಿಸಿ ಶೇಕಡ 27 ರಷ್ಟು ವಸೂಲಿ ● ಅಮಾಯಕರಿಗೆ ಪೊಲೀಸರು ರಕ್ಷಣೆ ನೀಡಬೇಕು ● ಮೈಕ್ರೊ ಫೈನಾನ್ಸ್ ಕಿರುಕುಳಕ್ಕೆ ಕಡಿವಾಣ ಅಗತ್ಯ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಗುರುವಾರ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು, ಜ.16(ಬಿಎಲ್‌ಯು)- ಸಾಲ ಕೊಟ್ಟು ಮೀಟರ್ ಬಡ್ಡಿಗಿಂತಲೂ ಹೆಚ್ಚು ಹಣ ವಸೂಲಿ ಮಾಡುತ್ತಿರುವ ಮೈಕ್ರೊ ಫೈನಾನ್ಸ್‌ಗಳ ಹಾವಳಿಗೆ ಕಡಿವಾಣ ಹಾಕಲು ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಸಮಿತಿ ರಚನೆ ಮಾಡಬೇಕು ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಾಲ ಕೊಟ್ಟು ವಸೂಲಿ ಮಾಡುವುದು ಮೈಕ್ರೊ ಫೈನಾನ್ಸ್‌ಗಳಿಗೆ ಚೆಲ್ಲಾಟವಾಗಿದೆ. ಇವರ ಕಿರುಕುಳದಿಂದ ಬೇಸತ್ತ ಜನರು ಊರನ್ನೆ ತೊರೆಯುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಸಾಲಗಳ ಮೇಲೆ ಬಡ್ಡಿ ಹಾಗೂ ಮೀಟರ್ ಬಡ್ಡಿ ಲೆಕ್ಕಾಚಾರ ಮಾಡಿ ಕನಿಷ್ಠ ಶೇಕಡ 27 ಪರ್ಸೆಂಟ್‌ಗಿಂತಲೂ ಹೆಚ್ಚು ಬಡ್ಡಿ ವಸೂಲಿ ಮಾಡುತ್ತಿದ್ದಾರೆ. ಜನರ ಬದುಕನ್ನು ರಕ್ತದಂತೆ ಹೀರುವ ಈ ಮಾಫಿಯಾದಿಂದ ಸಾಲ ಕಟ್ಟದವರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರ ಇಂತಹ ಮುಗ್ಧ ಜನರ ಸಂಕಷ್ಟಕ್ಕೆ ಧಾವಿಸಬೇಕು ಎಂದು ರಘು ಕೌಟಿಲ್ಯ ಆಗ್ರಹಿಸಿದರು.

ಸಾಲ ಪಡೆದವರು ಕಿರುಕುಳ ನೀಡಿದ ಸಂದರ್ಭದಲ್ಲಿ ದೂರು ನೀಡಲು ಬಂದಾಗ ಪೊಲೀಸರು ಯಾವುದೇ ಸಬೂಬು ಹೇಳದೆ ಪ್ರಕರಣ ದಾಖಲಿಸಬೇಕು. ಈ ಮೂಲಕ ಕಷ್ಟಕ್ಕೆ ಸಿಲುಕಿರುವ ಜನರ ನೆರವಿಗೆ ಧಾವಿಸಿ, ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದರು.

ಆಸ್ತಿ ಅಡಮಾನ ಮಾಡಿ ಸಾಲ ಪಡೆದ ಕೆಲವು ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತವೆ. ಸಾಲ ಪಡೆದ ಅಮಾಯಕರಿಗೆ ನ್ಯಾಯಾಲಯದಲ್ಲಿ ಕಾನೂನು ಹೋರಾಟ ಮಾಡುವ ಅರಿವು ಇರುವುದಿಲ್ಲ. ಇದನ್ನೆ ಬಂಡವಾಳ ಮಾಡಿಕೊಳ್ಳುವ ಮೈಕ್ರೊ ಫೈನಾನ್ಸ್‌ಗಳು ಸಾಲ ಪಡೆದವರ ಆಸ್ತಿ ಜಪ್ತಿ ಮಾಡಿ ಮನೆಯಲ್ಲಿರುವ ವಸ್ತುಗಳನ್ನು ಹೊರಗೆ ಹಾಕಿ ಅಮಾನವೀಯವಾಗಿ ನಡೆದುಕೊಳ್ಳುತ್ತಾರೆ ಎಂದು ರಘು ಕೌಟಿಲ್ಯ ಆರೋಪಿಸಿದರು.

ಈ ಹಿನ್ನೆಲೆಯಲ್ಲಿ ರಾಜ್ಯ ಗೃಹ ಇಲಾಖೆ, ಹಣಕಾಸು ಇಲಾಖೆ ಹಾಗೂ ಕಾನೂನು ಇಲಾಖೆ ಜಂಟಿಯಾಗಿ ಸಮಿತಿ ರಚಿಸಿ ಮೈಕ್ರೊ ಫೈನಾನ್ಸ್‌ಗಳ ಹಾವಳಿಗೆ ಮೂಗುದಾರ ಹಾಕಬೇಕು. ಈ ಹಿನ್ನೆಲೆ ಆರ್‌ಬಿಐ ಅಧಿಕಾರಿಗಳ ಜೊತೆ ತುರ್ತು ಸಭೆ ನಡೆಸಿ ಕಾನೂನಾತ್ಮಕ ತೀರ್ಮಾನ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಇದಲ್ಲದೆ ತಾಲೂಕು ಮಟ್ಟದಲ್ಲಿ ಸರ್ಕಾರದ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ವಕೀಲರು ಇರುವ ಸಮಿತಿ ರಚನೆ ಮಾಡಿ ಸಾಲ ಪಡೆದಿರುವ ಅಮಾಯಕರಿಗೆ ರಕ್ಷಣೆ ನೀಡಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಜಾತಿ ಗಣತಿ ವರದಿಯನ್ನು ಜಾರಿ ಮಾಡುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ಭಿನ್ನಾಭಿಪ್ರಾಯವಿದೆ. ಚುನಾವಣೆ ನೆಪ ಹೇಳಿ ವರದಿ ಜಾರಿ ಮಾಡದೆ ಜಾರಿಕೊಂಡರು. ಆದರೆ ಈಗ ಇದರ ಬಗ್ಗೆ ಸಿದ್ದರಾಮಯ್ಯ ಚಕಾರ ಎತ್ತುತ್ತಿಲ್ಲ ಎಂದು ರಘು ಕೌಟಿಲ್ಯ ಟೀಕಿಸಿದರು.

ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಮೋಹನ್, ಮಾಧ್ಯಮ ವಕ್ತಾರ ಮಹೇಶ್ ರಾಜ್ ಅರಸ್ ಅವರು ಉಪಸ್ಥಿತರಿದ್ದರು.

ಪ್ರತಾಪ್ ಸಿಂಹ ವಿರುದ್ಧದ ದೂರು ಬಿಜೆಪಿ ರಾಜ್ಯಾಧ್ಯಕ್ಷರಿಗೆ ರವಾನೆ

ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಕೆಲವರು ನೀಡಿರುವ ದೂರನ್ನು ಬಿಜೆಪಿ ರಾಜ್ಯಾಧ್ಯಕ್ಷರಿಗೆ ಕಳುಹಿಸಲಾಗಿದೆ ಎಂದು ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಸ್ಪಷ್ಟಪಡಿಸಿದ್ದಾರೆ. ನಮ್ಮಲ್ಲಿ ಯಾವುದೇ ಗುಂಪು ಅಥವಾ ಬಣವಿಲ್ಲ. ಚಾಮರಾಜಪೇಟೆಯಲ್ಲಿ ಹಸುವಿನ ಕೆಚ್ಚಲು ಕೊಯ್ದ ಪ್ರಕರಣ ಖಂಡಿಸಿ ಮೊನ್ನೆ ಬಿಜೆಪಿ ಅಧಿಕೃತವಾಗಿ ಪ್ರತಿಭಟನೆ ನಡೆಸಿತ್ತು. ಆ ಕಾರ್ಯಕ್ರಮಕ್ಕೆ ಪ್ರತಾಪ್ ಸಿಂಹಗೆ ಆಹ್ವಾನ ನೀಡಿದ್ದೆವು. ಆದರೆ ಅವರು ಬರಲಿಲ್ಲ, ಇದಕ್ಕೆ ಕಾರಣ ತಿಳಿದಿಲ್ಲ ಎಂದರು.

ಈ ಮೊದಲು ಸಂಸದರಾಗಿ ಕಾರ್ಯದೊತ್ತಡದಲ್ಲಿದ್ದರು. ಈಗ ಹಸುವಿಗೆ ಪೂಜೆ ಮಾಡಿದ್ದಾರೆ. ಆದರೆ ಅದು ಬಿಜೆಪಿ ಪಕ್ಷದಿಂದ ಮಾಡಿರುವ ಅಧಿಕೃತ ಕಾರ್ಯಕ್ರಮವಲ್ಲ ಎಂದು ಸ್ಪಷ್ಟನೆ ನೀಡಿದರು. ಹಸುವಿನ ಕೆಚ್ಚಲು ಕತ್ತರಿಸುವ ಘಟನೆ ಖಂಡನೀಯ. ಪೊಲೀಸರು ಇಂತಹ ಘಟನೆ ತಪ್ಪಿಸಲು ವಿಫಲರಾಗಿದ್ದಾರೆ. ಸಂಚಾರ ನಿಯಮ ಉಲ್ಲಂಘನೆ ಪ್ರಕರಣದಲ್ಲಿ ದಂಡ ವಸೂಲಿ ಮಾಡಿ ಸರ್ಕಾರಕ್ಕೆ ನೀಡುತ್ತಿದ್ದಾರೆಯೇ ಹೊರತು ಕಾನೂನು ಸುವ್ಯವಸ್ಥೆ ಕಾಪಾಡುವ ಯಾವುದೇ ಪ್ರಯತ್ನ ಮಾಡುತ್ತಿಲ್ಲ ಎಂದು ನಾಗೇಂದ್ರ ಆರೋಪಿಸಿದರು.

ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಪ್ರಾಣಿಗಳಿಗೆ ಆಹಾರ ಹಾಕುವುದು ನಿಷಿದ್ಧ

ಮೈಸೂರು ವಿವಿ ಕ್ರಮ; ಅವಕಾಶ ಕಲ್ಪಿಸುವಂತೆ ಕುಲಪತಿಗಳಿಗೆ ಮನೇಕಾ ಗಾಂಧಿ ಮನವಿ

ಮೈಸೂರು, ಜ.16(ಆರ್‌ಕೆ)- ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಪ್ರಾಣಿ, ಪಕ್ಷಿ, ಜಲಚರಗಳಿಗೆ ಆಹಾರ ನೀಡುವುದನ್ನು ಮೈಸೂರು ವಿಶ್ವವಿದ್ಯಾನಿಲಯ ನಿಷೇಧಿಸಿದೆ.

ಕುಕ್ಕರಹಳ್ಳಿ ಕೆರೆ ಪ್ರಧಾನ ಪ್ರವೇಶ ದ್ವಾರದ ಗೇಟ್‌ನಲ್ಲಿ ಸೂಚನಾ ಫಲಕ ಅಳವಡಿಸಿರುವ ಮೈಸೂರು ವಿಶ್ವವಿದ್ಯಾನಿಲಯವು, 'ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಯಾವುದೇ ಪ್ರಾಣಿ-ಪಕ್ಷಿಗಳಿಗೆ ಆಹಾರ ನೀಡುವುದನ್ನು ನಿಷೇಧಿಸಲಾಗಿದೆ. ಹಾಗೂ ಸಾಕು ಪ್ರಾಣಿಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಈ ಸೂಚನೆಯನ್ನು ಉಲ್ಲಂಘಿಸಿದವರಿಗೆ ದಂಡ ವಿಧಿಸಲಾಗುವುದು' ಎಂದು ಫಲಕ ಅಳವಡಿಸಲಾಗಿದೆ. ಆದರೆ, ಪ್ರಿವೆನ್ಷನ್ ಆಫ್ ಕ್ರೂಯೆಲ್ಟಿ ಟು ಅನಿಮಲ್ ಆಕ್ಟ್, ಅನಿಮಲ್ ಬರ್ತ್ ಕಂಟ್ರೋಲ್ ರೂಲ್ಸ್ ಮತ್ತು ಸುಪ್ರೀಂಕೋರ್ಟ್ ಮಾರ್ಗಸೂಚಿಯನ್ವಯ ಪ್ರಾಣಿಗಳಿಗೆ ಆಹಾರ ನೀಡುವುದನ್ನು ನಿಷೇಧಿಸುವಂತಿಲ್ಲ ಎಂದು ಸಾರ್ವಜನಿಕರು ಆಕ್ಷೇಪಿಸಿದ್ದಾರೆ. ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಬೀದಿನಾಯಿಗಳ ಹಾವಳಿ ತಡೆಗಟ್ಟಲು ಹಾಗೂ ವಾಯುವಿಹಾರಿಗಳು, ಅಲ್ಲಿನ ಪ್ರಾಣಿ-ಪಕ್ಷಿ ಸಂಕುಲ ಹಾಗೂ ಜಲಚರಗಳ ಹಿತದೃಷ್ಟಿಯಿಂದ ಪ್ರಾಣಿಗಳಿಗೆ ಆಹಾರ ನೀಡುವುದನ್ನು ನಿಷೇಧಿಸಲಾಗಿದೆ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದ್ದಾರೆ.

ಕೇಂದ್ರದ ಮಾಜಿ ಪರಿಸರ ಖಾತೆ ಸಚಿವೆ ಹಾಗೂ ಖ್ಯಾತ ಪ್ರಾಣಿ ಹಕ್ಕು ವಕೀಲರಾದ ಮನೇಕಾ ಗಾಂಧಿ ಅವರು ಇಂದು ಬೆಳಗ್ಗೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಅವರಿಗೆ ಕರೆ ಮಾಡಿ, ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಪ್ರಾಣಿ, ಜಲಚರಗಳಿಗೆ ಆಹಾರ ನೀಡುವುದನ್ನು ನಿಷೇಧಿಸಬಾರದು ಹಾಗೂ ಅವುಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕೆಂದು ತಿಳಿಸಿದ್ದಾರೆ.

ಈ ನಡುವೆ ಪ್ರಾಣಿಪ್ರಿಯರಾದ ನೀರಜ ರಾಜೇಶ್, ಆರ್.ನಂದನ್ ಹಾಗೂ ಯೋಗ ವಿದ್ಯಾರ್ಥಿ ಆನ್ ಲೀ ಅವರು, ಕುಕ್ಕರಹಳ್ಳಿಕೆರೆ ಆವರಣದಲ್ಲಿ ಪ್ರಾಣಿಗಳಿಗೆ ಆಹಾರ ಪೂರೈಸುವುದರಿಂದ ಮೈಸೂರು ವಿವಿ ಹಾಗೂ ಪಾಲಿಕೆಗೆ ಯಾವುದೇ ನಷ್ಟವಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಸುಮಾರು 70 ಬೀದಿನಾಯಿಗಳಿಗೆ ಆಹಾರ ನೀಡುವುದನ್ನು ನಿಷೇಧಿಸಲಾಗಿದೆ ಎಂದು ಸೂಚನಾ ಫಲಕದಲ್ಲಿ ಪ್ರಸ್ತಾಪಿಸಿರುವುದು ಕಾನೂನು ಉಲ್ಲಂಘನೆಯಾದಂತಾಗಿದೆ ಎಂದಿರುವ ಅವರು, ಪ್ರಾಣಿಗಳ ಹಕ್ಕು ರಕ್ಷಣೆ ಮಾಡುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.



ಕಳೆದ ಹಲವು ವರ್ಷಗಳಿಂದ ಬೀದಿನಾಯಿಗಳಿಂದ ಕಚ್ಚಿಸಿಕೊಂಡವರಿಗೆ ಮಾತ್ರ, ಕೆರೆ ಆವರಣದಲ್ಲಿ ಬೆಳಗಿನ ವಾಯು ವಿಹಾರ ಮಾಡುವಾಗ ಬೀದಿ ನಾಯಿಗಳ ಕಾಟದಿಂದ ಉಂಟಾಗುವ ನೋವು ಮತ್ತು ಸಂಕಟ ಗೊತ್ತಿದೆ.

-ಹಲವು ವರ್ಷಗಳಿಂದ ವಾಯುವಿಹಾರ ಮಾಡುತ್ತಿರುವ ಅನಾಮಧೇಯ

ಮನೇಕಾ ಗಾಂಧಿ ಮಧ್ಯ ಪ್ರವೇಶ; ಮಾನವೀಯ ಧೋರಣೆಗೆ ಮನವಿ

ಮೈಸೂರು, ಜ.16(ಆರ್‌ಕೆ)-ಮೈಸೂರಿನ ಕುಕ್ಕರಹಳ್ಳಿ ಕೆರೆಯಲ್ಲಿ ಪ್ರಾಣಿಗಳಿಗೆ ಆಹಾರ ನೀಡುವುದನ್ನು ನಿಷೇಧಿಸುವ ವಿವಾದ ಕುರಿತು ಕೇಂದ್ರದ ಮಾಜಿ ಪರಿಸರ ಸಚಿವೆ ಮತ್ತು ಖ್ಯಾತ ಪ್ರಾಣಿ ಹಕ್ಕುಗಳ ವಕೀಲೆ ಮನೇಕಾ ಗಾಂಧಿ ಅವರು ಮಧ್ಯ ಪ್ರವೇಶಿಸಿದ್ದು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಅವರು ಮಾನವೀಯ ಧೋರಣೆ ಅನುಸರಿಸಬೇಕೆಂದು ಮನವಿ ಮಾಡಿದ್ದಾರೆ. ಇಂದು ಬೆಳಗ್ಗೆ ಪ್ರೊ ಎನ್.ಕೆ.ಲೋಕನಾಥ್ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿದ ಮನೇಕಾ ಗಾಂಧಿ ಅವರು, ಪ್ರಾಣಿಗಳಿಗೆ ಆಹಾರ ನೀಡುವುದು, ಕಾನೂನು ನಿಬಂಧನೆಗಳು ಮತ್ತು ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆಯಲ್ಲಿನ ಅಂಶಗಳ ಬಗ್ಗೆ ವಿವರಿಸಿದ್ದಾರೆ. ಅದಕ್ಕೆ ಪ್ರತಿಕ್ರಿಯಿಸಿರುವ ಪ್ರೊ ಲೋಕನಾಥ್, ಕುಕ್ಕರಹಳ್ಳಿ ಕೆರೆಯ ಪರಿಸರ ಸೂಕ್ಷ್ಮತೆ ಹಾಗೂ ವಾಯು ವಿಹಾರಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಹಿರಿಯ ನಾಗರಿಕರು, ಮಕ್ಕಳ ಆರೋಗ್ಯದ ಮೇಲೆ ಅಶುಚಿತ್ವ ವ್ಯತಿರಿಕ್ತ ಪರಿಣಾಮ ಬೀರದಿರಲೆಂದು ನಾವು ಈ ಕ್ರಮ ಕೈಗೊಂಡಿದ್ದೇವೆ. ತಾವು ನೀಡಿದ ಸಲಹೆ, ಮಾರ್ಗದರ್ಶನ ಪರಿಗಣಿಸುವ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ವಹಿಸುತ್ತೇವೆ ಎಂದು ಮನೇಕಾ ಗಾಂಧಿ ಅವರಿಗೆ ತಿಳಿಸಿದ್ದಾರೆ.



ಮನೇಕಾ ಗಾಂಧಿ

ಪಾರಿವಾಳಗಳಿಗೆ ಆಹಾರ ನೀಡುವುದರ ವಿರುದ್ಧ ಕ್ರಮ

ಮೈಸೂರು ಅರಮನೆಯ ಉತ್ತರ ದ್ವಾರದಲ್ಲಿ ನಡೆಯುತ್ತಿದ್ದ ಪಾರಿವಾಳಗಳಿಗೆ ಧಾನ್ಯ ನೀಡುವ ವ್ಯವಸ್ಥೆ ಇದೀಗ ಕುಕ್ಕರಹಳ್ಳಿ ಕೆರೆ ಆವರಣಕ್ಕೆ ಸ್ಥಳಾಂತರಗೊಂಡಿದೆ. ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಪಾರಿವಾಳಗಳಿಗೆ ಧಾನ್ಯ ಹಾಕುವುದನ್ನು ಸ್ಥಗಿತಗೊಳಿಸಿದ ನಂತರ ಪಕ್ಷಿ ಪ್ರಿಯರು ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಪಕ್ಷಿಗಳಿಗೆ ಧಾನ್ಯ ಹಾಕಲಾರಂಭಿಸಿದ್ದಾರೆ. ಅದನ್ನು ತಿನ್ನಲು ಪಾರಿವಾಳಗಳು ಅಲ್ಲಿಗೆ ಬರುತ್ತಿವೆ ಎಂದು ಕೆಲ ವಾಯುವಿಹಾರಿಗಳು ತಿಳಿಸಿದ್ದಾರೆ.



ಲೋಕನಾಥ್

ಅದರಿಂದಾಗಿ ದಿನದಿಂದ ದಿನಕ್ಕೆ ಪಾರಿವಾಳಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಅದರಿಂದ ಕುಕ್ಕರಹಳ್ಳಿ ಕೆರೆಯ ಸೂಕ್ಷ್ಮ ಪರಿಸರಕ್ಕೆ ಹಾನಿಯಾಗುತ್ತಿದೆ. ಕೆರೆಯಲ್ಲಿನ ಇತರ ಪಕ್ಷಿ ಪ್ರಭೇದಗಳ ನೈಸರ್ಗಿಕ ಆವಾಸ ಸ್ಥಾನಕ್ಕೆ ಅಪಾಯ ಉಂಟಾಗುತ್ತಿದೆ ಎಂದು ಕೆಲ ಪರಿಸರ ಪ್ರೇಮಿಗಳು ಅಭಿಪ್ರಾಯಪಟ್ಟಿದ್ದಾರೆ. ಪಾರಿವಾಳಗಳ ಹಿಕ್ಕೆಗಳು ಅನಾರೋಗ್ಯ ಪೀಡಿತರು, ಹಿರಿಯ ನಾಗರಿಕರು, ರೋಗ ನಿರೋಧಕ ಶಕ್ತಿ ಕಡಿಮೆ ಇರುವವರು ಹಾಗೂ ಮಕ್ಕಳ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವುದಲ್ಲದೆ, ಸೋಂಕು ಹರಡುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ ಎಂದು ಹಲವರು ತಿಳಿಸಿದ್ದಾರೆ. ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಧಾನ್ಯ ಹಾಕುವುದರಿಂದ ಪಾರಿವಾಳಗಳು ಮಾನಸ ಗಂಗೋತ್ರಿ ಆವರಣದಲ್ಲಿರುವ ಹಲವು ಪಾರಂಪರಿಕ ಕಟ್ಟಡಗಳಲ್ಲಿ ಆಶ್ರಯ ಪಡೆದು ಅಪಾಯ ತಂದೊಡ್ಡುವ ಸಾಧ್ಯತೆ ಇದೆ ಎಂದಿರುವ ಬೆಳಗ್ಗೆ ವಾಯುವಿಹಾರ ನಡೆಸುವವರು ಕಾಳಜಿ ವ್ಯಕ್ತಪಡಿಸಿದ್ದಾರೆ. ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರು, ಈ ಬಗ್ಗೆ ಪರಿಶೀಲಿಸಿ ಪಾರಿವಾಳಗಳಿಗೆ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಆಹಾರ ನೀಡದಂತೆ ಕ್ರಮ ವಹಿಸಲಾಗುವುದು ಎಂದರು.

ಸುರಕ್ಷತಾ ಕ್ರಮ

ಮೈಸೂರು, ಜ.16(ಆರ್‌ಕೆ)- ವಾಯುವಿಹಾರಕ್ಕೆ ಬರುವ ಹಿರಿಯ ನಾಗರಿಕರು, ಕೆರೆ ಆವರಣದಲ್ಲಿರುವ ಪ್ರಾಣಿಗಳು, ಜಲಚರಗಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಬೀದಿನಾಯಿಗಳು, ಪಕ್ಷಿಗಳು ಹಾಗೂ ಜಲಚರಗಳಿಗೆ ಆಹಾರ ಹಾಕುವುದನ್ನು ನಿಷೇಧಿಸಲಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದ್ದಾರೆ 'ಮೈಸೂರು ಮಿತ್ರ'ನಿಗೆ ಈ ಸಂಬಂಧ ಪ್ರತಿಕ್ರಿಯೆ ನೀಡಿದ ಅವರು, ಪ್ರತೀ ದಿನ ಬೆಳಗ್ಗೆ ಮತ್ತು ಸಂಜೆ ವೇಳೆ ವಾಯುವಿಹಾರಕ್ಕೆ ಬರುವ ಬಹುತೇಕ ಹಿರಿಯ ನಾಗರಿಕರು ತಮಗೆ ಕರೆ ಮಾಡಿ ಕೆರೆ ಆವರಣದಲ್ಲಿ ಬೀದಿನಾಯಿಗಳ ಹಾವಳಿ ಜಾಸ್ತಿಯಾಗಿರುವುದರಿಂದ ನಮಗೆ ತೀವ್ರ ತೊಂದರೆಯಾಗುತ್ತಿದೆ ಎಂದು ದೂರಿದ್ದರು. ಅವರ ರಕ್ಷಣೆ ನಮ್ಮ ಜವಾಬ್ದಾರಿಯಾಗಿರುವುದರಿಂದ ವಿಶ್ವವಿದ್ಯಾನಿಲಯವು ಈ ಕ್ರಮ ಕೈಗೊಂಡಿದೆ ಎಂದರು.

ನಾಳೆ ಮೈಸೂರು ವಿಶ್ವವಿದ್ಯಾನಿಲಯದ 105ನೇ ಘಟಿಕೋತ್ಸವ

● 31,689 ವಿದ್ಯಾರ್ಥಿಗಳಿಗೆ ನಾನಾ ಪದವಿ ಪ್ರದಾನ ● ಖಾಲಿ ಇರುವ ಉಪನ್ಯಾಸಕರ ಹುದ್ದೆ ಭರ್ತಿಗೆ ಕ್ರಮ ● ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾಹಿತಿ



ಮೈಸೂರು ವಿವಿಯ ಕ್ರಾಫರ್ಡ್ ಭವನ(ಕಾರ್ಯಸೌಧ)ದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿದರು. ಕುಲಸಚಿವ(ಪರೀಕ್ಷಾಂಗ) ಪ್ರೊ.ಎನ್.ನಾಗರಾಜ ಉಪಸ್ಥಿತರಿದ್ದರು.

ಮೈಸೂರು, ಜ.16(ಎಂಕೆ)- ಮೈಸೂರು ವಿಶ್ವವಿದ್ಯಾನಿಲಯದ 105ನೇ ವಾರ್ಷಿಕ ಘಟಿಕೋತ್ಸವ ಸಮಾರಂಭ ಜ.18 ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದ್ದು, ಪದವಿ, ಸ್ನಾತಕೋತ್ತರ ಪದವಿ ಹಾಗೂ ಪಿಹೆಚ್.ಡಿ ಸೇರಿ ಒಟ್ಟು 31,689 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು ಎಂದು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದರು.

ವಿವಿಯ ಕ್ರಾಫರ್ಡ್ ಭವನ(ಕಾರ್ಯಸೌಧ)ದಲ್ಲಿರುವ ಶೈಕ್ಷಣಿಕ ಮಂಡಳಿ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, ರಾಜ್ಯಪಾಲರು ಹಾಗೂ ಕುಲಾಧಿಪತಿಗಳಾದ ಥಾವರ್ ಚಂದ್ ಗೆಹ್ಲೋಟ್ ಘಟಿಕೋತ್ಸವದ ಅಧ್ಯಕ್ಷತೆ ವಹಿಸಲಿದ್ದಾರೆ. ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬಯೋಫಿಸಿಕ್ಸ್ ವಿಭಾಗದ ಜೈವಿಕ ತಂತ್ರಜ್ಞಾನ ಪ್ರಾಧ್ಯಾಪಕ ಡಾ.ಟಿ.ಪಿ.ಸಿಂಗ್ ಘಟಿಕೋತ್ಸವದ ಭಾಷಣ ಮಾಡಲಿದ್ದು, ಉನ್ನತ ಶಿಕ್ಷಣ ಸಚಿವರಾದ ಡಾ.ಎಂ.ಸಿ.ಸುಧಾಕರ್ ಉಪಸ್ಥಿತರಿರಲಿದ್ದಾರೆ ಎಂದು ಮಾಹಿತಿ ನೀಡಿದರು.

ಪದವಿಯಲ್ಲಿ 9,277 ವಿದ್ಯಾರ್ಥಿಗಳು, 15,808 ವಿದ್ಯಾರ್ಥಿನಿಯರು, ಸ್ನಾತಕೋತ್ತರ ಪದವಿಯಲ್ಲಿ 2,226 ವಿದ್ಯಾರ್ಥಿಗಳು, 4,074 ವಿದ್ಯಾರ್ಥಿನಿಯರು ಹಾಗೂ ಪಿಹೆಚ್.ಡಿಯಲ್ಲಿ 164 ವಿದ್ಯಾರ್ಥಿಗಳು, 140 ವಿದ್ಯಾರ್ಥಿನಿಯರು ಸೇರಿ ಒಟ್ಟಾರೆ 31,689 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು. ಅದರಲ್ಲಿ ಶೇ.63.18 ರಷ್ಟು ವಿದ್ಯಾರ್ಥಿನಿಯರಿದ್ದರೆ, ಶೇ.36.81ರಷ್ಟು ವಿದ್ಯಾರ್ಥಿಗಳಿದ್ದು ಮೈಸೂರು ವಿವಿಯಲ್ಲಿ ಮಹಿಳಾ ಪದವೀಧರರ ಸಂಖ್ಯೆ ಹೆಚ್ಚಾಗಿರುವುದು ಮಹಿಳಾ ಸಬಲೀಕರಣಕ್ಕೆ ನಿದರ್ಶನವಾಗಿದೆ ಎಂದರು.

216 ಮಂದಿಗೆ ಗೋಲ್ಡ್ ಮೆಡಲ್: ಘಟಿಕೋತ್ಸವದಲ್ಲಿ 413 ಪದಕಗಳು ಹಾಗೂ 208 ಬಹುಮಾನ ವಿತರಿಸಲಿದ್ದು, 216 ಮಂದಿ ಪದಕ ಹಾಗೂ ನಗದು ಬಹುಮಾನಗಳಿಗೆ ಭಾಜನರಾಗಿದ್ದು, ಅವರಲ್ಲಿ 139 ಮಹಿಳೆಯರಿದ್ದಾರೆ. **ಕಲಾ ವಿಭಾಗದಲ್ಲಿ** ಎಂ.ಎ ಕನ್ನಡ ವಿಷಯದಲ್ಲಿ ಸಿ.ಕಾವ್ಯ, 11 ಪದಕಗಳು ಮತ್ತು 5 ನಗದು ಬಹುಮಾನ, ಎಂ.ಎ.ಸಂಸ್ಕೃತದಲ್ಲಿ ಸೀಮಾ ಸಾಂಬಾ ಹೆಗ್ಡೆ, 13 ಪದಕ ಮತ್ತು 1 ನಗದು ಬಹುಮಾನ ಹಾಗೂ ಪದವಿಯಲ್ಲಿ ಪಿ.ಕೆ.ಸಂಗೀತ 5 ಪದಕ ಮತ್ತು 7 ನಗದು ಬಹುಮಾನ ಮತ್ತು ಕೆ.ಹೆಚ್.ದರ್ಶನ್ 2 ಪದಕ ಮತ್ತು 1 ನಗದು ಬಹುಮಾನ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಎಂಕಾಂ ವಿದ್ಯಾರ್ಥಿ ಎನ್.ರಕ್ಷಿತಾ, 4 ಪದಕ ಮತ್ತು 1 ನಗದು ಬಹುಮಾನ ಹಾಗೂ ಸಂಜನಾ ಪ್ರಭು, 3 ಪದಕ ಮತ್ತು 2 ನಗದು ಬಹುಮಾನ, ಬಿಕಾಂನಲ್ಲಿ ಕೆ.ಖುಷಿ 3 ಪದಕ ಮತ್ತು 2 ನಗದು ಬಹುಮಾನ ಪಡೆದರೆ, **ಶಿಕ್ಷಣ ವಿಭಾಗದಲ್ಲಿ** ಎಂಇಡಿ ವಿದ್ಯಾರ್ಥಿ ಎನ್.ಹರ್ಷಿತಾ, 5 ಪದಕ ಮತ್ತು 2 ನಗದು ಬಹುಮಾನ, ಬಿಇಡಿನಲ್ಲಿ ಎಸ್.ಕೀರ್ತನಾ 2 ಪದಕ ಮತ್ತು 2 ನಗದು ಬಹುಮಾನ ಪಡೆದುಕೊಂಡಿದ್ದಾರೆ.


ಹಾಗೆಯೇ **ಕಾನೂನು ವಿಭಾಗದಲ್ಲಿ** ಎಲ್‌ಎಲ್‌ಎಂ ವಿದ್ಯಾರ್ಥಿ ಆರ್.ದೇವಾನಂದ್, 3 ಪದಕ ಮತ್ತು 3 ನಗದು ಬಹುಮಾನ, ಬಿ.ಎ ಎಲ್‌ಎಲ್‌ಬಿ ವಿದ್ಯಾರ್ಥಿ ಪ್ರತೀಕ್ಷಾ ಪಾವಸ್ಕರ್, 1 ಪದಕ ಪಡೆದರೆ, **ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ** ಎಂ.ಎಸ್ಸಿ ಕೆಮಿಸ್ಟ್ರಿಯಲ್ಲಿ ಎಂ.ಆರ್.ಭೂಮಿಕಾ, 18 ಪದಕ ಮತ್ತು 4 ನಗದು ಬಹುಮಾನ, ಎಂಎಸ್ಸಿ ಸಸ್ಯಶಾಸ್ತ್ರ ವಿವಿನಾ ಸ್ವೀಡಲ್ ಥೋರಸ್ 10 ಪದಕ ಮತ್ತು 2 ನಗದು ಬಹುಮಾನ, ಬಿಎಸ್ಸಿಯಲ್ಲಿ ಬಿ.ವಿ.ವಿನಯ್ 6 ಪದಕ ಮತ್ತು 5 ನಗದು ಬಹುಮಾನ ಹಾಗೂ ಎಂ.ಎಸ್.ದೀಪಿಕಾ ಗೌಡ 4 ಪದಕ ಮತ್ತು 7 ನಗದು ಬಹುಮಾನ ಪಡೆದಿದ್ದಾರೆ.

ಶೇ.73ರಷ್ಟು ಕೊರತೆ: ಮೈಸೂರು ವಿವಿಯಲ್ಲಿ ಶೇ.73 ರಷ್ಟು ಉಪನ್ಯಾಸಕರ ಕೊರತೆ ಇದ್ದು, ಸದ್ಯಕ್ಕೆ ಅತಿಥಿ ಉಪನ್ಯಾಸಕರಿಂದ ಉತ್ತಮವಾಗಿ ನಿರ್ವಹಣೆ ಮಾಡಲಾಗುತ್ತಿದೆ. 10-15 ವರ್ಷದ ಅನುಭವವುಳ್ಳ ಅತಿಥಿ ಉಪನ್ಯಾಸಕರು ಇರುವುದರಿಂದ ಶೈಕ್ಷಣಿಕ ಗುಣಮಟ್ಟ ಕಾಯ್ದುಕೊಳ್ಳಲು ಅನುಕೂಲವಾಗಿದೆ ಆದರೂ ಖಾಯಂ ಉಪನ್ಯಾಸಕರ ಅಗತ್ಯವಿದೆ. ಈಗಾಗಲೇ ಖಾಲಿ ಇರುವ ಹುದ್ದೆಗಳ ಭರ್ತಿ ಸಂಬಂಧ ಪ್ರಕ್ರಿಯೆ ನಡೆಯುತ್ತಿದ್ದು, ಹಣಕಾಸು ಇಲಾಖೆಯಿಂದ ಅನುಮತಿ ದೊರೆಯಬೇಕಿದೆ. 76 ಬ್ಯಾಕ್‌ಲಾಕ್ ಹುದ್ದೆಗಳನ್ನು ಮೊದಲು ತುಂಬಲಾಗುತ್ತಿದೆ ಎಂದು ತಿಳಿಸಿದರು. ಕುಲಸಚಿವ(ಪರೀಕ್ಷಾಂಗ) ಪ್ರೊ.ಎನ್.ನಾಗರಾಜ ಉಪಸ್ಥಿತರಿದ್ದರು.

ಡಾ.ಸುಧಾಮೂರ್ತಿ, ಡಾ.ಎ.ಸಿ.ಷಣ್ಮುಗಂ, ಡಾ.ಬಾಬು ಕೆ.ವೀರೇಗೌಡ, ಶಾಹೀನ್ ಮಜೀದ್‌ಗೆ ಗೌರವ ಡಾಕ್ಟರೇಟ್




ಡಾ.ಸುಧಾಮೂರ್ತಿ



ಡಾ.ಎ.ಸಿ.ಷಣ್ಮುಗಂ



ಡಾ.ಕೆ.ವೀರೇಗೌಡ



ಶಾಹೀನ್ ಮಜೀದ್

ಮೈಸೂರು, ಜ.16(ಎಂಕೆ)- ಮೈಸೂರು ವಿಶ್ವವಿದ್ಯಾನಿಲಯದ 105ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮೂವರು ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿ ನೀಡಲಾಗುತ್ತಿದ್ದು, 2020ನೇ ಸಾಲಿನ ಗೌರವ ಡಾಕ್ಟರೇಟ್‌ಗೆ ಭಾಜನರಾಗಿದ್ದ ಇನ್ಫೋಸಿಸ್ ಪ್ರತಿಷ್ಠಾನದ ಸಂಸ್ಥಾಪಕರಾದ ಡಾ.ಸುಧಾಮೂರ್ತಿ ಅವರಿಗೂ ಪದವಿ ಪ್ರದಾನ ಮಾಡಲಾಗುವುದು ಎಂದು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದರು.

ಮಾಜಿ ಸಂಸದರೂ ಆದ ರಾಜರಾಜೇಶ್ವರಿ ವಿದ್ಯಾಸಂಸ್ಥೆಗಳ ಸಂಸ್ಥಾಪಕರಾದ ಡಾ.ಎ.ಸಿ.ಷಣ್ಮುಗಂ ಅವರಿಗೆ ಶಿಕ್ಷಣ ಮತ್ತು ಸಮಾಜಸೇವೆಯನ್ನು ಪರಿಗಣಿಸಿ ಗೌರವ ಡಾಕ್ಟರೇಟ್ ನೀಡಲಾಗುವುದು. ಉದ್ಯಮಿ ಹಾಗೂ ಸಮಾಜಸೇವೆಯನ್ನು ಪರಿಗಣಿಸಿ ಹೆಚ್‌ಎನ್‌ಟಿಬಿಯ ಈಶಾನ್ಯ ವಿಭಾಗದ ಉಪಾಧ್ಯಕ್ಷ ಹಾಗೂ ಮುಖ್ಯ ಸಾರಿಗೆ ಮತ್ತು ಸಂಚಾರ ಇಂಜಿನಿಯರ್ ಡಾ.ಬಾಬು ಕೆ.ವೀರೇಗೌಡ ಹಾಗೂ ಸಂಶೋಧನೆ ಮತ್ತು ನಾವೀನ್ಯತೆಗೆ ನೀಡಿದ ಕೊಡುಗೆ ಆಧರಿಸಿ, ಸಮಿ-ಸಬಿನ್ಸಾ ಗ್ರೂಪ್ ನ್ಯೂಟ್ರಾಸ್ಯುಟಿಕಲ್ ಕಂಪನಿಯ ಗ್ಲೋಬಲ್ ಸಿಇಓ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಶಾಹೀನ್ ಮಜೀದ್ ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗುತ್ತಿದೆ ಎಂದು ವಿವರಿಸಿದರು.

ಹಾಗೆಯೇ 2020ನೇ ಸಾಲಿನ 100ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್‌ಗೆ ಭಾಜನರಾಗಿದ್ದ ಇನ್ಫೋಸಿಸ್ ಪ್ರತಿಷ್ಠಾನದ ಸಂಸ್ಥಾಪಕರಾದ ಡಾ.ಸುಧಾಮೂರ್ತಿ ಅವರು ಕೊರೊನಾ ಹಿನ್ನೆಲೆಯಲ್ಲಿ ಆಗಿನ ಘಟಿಕೋತ್ಸವದಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಆದ್ದರಿಂದ ಈ ವರ್ಷದ ಘಟಿಕೋತ್ಸವದ ವೇಳೆಯೇ ಅವರಿಗೂ ಪದವಿ ಪ್ರದಾನ ಮಾಡಲಾಗುವುದು. ಗೌರವ ಡಾಕ್ಟರೇಟ್‌ಗೆ ಸುಮಾರು 12-13 ಮಂದಿ ಹೆಸರುಗಳು ಬಂದಿದ್ದು, ರಾಜ್ಯಪಾಲರ ನೇತೃತ್ವದ ಕಮಿಟಿ ನಿರ್ಧಾರದಂತೆ ಮೂವರಿಗೆ ಗೌರವ ಡಾಕ್ಟರೇಟ್ ನೀಡಲಾಗುತ್ತಿದೆ ಎಂದು ತಿಳಿಸಿದರು.

ನಾಳೆ ಡಾ.ಗಂಗೂಬಾಯಿ ಹಾನಗಲ್ ಸಂಗೀತ ವಿವಿಯ 7, 8, 9ನೇ ವಾರ್ಷಿಕ ಘಟಿಕೋತ್ಸವ

ಚಲನಚಿತ್ರ ನಟಿ ಗಿರಿಜಾ ಲೋಕೇಶ್, ಸಾಧುಕೋಕಿಲ, ರಂಗಕರ್ಮಿ ಸಿ.ಬಸವಲಿಂಗಯ್ಯ ಸೇರಿದಂತೆ 9 ಮಂದಿಗೆ ಗೌರವ ಡಾಕ್ಟರೇಟ್ ಪ್ರದಾನ


ಗಿರಿಜಾ ಲೋಕೇಶ್


ಸಾಧು ಕೋಕಿಲಾ


ಸಿ.ಬಸವಲಿಂಗಯ್ಯ

ಮೈಸೂರು, ಜ.16(ಜಿಎ)–ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ 7, 8, 9ನೇ ವಾರ್ಷಿಕ ಘಟಿಕೋತ್ಸವವನ್ನು ಜ.18ರಂದು ಮಧ್ಯಾಹ್ನ 3 ಗಂಟೆಗೆ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದು, 9 ಮಂದಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುತ್ತಿದೆ ಎಂದು ವಿವಿಯ ಕುಲಪತಿ ಪ್ರೊ.ನಾಗೇಶ್.ವಿ ಬೆಟ್ಟಕೋಟೆ ತಿಳಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ, ಪದವಿ ಪ್ರದಾನ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶ್ರೀನಿವಾಸ ವರಖೇಡಿ ಮತ್ತು ಉನ್ನತ ಶಿಕ್ಷಣ ಸಚಿವರಾದ ಡಾ.ಎಂ.ಸಿ. ಸುಧಾಕರ್ ಆಗಮಿಸಲಿದ್ದಾರೆ ಎಂದರು.

ಘಟಿಕೋತ್ಸವದಲ್ಲಿ 2021–22ನೇ ಸಾಲಿನಲ್ಲಿ ಭರತನಾಟ್ಯ ಕಲಾವಿದ ಸತ್ಯನಾರಾಯಣರಾಜು, ವಿದ್ವಾನ್ ಸಿ.ಚೆಲುವರಾಜು, ರಂಗಭೂಮಿ ಹಾಗೂ ಚಲನಚಿತ್ರನಟಿ ಗಿರಿಜಾ ಲೋಕೇಶ್, 2022–23ನೇ ಸಾಲಿನಲ್ಲಿ ಭರತನಾಟ್ಯ ಕಲಾವಿದೆ ಸಂಧ್ಯಾ ಪುರೇಚ, ಗಮಕ ವಿದ್ವಾನ್ ಎಂ.ಆರ್.ಸತ್ಯನಾರಾಯಣ, ಪ್ರದರ್ಶಕ ಕಲೆಗಳ ವಿಭಾಗದಿಂದ ಚಲನಚಿತ್ರನಟ, ಸಂಗೀತ ನಿರ್ದೇಶಕ ಸಾಧು ಕೋಕಿಲ, 2023–24ನೇ ಸಾಲಿನಲ್ಲಿ ವಿದುಷಿ ವೀಣಾಮೂರ್ತಿ ವಿಜಯ್, ವಿದುಷಿ ಪುಷ್ಪಾ ಶ್ರೀನಿವಾಸನ್ ಹಾಗೂ ರಂಗಕರ್ಮಿ ಸಿ.ಬಸವಲಿಂಗಯ್ಯ ಅವರಿಗೆ ಡಾಕ್ಟರೇಟ್ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.


ಪ್ರೊ.ನಾಗೇಶ್


ಒಟ್ಟು 14 ಮಂದಿಗೆ ಡಿ.ಲಿಟ್ ಪದವಿ ನೀಡಲಾಗುವುದು. 27 ವಿದ್ಯಾರ್ಥಿಗಳು ಒಟ್ಟು 69 ಚಿನ್ನದ ಪದಕ ಪಡೆದುಕೊಂಡಿದ್ದಾರೆ. ಮೂರು ವರ್ಷಗಳಲ್ಲಿ ಒಟ್ಟು 540 ಮಂದಿಗೆ ವಿವಿಧ ಪದವಿ ಪ್ರದಾನ ಮಾಡಲಾಗುವುದು. 2021–22ರ ಎಂಪಿವಿ ಕೋರ್ಸ್‌ನಲ್ಲಿ ಮೈಸೂರಿನ ವಿ.ವಿಜಯಶ್ರೀ 9 ಚಿನ್ನದ ಪದಕ ಪಡೆದಿದ್ದಾರೆ. 2022–23ರಲ್ಲಿ ಎಲ್.ಬಿ. ಬಿಂದು 6, ಟಿ.ಎ.ಕೀರ್ತನಾ 5, 2023–24ನೇ ಸಾಲಿನಲ್ಲಿ ಕೆ.ಆರ್.ಅಶ್ವಿನಿ ಹಾಗೂ ಬಿ.ಆರ್.ಮನೋಜ ತಲಾ 6 ಚಿನ್ನದ ಪದಕ ಪಡೆದಿದ್ದಾರೆ. ಸಿದ್ದಿ ಸಮಾಜದ ರೇಣುಕಾ ಸಿದ್ದಿ ನಾಟಕ ವಿಭಾಗದಲ್ಲಿ ಚಿನ್ನದ ಪದಕ ಗಳಿಸಿರುವುದು ವಿಶೇಷ ಎಂದು ತಿಳಿಸಿದರು.

ಬಿಪಿಎ ವಿಭಾಗದಲ್ಲಿ 2021–22ರಲ್ಲಿ ಡಿ.ಎಸ್.ಕಾವೇರಿ 3 ಹಾಗೂ ಎಸ್.ಎ. ಅಶ್ವಿನಿ 2, 2022–23ರಲ್ಲಿ ಆರ್.ರಂಜಿನಿಶ್ರೀ 6, ಡಿ.ಎನ್.ಇಂದ್ರಕುಮಾರ್ 2, 2023–24ರಲ್ಲಿ ಪಿ.ಆರ್.ರೂಪಾ 5 ಮತ್ತು ಬಿ.ಆರ್. ಶ್ರೀಹರಿ ಭಟ್ 2 ಚಿನ್ನದ ಪದಕ ಗಳಿಸಿದ್ದಾರೆ ಎಂದು ತಿಳಿಸಿದರು.

ವಿ.ವಿ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿ 15 ವರ್ಷ ತುಂಬುತ್ತಿದೆ. ಈಗ 7, 8 ಹಾಗೂ 9ನೇ ವಾರ್ಷಿಕ ಘಟಿಕೋತ್ಸವವನ್ನು ಒಟ್ಟಿಗೇ ನಡೆಸಲಾಗುತ್ತಿದೆ. ಪದವಿ ಪಡೆಯುತ್ತಿರುವವರೆಲ್ಲರೂ ನಮ್ಮಲ್ಲೇ ವ್ಯಾಸಂಗ ಮಾಡಿದವರಾಗಿದ್ದಾರೆ. ಕಳೆದೊಂದು ವರ್ಷದಿಂದ ರಾಜ್ಯದಾದ್ಯಂತ 70 ಸಂಸ್ಥೆಗಳ ಜತೆಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಸ್ನಾತಕ, ಸ್ನಾತಕೋತ್ತರ ಪದವಿ, ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ಅಲ್ಲಿ ಪದವಿ ಪಡೆದವರು ಎರಡು ವರ್ಷದ ನಂತರದ ಘಟಿಕೋತ್ಸವದಲ್ಲಿ ಪ್ರಮಾಣಪತ್ರ ಸ್ವೀಕರಿಸಲಿದ್ದಾರೆ ಎಂದರು.

ಮೈಸೂರು ತಾಲೂಕಿನ ನಾಡನಹಳ್ಳಿ ಬಳಿ ಐದೂವರೆ ಎಕರೆ ಜಾಗದಲ್ಲಿ ವಿವಿಯ ಕ್ಯಾಂಪಸ್ ನಿರ್ಮಾಣ ಮಾಡಲಾಗುವುದು. 10 ಕೋಟಿ ರೂ ವೆಚ್ಚದಲ್ಲಿ ಎರಡು ಹಂತಗಳಲ್ಲಿ ಆಡಳಿತಾತ್ಮಕ ವಿಭಾಗ , ತರಗತಿ ಕೊಠಡಿ ನಿರ್ಮಾಣ ಕಾಮಗಾರಿ ಶೀಘ್ರದಲ್ಲೇ ಆರಂಭವಾಗಲಿದೆ ಎಂದು ತಿಳಿಸಿದರು.

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಚುನಾವಣೆ: ಮತಯಾಚನೆ


ಜನವರಿ 19ರಂದು ನಡೆಯಲಿರುವ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆ ಹಿನ್ನೆಲೆಯಲ್ಲಿ ಎಸ್‌ಟಿ ವಿಭಾಗದ ಬ್ಯಾಂಕಿನ ಮಾಜಿ ಉಪಾಧ್ಯಕ್ಷರೂ ಆದ ಹಾಲಿ ನಿರ್ದೇಶಕ ವಕೀಲ ಪಡುವಾರಹಳ್ಳಿ ಎಂ.ರಾಮಕೃಷ್ಣ, ಸಾಮಾನ್ಯ ಕ್ಷೇತ್ರದ ಎಂ.ಕುಮಾರ್ ಷೇರುದಾರರಲ್ಲಿ ಮತಯಾಚಿಸಿದರು.

ಬೆಂಗಳೂರಲ್ಲಿ ಹಸುವಿನ ಕೆಚ್ಚಲು ಕತ್ತರಿಸಿದ ಬೆನ್ನ ಹಿಂದೆಯೇ

ಈಗ ನಂ.ಗೂಡಲ್ಲಿ ಗೂಳಿಯ ಬಾಲ ತುಂಡರಿಸಿದ ದುಷ್ಕರ್ಮಿಗಳು!

ನಂಜನಗೂಡು, ಜ.16– ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಹಸುವಿನ ಕೆಚ್ಚಲು ಕುಯ್ದ ಕಹಿ ಘಟನೆ ಮಾಸುವ ಮುನ್ನವೇ ದಕ್ಷಿಣಕಾಶಿ ನಂಜನಗೂಡಿನ ಶ್ರೀನಂಜುಂಡೇಶ್ವರನಿಗೆ ಹರಕೆ ಬಿಟ್ಟಿದ್ದ ಗೂಳಿ ಮೇಲೆ ಕಿಡಿಗೇಡಿಗಳು ಮಾರಕಾಸ್ತ್ರದಿಂದ ದಾಳಿ ನಡೆಸಿ ಅದರ ಬಾಲ ತುಂಡರಿಸಿದ್ದಾರೆ.

ಶ್ರೀನಂಜುಂಡೇಶ್ವರಸ್ವಾಮಿ ದೇವಾಲಯದ ಸಮೀಪದ ಹಳ್ಳದಕೇರಿ ಬಡಾವಣೆ ಬಳಿ ಈ ಘಟನೆ ನಡೆದಿದ್ದು, ರಸ್ತೆಯಲ್ಲಿ ಓಡಾಡಿಕೊಂಡು ನಿಂತಿದ್ದ ಹರಕೆ ಗೂಳಿ ಬಾಲವನ್ನು ಮಚ್ಚಿನಿಂದ ಕತ್ತರಿಸಿದ್ದಾರೆ. ಜೊತೆಗೆ ಕಾಲಿಗೆ ಮಾರಕಾಸ್ತ್ರಗಳಿಂದ ಹೊಡೆದು ಮಾರಣಾಂತಿಕವಾಗಿ ಗಾಯಗೊಳಿಸಿದ್ದಾರೆ. ಇದರಿಂದ ಗೂಳಿ ರಕ್ತದ ಮಡುವಿನಲ್ಲಿ ಬಿದ್ದು ನರಳಾಡುತ್ತಿದ್ದು, ಸ್ಥಳೀಯರು ಅದನ್ನು ಗಮನಿಸಿ ಪಶು ವೈದ್ಯರಿಗೆ ವಿಷಯ ತಿಳಿಸಿದ್ದು, ಸ್ಥಳಕ್ಕೆ ಬಂದ ಪಶು ವೈದ್ಯರು ಗೂಳಿಗೆ ಚಿಕಿತ್ಸೆ ನೀಡಿ, ರಕ್ಷಣೆ ಮಾಡಿದ್ದಾರೆ. ಸದ್ಯ ಗೂಳಿ ಪ್ರಾಣಾಪಾಯದಿಂದ ಪಾರಾಗಿದೆ.



ಎಸ್ಪಿ ವಿಷ್ಣುವರ್ಧನ್ ಸ್ಥಳಕ್ಕೆ ಭೇಟಿ, ಪರಿಶೀಲನೆ: ಸ್ಥಳಕ್ಕೆ ಎಸ್‌ಪಿ ವಿಷ್ಣುವರ್ಧನ್ ಭೇಟಿ ನೀಡಿ, ಪರಿಶೀಲಿಸಿದರು. ಈ ವೇಳೆ ಮಾತನಾಡಿ, ಈಗಾಗಲೇ ಘಟನೆ ಸಂಬಂಧ ಸುಮೋಟೋ ಕೇಸ್ ದಾಖಲಿಸಿಕೊಂಡು, ತನಿಖೆ ಪ್ರಾರಂಭಿಸಲಾಗಿದ್ದು, ಡಿವೈಎಸ್ಪಿ ರಘು ನೇತೃತ್ವದಲ್ಲಿ 2 ತಂಡಗಳನ್ನು ರಚನೆ ಮಾಡಲಾಗಿದೆ. ಈ ಘಟನೆ ಯಾವ ರೀತಿ ಜರುಗಿದೆ. ಕಿಡಿಗೇಡಿಗಳು ಯಾರು ಎಂಬುದರ ಬಗ್ಗೆ ಎಲ್ಲಾ ಆಯಾಮಗಳಿಂದಲೂ ತನಿಖೆ ಪ್ರಾರಂಭಿಸಲಾಗಿದೆ. ಪ್ರಕರಣದಲ್ಲಿ ಭಾಗಿಯಾದ ಆರೋಪಿಗಳನ್ನು ಶೀಘ್ರದಲ್ಲೇ ಬಂಧಿಸಲಾಗುವುದು ಎಂದರು. ಘಟನೆ ಸುದ್ದಿ ತಿಳಿಯುತ್ತಿದ್ದಂತೆ ಹಳ್ಳದಕೇರಿ ಬಡಾವಣೆಯಲ್ಲಿ ಜಮಾವಣೆಗೊಂಡ ಶ್ರೀಕಂಠೇಶ್ವರ ಭಕ್ತ ಮಂಡಳಿ ಸದಸ್ಯರು ಸರ್ಕಾರ ಹಾಗೂ ದೇವಾಲಯದ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ ಪ್ರತಿಭಟನೆ ನಡೆಸಿದರು.

ಶ್ರೀಕಂಠೇಶ್ವರ ಭಕ್ತ ಮಂಡಳಿ ಸದಸ್ಯ ಸುನೀಲ್ ಕುಮಾರ್ ಮಾತನಾಡಿ, ಕಳೆದ ನಾಲ್ಕೈದು ತಿಂಗಳ ಹಿಂದೆ ಸ್ವಾಮಿಗೆ ಹರಕೆ ಬಿಟ್ಟಿದ್ದ ಗೂಳಿಯನ್ನು ದುಷ್ಕರ್ಮಿಗಳು ವ್ಯಾನಿನಲ್ಲಿ ತುಂಬಿ ಕಸಾಯಿ ಖಾನೆಗೆ ಸಾಗಿಸುತ್ತಿದ್ದ ವೇಳೆ ಸಿಕ್ಕಿಬಿದ್ದು, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಈ ಹಿನ್ನೆಲೆಯಲ್ಲಿ ಭಕ್ತರು ದೇವಾಲಯದ ಆಡಳಿತ ಮಂಡಳಿಗೆ ದೇವಾಲಯದ ಆವರಣದಲ್ಲಿ ಗೋಶಾಲೆ ನಿರ್ಮಿಸುವಂತೆ ಹಲವು ಬಾರಿ ಮನವಿ ಮಾಡಿದರೂ ಅಧಿಕಾರಿಗಳು ಕ್ರಮವಹಿಸದೆ ತಾತ್ಸಾರ ಮಾಡಿದರು. ಭಕ್ತರು ದೇವರಿಗೆ ಹರಕೆ ಹೊತ್ತು, ಹರಕೆ ಫಲಿಸಿದ ನಂತರ ದೇವರ ಹೆಸರಿನಲ್ಲಿ ಹೋರಿ ಕರುವನ್ನು ಹರಕೆ ಬಿಡುವ ಸಂಪ್ರದಾಯ ರೂಢಿಯಲ್ಲಿದೆ. ಹರಕೆ ಬಿಟ್ಟ ಕರುಗಳು ಪಾಲನೆ ಇಲ್ಲದೆ ಬೀಡಾಡಿ ದನಗಳಾಗಿ ಬೀದಿ ಸುತ್ತುತ್ತಿರುತ್ತವೆ. ಹರಕೆ ಬಿಟ್ಟ ಗೂಳಿಗಳನ್ನು ಗುರಿಯಾಗಿಸಿಕೊಂಡಿರುವ ಕೆಲವು ದುಷ್ಕರ್ಮಿಗಳು ರಾತ್ರಿ ವೇಳೆ ಕಸಾಯಿಖಾನೆಗೆ ಸಾಗಿಸುತ್ತಾರೆ. ದುಷ್ಕರ್ಮಿಗಳ ಜೊತೆ ದೇವಾಲಯದ ಅಧಿಕಾರಿಗಳು ಕೈಜೋಡಿಸಿರುವ ಸಂಶಯವಿದೆ ಎಂದು ಹೇಳಿದರು. ದೇವಾಲಯದ ಆಡಳಿತ ಮಂಡಳಿಯವರು ದೇವಾಲಯದ ಆವರಣದಲ್ಲಿ ತಾತ್ಕಾಲಿಕವಾಗಿ ಗೋಶಾಲೆ ತೆರೆಯಲು ಭರವಸೆ ನೀಡಿದ ಬಳಿಕ ಪ್ರತಿಭಟನೆ ಯನ್ನು ಕೈಬಿಟ್ಟರು.

ಪ್ರವಾಸಿ ತಾಣವಾಗಿ ವರುಣಾ ಕೆರೆ ಅಭಿವೃದ್ಧಿ

ಮೈಸೂರು, ಜ.16(ಆರ್‌ಕೆ)– ಮೈಸೂರು ತಾಲೂಕು ವರುಣಾ ಕೆರೆಯನ್ನು ಪ್ರಸಿದ್ಧ ಪ್ರವಾಸೀ ತಾಣವಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ.


ಲಕ್ಷ್ಮೀಕಾಂತ ರೆಡ್ಡಿ

ತಮ್ಮ ಕಚೇರಿ ಸಭಾಂಗಣದಲ್ಲಿ ಇಂದು ಆಯೋಜಿಸಿದ್ದ ಪ್ರವಾಸೋದ್ಯಮ ಅಭಿವೃದ್ಧಿ ಸಭೆಯಲ್ಲಿ ಮಾತನಾಡಿದ ಅವರು, ವರುಣಾ ಕೆರೆಯಲ್ಲಿ ಪ್ರವಾಸಿ ಚಟುವಟಿಕೆಗಳನ್ನು ಅಳವಡಿಸಿಕೊಂಡು ಅಭಿವೃದ್ಧಿಪಡಿಸಲು ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಅದೇ ಮಾದರಿ ಬೋಟಿಂಗ್ ಸೌಲಭ್ಯಕ್ಕೆ ಪೂರಕವಾಗಿರುವ ಜಿಲ್ಲೆಯ ಇತರ ಮೂರು ಕೆರೆಗಳನ್ನು ಗುರ್ತಿಸಿದಲ್ಲಿ ಅಲ್ಲಿಯೂ ಪ್ರವಾಸೋದ್ಯಮ ಅಭಿವೃದ್ಧಿ ಮಾಡಬಹುದು ಎಂದರು.

ಹೋಂಸ್ಟೇಗೆ ಅವಕಾಶ: ಮೈಸೂರು ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಫುಲ ಅವಕಾಶವಿರುವುದರಿಂದ ವರದಿ ತಯಾರಿಸಿದಲ್ಲಿ ಅಭಿವೃದ್ಧಿಗೆ ಕ್ರಮ ವಹಿಸಬಹುದು. ಹೋಂ ಸ್ಟೇಗಳು ಗ್ರಾಮೀಣ ಸೊಗಡಿನ ಅನುಭವ ನೀಡುತ್ತಿರುವುದರಿಂದ ಮೈಸೂರಿನ ಕೆಲ ಹೋಟೆಲ್‌ಗಳನ್ನು ಹೋಂ ಸ್ಟೇಗಳಾಗಿ ಪರಿವರ್ತಿಸಿರುವ ಬಗ್ಗೆ ಪರಿಶೀಲಿಸಿ ಎಂದ ಜಿಲ್ಲಾಧಿಕಾರಿಗಳು, 5ಕ್ಕಿಂತ ಕಡಿಮೆ ಕೊಠಡಿಗಳಿರುವ ಹೋಟೆಲ್‌ಗಳನ್ನು ಹೋಂ ಸ್ಟೇಗಳಾಗಿ ಮಾಡಿಕೊಳ್ಳಲು ಯಾವುದೇ ಕನ್ವರ್ಷನ್ ಬೇಕಿಲ್ಲ. ಅಂತಹವರಿಗೆ ಎನ್‌ಓಸಿ ನೀಡಿ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತರಿಗೆ ತಿಳಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ. ಸವಿತಾ ಅವರು, ಹೋಂ ಸ್ಟೇಗಳು ವಾಣಿಜ್ಯೋದ್ಯಮವಲ್ಲ. ಅವುಗಳನ್ನು ಪ್ರೋತ್ಸಾಹಿಸಬಹುದು ಎಂದರು. ಕೇಂದ್ರ ಪ್ರವಾಸೋದ್ಯಮ ಇಲಾಖೆಯಿಂದ ಜಿಲ್ಲೆಯಾದ್ಯಂತ ಎಲ್ಲಾ ಪ್ರವಾಸೀ ತಾಣಗಳಲ್ಲಿ ಸೆಲ್ಫಿ ಪಾಯಿಂಟ್ ಹಾಗೂ ಮಾಹಿತಿ ಫಲಕ ಅಳವಡಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ವರುಣಾ ಕೆರೆಯಲ್ಲಿ ಸಾಹಸ ಕ್ರೀಡೆಗಳು, ಜಿಪ್‌ಲೈನ್, ಸ್ಕೈ ಸೈಕಲ್, ಜಾಯಿಂಟ್ ಸಿಟ್ಟಿಂಗ್‌ನಂತಹ ಚಟುವಟಿಕೆ ಆರಂಭಿಸಲು ವಿಫುಲ ಅವಕಾಶಗಳಿವೆ. ಪ್ರವಾಸೋದ್ಯಮ ಇಲಾಖೆಯ ಸಾಮಾಜಿಕ ಜಾಲತಾಣವನ್ನು ಉನ್ನತ ಮಟ್ಟಕ್ಕೇರಿಸಲು ನೇರ ಪಾಲುದಾರು ಅಥವಾ ಖಾಸಗಿ ಸಹಭಾಗಿತ್ವ ಪಡೆಯಬಹುದಾಗಿದೆ ಎಂದು ಸವಿತಾ ತಿಳಿಸಿದರು.

ಕೇಂದ್ರದ ಸ್ವದೇಶ ದರ್ಶನ 2.0 ಅಡಿ ಮೈಸೂರು ಮೃಗಾಲಯ, ಕಾರಂಜಿ ಕೆರೆ, ಟಾಂಗಾ ರೈಡ್, ಎಕಾಲಜಿಕಲ್ ಎಕ್ಸ್‌ಪೀರಿಯನ್ಸ್ ಜೋನ್ ಅಭಿವೃದ್ಧಿಗೂ ಡಿಪಿಆರ್ ಸಲ್ಲಿಸಲಾಗಿದ್ದು, 2ನೇ ಹಂತದಲ್ಲಿ ಹಳೇ ಡಿಸಿ ಕಚೇರಿ ಪಾರಂಪರಿಕ ಕಟ್ಟಡವನ್ನು ಮ್ಯೂಸಿಯಂ ಆಗಿ ಪರಿವರ್ತನೆ ಮಾಡುವ ಸಂಬಂಧ ಕೇಂದ್ರ ಪ್ರವಾಸೋದ್ಯಮ ಸಚಿವಾಲಯಕ್ಕೆ ಡಿಪಿಆರ್ ಸಿದ್ಧಪಡಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ವಿವೇಕಾನಂದ, ಪಾಲಿಕೆ ಆಯುಕ್ತ ಆಸಾದ್ ಉರ್ ರೆಹಮಾನ್ ಶರೀಫ್, ಉಪ ಮುಖ್ಯ ಅರಣ್ಯಾಧಿಕಾರಿ ಡಾ. ಕೆ.ಎನ್.ಬಸವರಾಜು, ಡಿಸಿಪಿ ಎಂ. ಮುತ್ತುರಾಜು, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಪ್ರಭುಸ್ವಾಮಿ, ಜಿಎಸ್‌ಎಸ್‌ಎಸ್ ಯೋಗ ಸಂಸ್ಥೆಯ ಡಿ.ಶ್ರೀಹರಿ, ಪ್ರವಾಸಿ ಗೈಡ್ಸ್ ಅಸೋಸಿಯೇಷನ್ ಅಧ್ಯಕ್ಷ ಅಶೋಕ್ ಸೇರಿದಂತೆ ಇತರ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಜ.19, ಮೈಸೂರಲ್ಲಿ ಲಿಟರರಿ ಫೆಸ್ಟ್–2025



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರೊ.ಕೆ.ಸಿ.ಬೆಳ್ಳಿಯಪ್ಪ ಮಾತನಾಡಿದರು. ಈ ವೇಳೆ ಪ್ರೊ.ಅನಿತಾ ವಿಮಲಾ ಬ್ರಾಯ್ಸ್, ರೆಜಿನಾಲ್ಡ್ ವೆಸ್ಲಿ ಉಪಸ್ಥಿತರಿದ್ದರು.

ಮೈಸೂರು, ಜ.16(ಜಿಎ)–ಮೈಸೂರು ಲಿಟರರಿ ಅಸೋಸಿಯೇಷನ್ ವತಿಯಿಂದ ಜ.19ರಂದು ಬೆಳಗ್ಗೆ 10ಗಂಟೆಗೆ ನಗರದ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಮೈಸೂರು ಲಿಟರರಿ ಫೆಸ್ಟ್–2025 ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಪ್ರೊ.ಕೆ.ಸಿ. ಬೆಳ್ಳಿಯಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಖ್ಯಾತ ಲೇಖಕರಾದ ಡಾ.ಪಿ.ಸಾಯಿನಾಥ್ ಉದ್ಘಾಟಿಸುವರು. ಖ್ಯಾತ ಕ್ಯಾನ್ಸರ್ ತಜ್ಞರಾದ ಉದ್ಯಮಿ ಡಾ.ಬಿ.ಎಸ್.ಅಜಯ್‌ಕುಮಾರ್ ಡಾಕ್ಟರೋಎಂಟ್ರಪ್ರೆನರ್ ಜರ್ನಿ: ಕೇಡ್ಸ್ ಅಕ್ರಾಸ್ ಕಂಟ್ರೀಸ್ ಅಂಡ್ ಕಲ್ಚರ್ ವಿಷಯ ಕುರಿತು, ಹಿರಿಯ ವಿಜ್ಞಾನಿ ಪ್ರೊ.ಎಸ್.ಎಂ. ಶಿವಪ್ರಸಾದ್ ಅವರು ರೀಇಮ್ಯಾನಿಂಗ್ ಇಂಡಿಯನ್ ಎಜುಕೇಷನ್ ಫಾರ್ ಎ ಟೆಕ್ನಾಲಜಿಕಲಿ ಚೇಂಜಿಂಗ್ ವರ್ಡ್ ವಿಷಯ ಕುರಿತು, ಸಂಸ್ಕೃತಿ ಚಿಂತಕ ಪ್ರೊ.ರಾಜೇಂದ್ರ ಚೆನ್ನಿ ಅವರ ಕನ್ಫರ್ಮಿಟಿ ಅಂಡ್ ಟ್ರಾನ್ಸ್‌ಗ್ರೆಷನ್: ವುಮನನ್ಸ್ ಪೊಯೆಟ್ರಿ ಇನ್ ಕನ್ನಡ ವಿಷಯ ಕುರಿತು, ಕಥಾ ನಿರೂಪಕರಾದ ಲಾವಣ್ಯ ಪ್ರಸಾದ್ ಅವರು ವಾಟ್ ಈಸ್ ಯುವರ್ ಸ್ಟೋರಿ ವಿಷಯ ಕುರಿತು ಮಾತನಾಡಲಿದ್ದಾರೆ. ಆಸಕ್ತರಿಗೆ ಯಾವುದೇ ಪ್ರವೇಶ ಶುಲ್ಕವಿಲ್ಲ. ಮಾಹಿತಿಗೆ ದೂ. 99806 56631 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಗೌರವ ಕಾರ್ಯದರ್ಶಿ ರೆಜಿನಾಲ್ಡ್ ವೆಸ್ಲಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಪ್ರೊ.ಅನಿತಾ ವಿಮಲಾ ಬ್ರಾಯ್ಸ್ ಉಪಸ್ಥಿತರಿದ್ದರು.

ಜ.18, 19ರ ಬ್ರಾಹ್ಮಣ ಸಮ್ಮೇಳನದಲ್ಲಿ ಮೈಸೂರಿನ ಸಾವಿರಾರು ಮಂದಿ ಭಾಗಿ

ಮೈಸೂರು, ಜ.16(ಜಿಎ)–ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಜ.18, 19ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿರುವ ಬ್ರಾಹ್ಮಣ ಮಹಾ ಸಮ್ಮೇಳನದಲ್ಲಿ ಮೈಸೂರಿನ ಸಾವಿರಾರು ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ರಾಜ್ಯ ಉಪಾಧ್ಯಕ್ಷ ಬಿ.ಆರ್. ನಟರಾಜ ಜೋಯಿಸ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನದಲ್ಲಿ ರಾಜ್ಯ ಮಾತ್ರವಲ್ಲದೆ ದೇಶದ ವಿವಿಧೆಡೆಗಳಿಂದ ಎರಡು ಲಕ್ಷ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಈ ವೇಳೆ ಧಾರ್ಮಿಕ ಕಾರ್ಯಕ್ರಮವಿರಲಿದೆ. ಚರ್ಚೆ, ಸಂವಾದ ನಡೆಯಲಿವೆ. ಉದ್ದಿಮೆ ಸ್ಥಾಪಿಸಬಯಸುವವರಿಗೆ ಮಾರ್ಗದರ್ಶನವಿರಲಿದೆ. ಜ.18ರ ಬೆಳಗ್ಗೆ 11.30ಕ್ಕೆ ಸಮ್ಮೇಳನ ಉದ್ಘಾಟನೆಗೊಳ್ಳಲಿದೆ. 19ರ ಮಧ್ಯಾಹ್ನ 3 ಗಂಟೆಗೆ ವೇಳೆಗೆ ಆರಂಭವಾಗುವ ಧರ್ಮಸಭೆಯೊಡನೆ ಸಮಾರೋಪಗೊಳ್ಳಲಿದೆ. ಹೀಗಾಗಿ ಜಿಲ್ಲೆಯ ವಿಪ್ರ ಸಮುದಾಯದವರು ಸಹಾ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಿದರು.

ಜ.19ರಂದು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ

ತಮ್ಮ ನೇತೃತ್ವದ ತಂಡ ಬೆಂಬಲಿಸಲು ಎಸ್‌ಬಿಎಂ ಮಂಜು ಮನವಿ


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬ್ಯಾಂಕ್‌ನ ನಿರ್ದೇಶಕ ಎಸ್‌ಬಿಎಂ ಮಂಜು ಮಾತನಾಡಿದರು.

ಮೈಸೂರು, ಜ.16(ಜಿಎ)–ಮೈಸೂರಿನ ಗಾಂಧಿಚೌಕದಲ್ಲಿರುವ ಪ್ರತಿಷ್ಠಿತ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ 2025–30ನೇ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಗಳಿಗೆ ಜ.19ರಂದು ಚುನಾವಣೆ ನಡೆಯಲಿದ್ದು, ಬ್ಯಾಂಕ್‌ನ ಅಭಿವೃದ್ಧಿ ಸಲುವಾಗಿ ತಮ್ಮ ನೇತೃತ್ವದ ತಂಡವನ್ನು ಬೆಂಬಲಿಸುವಂತೆ ಬ್ಯಾಂಕ್‌ನ ನಿರ್ದೇಶಕ ಎಸ್.ಬಿ.ಎಂ. ಮಂಜು ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಮ್ಮ ತಂಡದ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಿ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಾಪಿಸಿರುವ ಈ ಬ್ಯಾಂಕ್ 119 ವರ್ಷಗಳ ಇತಿಹಾಸ ಹೊಂದಿದೆ. 36 ಸಾವಿರ ಸದಸ್ಯರಿದ್ದ ಬ್ಯಾಂಕ್‌ನಲ್ಲಿ ವ್ಯವಹಾರ ನಡೆಸದ 25 ಸಾವಿರ ಸದಸ್ಯರನ್ನು ತೆಗೆದುಹಾಕಿರುವುದರಿಂದ ಸದ್ಯ 11,200 ಜನ ಮಾತ್ರ ಮತದಾನದ ಹಕ್ಕು ಹೊಂದಿದ್ದಾರೆ. ನಗರದ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಭಾನುವಾರ ಬೆಳಿಗ್ಗೆ 9 ರಿಂದ ಸಂಜೆ 4ಗಂಟೆವರೆಗೆ ಮತದಾನ ನಡೆಯಲಿದೆ ಎಂದರು.

ಬ್ಯಾಂಕ್‌ನ ಆಡಳಿತ ಮಂಡಳಿಯ 13 ನಿರ್ದೇಶಕ ಸ್ಥಾನಗಳಿಗೆ ಏಳು ಸಾಮಾನ್ಯ ವರ್ಗ, ಒಂದು ಬಿಸಿಬಿ, ಒಂದು ಬಿಸಿಎ, ಎರಡು ಮಹಿಳಾ ಮೀಸಲು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದಿಂದ ತಲಾ ಒಂದು ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ. ಈ ಪೈಕಿ ಬಿಸಿಬಿ ವರ್ಗದಿಂದ ಟೆಂಟ್ ರವಿ ಅವರು ಅವಿರೋಧವಾಗಿ ಆಯ್ಕೆಯಾಗಿರುವುದರಿಂದ ಮತದಾರರು 12 ಮತಗಳನ್ನು ಮಾತ್ರ ಚಲಾಯಿಸಬೇಕು. 13 ಮತ ಚಲಾಯಿಸಿದರೆ ಎಲ್ಲ ಮತಗಳೂ ಅಸಿಂಧು ಆಗಲಿದೆ ಎಂಬುದನ್ನು ಮತದಾರರು ಗಮನಿಸಬೇಕು ಎಂದು ತಿಳಿಸಿದರು.

ಈ ಹಿಂದೆ ತಾವು ಕೇವಲ 9 ತಿಂಗಳುಗಳ ಕಾಲ ಬ್ಯಾಂಕ್‌ನ ಅಧ್ಯಕ್ಷರಾಗಿದ್ದಾಗ ಎಫ್‌ಡಿ ಮೇಳ, ಸಾಲಮೇಳಗಳನ್ನು ಮಾಡಿ ಅನೇಕ ಸವಲತ್ತುಗಳನ್ನು ನೀಡಿದ್ದಾಗಿ ಹೇಳಿದ ಅವರು, ಹಲವು ಕೇಸ್‌ಗಳಿಗಾಗಿಯೇ ಬ್ಯಾಂಕ್‌ನಿಂದ ತಿಂಗಳಿಗೆ ಸುಮಾರು 4.5 ಲಕ್ಷ ರೂ. ನ್ಯಾಯಾಲಯದ ಶುಲ್ಕ ಭರಿಸಲಾಗುತ್ತಿತ್ತು. ಈ ಎಲ್ಲ ಪ್ರಕರಣಗಳನ್ನು ವಾಪಸ್ ತೆಗೆಸಿದ್ದರಿಂದ ಬ್ಯಾಂಕ್‌ಗೆ ವಾರ್ಷಿಕ 40ರಿಂದ 50 ಲಕ್ಷ ರೂ. ಉಳಿತಾಯವಾಗಿದೆ ಎಂದರು.

ಮತ್ತೊಮ್ಮೆ ತಮ್ಮ ತಂಡಕ್ಕೆ ಅವಕಾಶ ಮಾಡಿಕೊಟ್ಟಲ್ಲಿ ಸರ್ಕಾರಿ ನೌಕರರು, ಬೀದಿಬದಿ ವ್ಯಾಪಾರಿಗಳು, ಉನ್ನತ ಶಿಕ್ಷಣಕ್ಕಾಗಿ ಸಾಲ, ಬ್ಯಾಂಕ್‌ನ ನೂತನ ಕಟ್ಟಡ ನಿರ್ಮಾಣ, ನಗರದ ನಾಲ್ಕೂ ಭಾಗಗಳಲ್ಲಿ ಆರೋಗ್ಯ ಶಿಬಿರಗಳ ಆಯೋಜಿಸುವುದಾಗಿ ಭರವಸೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಎಸ್.ಅರವಿಂದ, ಜಿ.ಕುಮಾರಗೌಡ, ಎಂ.ಛಾಯಮ್ಮ, ಎ.ಮಂಚಪ್ಪ, ಆರ್.ರವಿಕುಮಾರ್ (ರಾಜಕೀಯ), ಆರ್.ರವಿಕುಮಾರ್, ಎಸ್.ರೋಹಿತ್, ಎಚ್.ವಸಂತ ಮುನೀಶ್, ವೈ.ವಿಕಾಸ್ ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಇಬ್ಬರು ಸಾವು; 93 ಲಕ್ಷ ರೂ ದರೋಡೆ

ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ. ಮೃತರನ್ನು ಗಿರಿ ವೆಂಕಟೇಶ್ ಮತ್ತು ಶಿವಕಾಶಿನಾಥ್ ಎಂದು ಪೊಲೀಸರು ಗುರುತಿಸಿದ್ದಾರೆ. ಅವರು ಸಿಎಂಎಸ್ ಏಜೆನ್ಸಿಯ ಸಿಬ್ಬಂದಿಯಾಗಿದ್ದರು.

ಹೈದರಾಬಾದ್‌ನಲ್ಲಿ ಪೊಲೀಸರ ಮೇಲೆ ಗುಂಡು ಹಾರಿಸಿ ಪರಾರಿ: ಬೀದರ್‌ನಲ್ಲಿ ಎಟಿಎಂ ವಾಹನ ಸಿಬ್ಬಂದಿ ಮೇಲೆ ಗುಂಡಿನ ದಾಳಿ ನಡೆಸಿ ಪರಾರಿಯಾಗಿದ್ದ ಡಕಾಯಿತರು, ಹೈದರಾಬಾದ್‌ನಲ್ಲಿ ಪತ್ತೆಯಾಗಿದ್ದಾರೆ. ಆದರೆ, ಪೊಲೀಸರು ಅಲ್ಲಿಗೆ ಹೋದಾಗ ಅವರ ಮೇಲೆಯೇ ಗುಂಡಿನ ದಾಳಿ ನಡೆಸಿ ಎಸ್ಕೇಪ್ ಆಗಿದ್ದಾರೆ. ಹೈದರಾಬಾದ್‌ನ ಅಲ್ಫಜ್ ಗಂಜ್ ಪ್ರಾಂತ್ಯದಲ್ಲಿ ಈ ಘಟನೆ ನಡೆದಿದೆ.

ಅಲ್ಲಿನ ಖಾಸಗಿ ಟ್ರಾವೆಲ್ ಏಜೆನ್ಸಿಯ ಕಚೇರಿಯೊಂದಕ್ಕೆ ಹೋಗಿದ್ದ ಈ ಡಕಾಯಿತರು ರಾಯ್‌ಪುರಕ್ಕೆ ಟಿಕೆಟ್ ಬುಕ್ ಮಾಡಲು ಹೋಗಿದ್ದರು. ಅಷ್ಟರಲ್ಲಿ ಅವರ ಜಾಡು ಹಿಡಿದು ಹೋಗಿದ್ದ ಬೀದರ್ ಪೊಲೀಸರು ಕಚೇರಿ ಬಳಿ ಹೋಗಿದ್ದಾರೆ. ಅವರನ್ನು ನೋಡಿದ ಕೂಡಲೇ ಗಾಬರಿಯಾದ ಡಕಾಯಿತರು ಕೂಡಲೇ ಪೊಲೀಸರ ಮೇಲೆ ಫೈರಿಂಗ್ ಮಾಡಿದ್ದಾರೆ. ಆದರೆ, ಅವರ ಪಿಸ್ತೂಲಿನಿಂದ ಹಾರಿದ ಗುಂಡು ಪೊಲೀಸರಿಗೆ ತಪ್ಪಿ ಟ್ರಾವೆಲ್ ಏಜೆನ್ಸಿಯ ಕಚೇರಿ ಮ್ಯಾನೇಜರ್‌ಗೆ ತಗುಲಿದೆ. ಗುಂಡು ಹಾರಿದ ಶಬ್ದಕ್ಕೆ ಅಕ್ಕಪಕ್ಕದ ಜನರು ಚದುರಿ ಓಡುತ್ತಿದ್ದ ಸಂದರ್ಭದಲ್ಲಿ ಡಕಾಯಿತರು ಪೊಲೀಸರ ಕಣ್ತಪ್ಪಿಸಿ ಓಡಿ ಹೋಗಿದ್ದಾರೆ.

ದೇಶ - ವಿದೇಶ

ರಷ್ಯಾ ಸೇನೆಯಲ್ಲಿರುವ ಭಾರತೀಯರ ಆದಷ್ಟು ಬೇಗ ಹಿಂತಿರುಗಿಸಿ



ಮಾಸ್ಕೋ: ಉಕ್ರೇನ್ ವಿರುದ್ಧದ ಯುದ್ಧಕ್ಕಾಗಿ ರಷ್ಯಾದ ಮಿಲಿಟರಿ ಬೆಂಬಲ ಸೇವೆಯಿಂದ ನೇಮಕಗೊಂಡಿದ್ದ ಕೇರಳದ ವ್ಯಕ್ತಿಯೊಬ್ಬರ ಸಾವನ್ನು ವಿದೇಶಾಂಗ ಸಚಿವಾಲಯ (ಎಂಇಎ) ಇಂದು ದೃಢಪಡಿಸಿದೆ. ಇದರ ನಡುವೆ ರಷ್ಯಾ ಸೇನೆಯಲ್ಲಿ ಉಳಿದಿರುವ ಭಾರತೀಯ ಪ್ರಜೆಗಳನ್ನು ಆದಷ್ಟು ಬೇಗ ಸ್ವದೇಶಕ್ಕೆ ಕಳುಹಿಸಬೇಕೆಂಬ ತನ್ನ ಬೇಡಿಕೆಯನ್ನು ಪುನರುಚ್ಚರಿಸಿದೆ. ಈ ವಿಷಯವನ್ನು ಇಂದು ಮಾಸ್ಕೋದಲ್ಲಿರುವ ರಷ್ಯಾದ ಅಧಿಕಾರಿಗಳೊಂದಿಗೆ ಹಾಗೂ ನವದೆಹಲಿಯಲ್ಲಿರುವ ರಷ್ಯಾದ ರಾಯಭಾರ ಕಚೇರಿಯೊಂದಿಗೆ ಚರ್ಚಿಸಲಾಗಿದೆ. ರಷ್ಯಾ ಸೇನೆಯಲ್ಲಿನ ಉಳಿದ ಭಾರತೀಯ ಪ್ರಜೆಗಳನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕೆಂಬ ನಮ್ಮ ಬೇಡಿಕೆಯನ್ನು ನಾವು ಪುನರುಚ್ಚರಿಸಿದ್ದೇವೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ರಷ್ಯಾದ ಸೇನೆಯಲ್ಲಿ ಕೆಲಸ ಮಾಡುತ್ತಿದ್ದ ಕೇರಳದ ಭಾರತೀಯ ಪ್ರಜೆಯೊಬ್ಬರು ಇತ್ತೀಚೆಗೆ ಸಾವನ್ನಪ್ಪಿದ್ದರು ಮತ್ತು ಇನ್ನೊಬ್ಬರು ಗಾಯಗೊಂಡಿದ್ದರು. ಮಾಸ್ಕೋದಲ್ಲಿರುವ ರಾಯಭಾರ ಕಚೇರಿಯು ಮೃತದೇಹಗಳನ್ನು ಸಾಗಿಸಲು ಮತ್ತು ಗಾಯಾಳುಗಳನ್ನು ಭಾರತಕ್ಕೆ ವಾಪಸ್ ಕಳುಹಿಸಲು ಪ್ರಯತ್ನಿಸುತ್ತಿದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಖಲಿಸ್ತಾನಿ ಉಗ್ರರಿಂದ ಜೀವ ಬೆದರಿಕೆ



ನವದೆಹಲಿ: ದೆಹಲಿ ಚುನಾವಣೆ ಹೊಸ್ತಿಲಲ್ಲಿ ಮಾಜಿ ಮುಖ್ಯಮಂತ್ರಿ, ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಮೇಲೆ ಹಲ್ಲೆ ನಡೆಸಲು ಖಲಿಸ್ತಾನಿ ಉಗ್ರರು ಸಂಚು ರೂಪಿಸಿದ್ದಾರೆ ಎಂಬುದಾಗಿ ಗುಪ್ತಚರ ವರದಿಗಳು ಹೇಳಿವೆ. ಈ ಕುರಿತು ಪ್ರತಿಕ್ರಿಯಿಸಿರುವ ಕೇಜ್ರಿವಾಲ್, ದೇವರು ನನ್ನನ್ನು ಕಾಪಾಡುತ್ತಾನೆ. ದೇವರು ಎಲ್ಲಿಯವರೆಗೂ ಬದುಕಿಸುತ್ತಾನೋ ಅಲ್ಲಿಯವರೆಗೂ ಇರುತ್ತೇನೆ ಎಂದಿದ್ದಾರೆ. ಫೆಬ್ರವರಿ 5ರಂದು ನಡೆಯಲಿರುವ ಚುನಾವಣೆಗೆ ನವದೆಹಲಿ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ ಬಳಿಕ ಜೀವ ಬೆದರಿಕೆ ಕುರಿತ ಪ್ರಶ್ನೆಗೆ ಉತ್ತರಿಸಿದ ಕೇಜ್ರಿವಾಲ್, ಜೀವಸೆಲೆ ಇರುವವರೆಗೂ ಬದುಕುತ್ತೇವೆ. ಜೀವಸೆಲೆ ಕೊನೆಯಾದಾಗ ದೇವರು ಕರೆಯುತ್ತಾನೆ. ಆಗ ಎಲ್ಲರೂ ಹೋಗಬೇಕಾಗುತ್ತದೆ. ಕೇಜ್ರಿವಾಲ್ ಅವರಿಗೆ ಜೀವ ಬೆದರಿಕೆ ಹಿನ್ನೆಲೆಯಲ್ಲಿ ಅವರಿಗೆ ಭದ್ರತೆ ಹೆಚ್ಚಿಸಲು ಪರಿಶೀಲಿಸುತ್ತಿರುವುದಾಗಿ ದೆಹಲಿ ಪೊಲೀಸರು ಹೇಳಿದ್ದಾರೆ. ಪಂಜಾಬ್‌ನಲ್ಲಿ ಕೊನೆಯದಾಗಿ ಕಾಣಿಸಿಕೊಂಡಿದ್ದ ಎರಡರಿಂದ ಮೂವರು ಖಲಿಸ್ತಾನಿ ಉಗ್ರರು ರಾಜಧಾನಿಯಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯ ಸಮಯದಲ್ಲಿ ಕೇಜ್ರಿವಾಲ್ ಅವರನ್ನು ಗುರಿಯಾಗಿಸಿ ದೆಹಲಿ ಮಾರ್ಗದಲ್ಲಿ ಸಾಗುತ್ತಿದೆ ಎಂದು ಗುಪ್ತಚರ ವರದಿಗಳು ಹೇಳಿವೆ. ಈ ಕುರಿತು ಹೆಚ್ಚಿನ ತನಿಖೆ ನಡೆಯುತ್ತಿದೆ.

ವಿದಾಯ ಭಾಷಣದಲ್ಲಿ ಭಾವುಕರಾದ ಜೋ ಬೈಡನ್



ವಾಷಿಂಗ್‌ಟನ್: ಅಮೆರಿಕದ ನೂತನ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಆಯ್ಕೆಯಾಗಿದ್ದು, ಕೆಲವೇ ದಿನಗಳಲ್ಲಿ ಅಧಿಕಾರ ಸ್ವೀಕರಿಸಲಿದ್ದಾರೆ. ಇದೀಗ ಜೋ ಬೈಡನ್ ಅವರ ಅಧಿಕಾರಾವಧಿ ಪೂರ್ಣಗೊಂಡಿದ್ದು, ತಮ್ಮ ವಿದಾಯ ಭಾಷಣ ಮಾಡಿದ್ದಾರೆ. ತಮ್ಮ ನಾಲ್ಕು ವರ್ಷಗಳ ಅಧಿಕಾರಾವಧಿಯನ್ನು ಉಲ್ಲೇಖಿಸುವಾಗ ಭಾವುಕರಾದರು.


ಪಶ್ಚಿಮ ಏಷ್ಯಾದಲ್ಲಿ ಶಾಂತಿಯನ್ನು ಪುನಃಸ್ಥಾಪಿಸಲು ಪ್ರಮುಖ ಉಪಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂಬುದು ಗಮನಾರ್ಹ. ಇಸ್ರೇಲ್ ಮತ್ತು ಹಮಾಸ್ ನಡುವೆ ಕದನ ವಿರಾಮಕ್ಕೆ ಒಪ್ಪಿಗೆ ನೀಡಲಾಗಿದ್ದು, ಇದನ್ನು ಜಾಗತಿಕ ನಾಯಕರು ಸ್ವಾಗತಿಸಿದ್ದಾರೆ. ಕೆಲವು ಅಪಾಯಗಳ ಬಗ್ಗೆ ನಾನು ದೇಶವನ್ನು ಎಚ್ಚರಿಸಲು ಬಯಸುತ್ತೇನೆ ಎಂದು ಬೈಡನ್ ಹೇಳಿದರು. ಇಂದು ಅಧಿಕಾರ ಬೆರಳೆಣಿಕೆಯ ಜನರ ಕೈಗೆ ಸೀಮಿತವಾಗಿದೆ. ಬೆರಳೆಣಿಕೆಯಷ್ಟು ಶ್ರೀಮಂತರ ಕೈಯಲ್ಲಿ ಅಧಿಕಾರ ಕೇಂದ್ರೀಕರಣವು ಅಪಾಯಕಾರಿ ಮತ್ತು ದೇಶದ ಪ್ರಜಾಪ್ರಭುತ್ವಕ್ಕೆ ಅಪಾಯವನ್ನುಂಟು ಮಾಡುತ್ತದೆ. ಇದು ಜನರ ಮೂಲಭೂತ ಹಕ್ಕುಗಳಿಗೆ ಬೆದರಿಕೆ ಹಾಕುತ್ತದೆ. ಏಕೆಂದರೆ ಇದು ಎಲ್ಲರಿಗೂ ಮುಂದುವರೆಯಲು ನೀಡಿದ ನ್ಯಾಯಯುತ ಅವಕಾಶಗಳನ್ನು ನಾಶಪಡಿಸುತ್ತದೆ ಎಂದರು. ಅವರ ಕಪಿಮುಷ್ಟಿಯಿಂದ ದೇಶವನ್ನು ಹೊರತರಬೇಕಾಗುತ್ತದೆ ಎಂದರು.

ಆಂಧ್ರದಲ್ಲಿ ಕೋಳಿ ಕಾಳಗ: 2,000 ಕೋಟಿಗೂ ಅಧಿಕ ಬೆಟ್ಟಿಂಗ್

ವಿಜಯವಾಡ: ಸಂಪ್ರದಾಯ ಮತ್ತು ಪದ್ಧತಿಗಳ ನೆಪದಲ್ಲಿ ಕೋಳಿಗಳ ಕಾಳಗದ ಪಂದ್ಯ ನಡೆಸದಂತೆ ಪೊಲೀಸ್ ಸಿಬ್ಬಂದಿ ಸೂಚನೆ ನೀಡಬೇಕೆಂಬ ಹೈಕೋರ್ಟ್ ನಿರ್ದೇಶನಕ್ಕೆ ವಿರುದ್ಧವಾಗಿ, ಮೂರು ದಿನಗಳ ಉತ್ಸವ ನಡೆಸಿದ್ದು ಕೋಳಿಗಳ ರಕ್ತಪಾತವಾಗಿ ವ್ಯಾಪಕ ಟೀಕೆ ವ್ಯಕ್ತವಾಗಿದೆ.

ಈ ವರ್ಷ ಕೋಳಿ ಪಂದ್ಯ ವೇಳೆ ಅಂದಾಜು ಬೆಟ್ಟಿಂಗ್ ಮೌಲ್ಯ 2,000 ಕೋಟಿ ರೂ. ಮೀರಿದೆ. ಆಂಧ್ರಪ್ರದೇಶದ ಕೃಷ್ಣ ಮತ್ತು ಎನ್‌ಟಿಆರ್ ಜಿಲ್ಲೆಗಳ ಎಡುಪುಗಲ್ಲು, ರಾಮವರಪ್ಪಡು, ಇಬ್ರಾಹಿಂಪಟ್ಟಣಂ, ಮಂಗಳಗಿರಿ, ಗನ್ನವರಂ, ನುನ್ನಾ, ತಿರುವುರು, ಚಿಂಚಿನಾಡ, ಪುಲಪಲ್ಲಿ ಮತ್ತು ಇತರ ಗ್ರಾಮಗಳಲ್ಲಿ ಕೋಳಿ ಕಾಳಗವನ್ನು ವೀಕ್ಷಿಸಲು ಯುವಕರು ಮತ್ತು ಮಹಿಳೆಯರು ಸೇರಿದಂತೆ ಹಲವಾರು ಜನರು ಕ್ರೀಡಾಂಗಣಗಳಲ್ಲಿ ನೆರೆದಿದ್ದರು. ಗೋದಾವರಿ ಜಿಲ್ಲೆಗಳಿಗೆ ಇತರ ರಾಜ್ಯಗಳಿಂದ ಹೆಚ್ಚಿನ ಸಂಖ್ಯೆಯ ಜನರು ಕೋಳಿ ಕಾಳಗವನ್ನು ವೀಕ್ಷಿಸಲು ಭೇಟಿ ನೀಡುತ್ತಾರೆ. ಪಶ್ಚಿಮ ಗೋದಾವರಿ ಜಿಲ್ಲೆಯ ಭೀಮಾವರಂ ಮತ್ತು ನರಸಪುರಂ, ಏಲೂರು ಜಿಲ್ಲೆಯ ಕೈಕಲೂರು ಮತ್ತು ಹಿಂದಿನ ಕೃಷ್ಣಾ ಜಿಲ್ಲೆಯ ವಿವಿಧ ಭಾಗಗಳಲ್ಲಿ ಸಾವಿರಕ್ಕೂ ಹೆಚ್ಚು ಕಾಕ್ ಫೈಟಿಂಗ್ ರಿಂಗ್‌ಗಳನ್ನು ರಚಿಸಲಾಗಿದೆ. ಕೋಳಿ ಕಾಳಗಗಳು ಶತಮಾನಗಳಿಂದ ಸಂಕ್ರಾಂತಿ ಆಚರಣೆಯ ಭಾಗವಾಗಿದೆ. ಕೋಳಿ ಕಾಳಗ ಮತ್ತು ಜೂಜಾಟವಿಲ್ಲದೆ ಹಬ್ಬವನ್ನು ಆಚರಿಸಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ.

ಕುಂಭಮೇಳದ ಕುರಿತು ಸ್ಟೀವ್ ಜಾಬ್ ಬರೆದ ಪತ್ರ 4.32 ಕೋಟಿಗೆ ಹರಾಜು!



ಅಮೆರಿಕ: ಆ್ಯಪಲ್ ಸಹ ಸಂಸ್ಥಾಪಕ ಸ್ಟೀವ್ ಜಾಬ್ಸ್ ಅವರು ಕುಂಭಮೇಳದ ಕುರಿತು ಬರೆದ ಪತ್ರವು 4.32 ಕೋಟಿ ರೂ.ಗೆ ಹರಾಜು ಆಗಿದೆ. ಜಾಬ್ಸ್ ಹಸ್ತಾಕ್ಷರದಲ್ಲಿ ಇರುವ ಪತ್ರವನ್ನು ಅವರು 19ನೇ ಜನ್ಮದಿನದಂದು ತಮ್ಮ ಮಿತ್ರ ಟಿಮ್ ಬ್ರೌನ್ ಉದ್ದೇಶಿಸಿ ಬರೆದಿದ್ದಾರೆ. ಝೆನ್ ಬೌದ್ಧಿಸಮ್ ಹಾಗೂ ಭಾರತದ ಕುಂಭಮೇಳಕ್ಕೆ ಭೇಟಿ ನೀಡುವ ತಮ್ಮ ಕನಸನ್ನು ಪತ್ರದಲ್ಲಿ ಜಾಬ್ಸ್ ಹಂಚಿಕೊಂಡಿದ್ದಾರೆ. ಸುಮಾರು 51 ವರ್ಷಗಳ ಹಿಂದೆ 1974ರಲ್ಲಿ ಸ್ಟೀವ್ ಜಾಬ್ಸ್ ಭಾರತದಲ್ಲಿ ನಡೆಯುವ ಮೇಳದಲ್ಲಿ ಪಾಲ್ಗೊಳ್ಳಲು ಬಯಸಿದ್ದರು. ಅವರು ತಮ್ಮ ಇಚ್ಛೆಯನ್ನು ಬಾಲ್ಯದ ಗೆಳೆಯ ಟಿಮ್ ಬ್ರೌನ್‌ಗೆ ಬರೆದ ಪತ್ರದಲ್ಲಿ ವ್ಯಕ್ತಪಡಿಸಿದ್ದಾರೆ. 'ನಾನು ಏಪ್ರಿಲ್‌ನಲ್ಲಿ ಪ್ರಾರಂಭವಾಗುವ ಕುಂಭಮೇಳಕ್ಕೆ ಭಾರತಕ್ಕೆ ಹೋಗಲು ಬಯಸುತ್ತೇನೆ. ಇದಕ್ಕಾಗಿ ಮಾರ್ಚ್‌ನಲ್ಲಿ ಹೊರಡುತ್ತೇನೆ, ಈ ಬಗ್ಗೆ ಇನ್ನೂ ಖಚಿತವಾಗಿಲ್ಲ' ಎಂದು ಅವರು ಪತ್ರದಲ್ಲಿ ಬರೆದಿದ್ದಾರೆ.

ಪ್ರಯಾಗ್‌ರಾಜ್‌ನಲ್ಲಿ ಮಹಾಕುಂಭಮೇಳ ನಡೆಯುತ್ತಿರುವ ಹೊತ್ತಿನಲ್ಲಿ ಲಾರೆನ್ ಪೊವೆಲ್, ಪತಿ ಸ್ಟೀವ್ ಜಾಬ್ಸ್ ಅವರ ಕನಸನ್ನು ನನಸು ಮಾಡಿದ್ದಾರೆ. ಮಹಾ ಕುಂಭಮೇಳದಲ್ಲಿ ಪಾಲ್ಗೊಂಡು ಗಂಗಾ ನದಿಯಲ್ಲಿ ಮಿಂದೆದ್ದಿದ್ದಾರೆ. ಪ್ರಯಾಗ್‌ರಾಜ್‌ಗೆ ಆಗಮಿಸುವ ಮುನ್ನ ಅವರು ಕಾಶಿ ವಿಶ್ವನಾಥನ ದರ್ಶನ ಪಡೆದು, ತಂಡದವರೊಂದಿಗೆ ಪ್ರಾಣಾಯಾಮ ಹಾಗೂ ಯೋಗಾಭ್ಯಾಸಗಳನ್ನು ಕಲಿಯುತ್ತಿದ್ದಾರೆ.

ಕಳ್ಳಭಟ್ಟಿ ಅಡ್ಡೆ ಮೇಲೆ ಅಬಕಾರಿ ಪೊಲೀಸರ ದಾಳಿ

59 ಲೀಟರ್ ಪುಳಗಂಜಿ, 3.5 ಲೀಟರ್ ಸಾರಾಯಿ ವಶ

ಮಡಿಕೇರಿ, ಜ.16– ಕಳ್ಳಭಟ್ಟಿ ತಯಾರಿಸುತ್ತಿದ್ದ ಸೋಮವಾರಪೇಟೆ ತಾಲೂಕಿನ 3 ಕಡೆ ದಾಳಿ ನಡೆಸಿರುವ ಅಬಕಾರಿ ಪೊಲೀಸರು ಒಟ್ಟು 59 ಲೀಟರ್ ಪುಳಗಂಜಿ (ಬೆಲ್ಲದ ಕೊಳೆ), 3.5 ಲೀಟರ್ ಕಳ್ಳಭಟ್ಟಿ ಮತ್ತು ಕೃತ್ಯಕ್ಕೆ ಬಳಸಿದ್ದ ಪರಿಕರಗಳನ್ನು ವಶಪಡಿಸಿಕೊಂಡಿದ್ದಾರೆ.



ಅಬಕಾರಿ ಇಲಾಖೆ ಅಧಿಕಾರಿಗಳು ಸಾರಾಯಿ ವಶಪಡಿಸಿಕೊಂಡಿರುವುದು.

ದೊಡ್ಡತೋಳೂರು ಗ್ರಾಮದ ಡಿ.ಎನ್.ಆನಂದ್, ವಿರೂಪಾಕ್ಷ ಮತ್ತು ಕೆ.ಜಿ.ಮಾದಪ್ಪ ಅವರು ಕಳ್ಳಭಟ್ಟಿ ತಯಾರಿಸುತ್ತಿರುವ ಖಚಿತ ಮಾಹಿತಿ ಆಧರಿಸಿ ಸೋಮವಾರಪೇಟೆ ವಲಯ ಅಬಕಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಗುರುವಾರ ಬೆಳಗ್ಗೆ ದಾಳಿ ನಡೆಸಿದ್ದಾರೆ. ಆನಂದ್ ಮನೆಯಲ್ಲಿದ್ದ 9 ಲೀಟರ್ ಪುಳಗಂಜಿ, 200 ಮಿ.ಲೀ ಕಳ್ಳಭಟ್ಟಿ ಸಾರಾಯಿ ಹಾಗೂ ಪರಿಕರ, ವಿರೂಪಾಕ್ಷ ಮನೆಯಲ್ಲಿ ಶೋಧ ನಡೆಸಿ 3.5 ಲೀ. ಕಳ್ಳಭಟ್ಟಿ ಸಾರಾಯಿ, 20 ಲೀ. ಬೆಲ್ಲದ ಕೊಳೆ ಮತ್ತು ಡಿಸ್ಟಿಲರಿ ಸೆಟ್ ಹಾಗೂ ಮಾದಪ್ಪ ಮನೆಯಲ್ಲಿ ಸಂಗ್ರಹಿಸಿದ್ದ 30 ಲೀ. ಪುಳಗಂಜಿ ಮತ್ತು ಇತರೆ ಪರಿಕರಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಈ ಮೂವರ ವಿರುದ್ಧ ಅಬಕಾರಿ ಕಾಯ್ದೆಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬೆಂಗಳೂರು ಅಬಕಾರಿ ಅಪರ ಆಯುಕ್ತರ (ಜಾರಿ ಮತ್ತು ಅಪರಾಧ) ಆದೇಶದ ಮೇರೆಗೆ ಮಂಗಳೂರು ವಿಭಾಗ ಅಬಕಾರಿ ಜಂಟಿ ಆಯುಕ್ತರು ಹಾಗೂ ಕೊಡಗು ಜಿಲ್ಲಾ ಅಬಕಾರಿ ಉಪ ಆಯುಕ್ತರ ಸೂಚನೆಯಂತೆ ಸೋಮವಾರಪೇಟೆ ಉಪ ವಿಭಾಗ ಅಬಕಾರಿ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದಾರೆ.

ಹಸುಗಳ ಕೆಚ್ಚಲು ಕತ್ತರಿಸಿದವರ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿ

ಶಾಸಕರ ಮನೆ ಎದುರು ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ

ವಿರಾಜಪೇಟೆ, ಜ.16–ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಹಸುಗಳ ಕೆಚ್ಚಲು ಕತ್ತರಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ವಿರಾಜಪೇಟೆ ಬಿಜೆಪಿ ಮಂಡಲ ವತಿಯಿಂದ ಗುರುವಾರ ಪಟ್ಟಣದ ಶಾಸಕರ ಮನೆ ಎದುರು ಹಸು ಹಿಡಿದು ಪ್ರತಿಭಟನೆ ನಡೆಸಿದರು.

ಬಿಜೆಪಿ ಮಂಡಲಾಧ್ಯಕ್ಷ ಸುವಿನ್ ಗಣಪತಿ ಮಾತನಾಡಿ, ಹಿಂದು ಧರ್ಮದಲ್ಲಿ ಗೋವುಗಳನ್ನು ದೇವರೆಂದು ಪೂಜಿಸಲಾಗುತ್ತಿದೆ. ನಾವುಗಳು ಗೋವುಗಳನ್ನು ರಕ್ಷಣೆ ಮಾಡಬೇಕು. ಆದರೆ, ಗೋಮಾತೆಯ ಕೆಚ್ಚಲನ್ನು ಕತ್ತರಿಸಿ ಕೃತ್ಯ ಎಸಗಿರುವುದು ಮಹಾ ಅಪರಾಧ. ಆರೋಪಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿದರು.



ಹಸುಗಳ ಕೆಚ್ಚಲು ಕತ್ತರಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಶಾಸಕರ ಮನೆ ಎದುರು ಹಸು ಹಿಡಿದು ಪ್ರತಿಭಟನೆ ನಡೆಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಹಸುವಿನ ಕೆಚ್ಚಲು ಕೊಯ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಆತನಿಗೆ ಖಂಡಿತವಾಗಿ ಶಿಕ್ಷೆ ಆಗಲಿದೆ. ನಾನು ಹಿಂದುವಾಗಿದ್ದು, ಗೋವುಗಳನ್ನು ಪೂಜೆ ಮಾಡುತ್ತೇವೆ. ಸಣ್ಣ ವಿಚಾರಗಳಿಗೆಲ್ಲ ಪ್ರತಿಭಟನೆ ಮಾಡುವುದು ಸರಿಯಲ್ಲ. ಅಭಿವೃದ್ಧಿ ಕಾರ್ಯಗಳ ಬಗ್ಗೆ ಹೇಳಿ ಮಾಡಿಕೊಡುತ್ತೇನೆ ಎಂದರು.

ಪ್ರತಿಭಟನೆಯಲ್ಲಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಅಮ್ಮಣಿಚಂಡ ರಂಜು ಪೂಣಚ್ಚ, ಕಾಂತಿ ಸತೀಶ್, ಪ್ರಧಾನ ಕಾರ್ಯದರ್ಶಿ ಕಿಲನ್ ಗಣಪತಿ, ತಾಲೂಕು ಕಾರ್ಯದರ್ಶಿ ಎಂ.ಮಂಜು, ಪುರಸಭೆ ಸದಸ್ಯರಾದ ಮಹದೇವ, ಜೂನಾ, ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು.

ಕಾಂಗ್ರೆಸ್ ಕಾರ್ಯಕರ್ತರ ಘೋಷಣೆ: ಇದೇ ವೇಳೆ ಬಿಜೆಪಿ ಕಾರ್ಯಕರ್ತರ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಘೋಷಣೆ ಕೂಗಿದರು. ಈ ವೇಳೆ ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ, ಉಪಾಧ್ಯಕ್ಷೆ ಫಸಿಹಾ ತಬ್ಸಮ್, ಸದಸ್ಯರಾದ ಮಹ್ಮದ್ ರಫಿ, ಮತೀನ್, ರಾಜೇಶ್, ಶಭರೀಶ್ ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಜಿ ಪೂಣಚ್ಚ, ನಗರಾಧ್ಯಕ್ಷ ಮಾದಂಡ ತಿಮ್ಮಯ್ಯ, ಪ್ರಮುಖರಾದ ನರೇಂದ್ರ ಕಾಮತ್, ಜುಬೇರ್ ಸಲೀಂ, ಜೋಕಿಂ ರಾಡ್ರಿಗಾಸ್ ಇದ್ದರು.

ವಾಕ್ ರೇಸ್‌ನಲ್ಲಿ ವಿಶಾಲಾಕ್ಷಿ ಪ್ರಥಮ



ಮಡಿಕೇರಿ, ಜ.16–ಸೌತ್ ಇಂಡಿಯಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ವತಿಯಿಂದ ಮಂಗಳೂರಿನ ಮಂಗಳಾ ಕ್ರೀಡಾಂಗಣದಲ್ಲಿ ನಡೆದ ಅಂತಾರಾಷ್ಟ್ರೀಯ ಸೌತ್ ಏಷಿಯಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಓಪನ್ ಚಾಂಪಿಯನ್‌ಶಿಪ್‌ನಲ್ಲಿ 5 ಕಿ.ಮೀ. ವಾಕ್ ರೇಸ್‌ನಲ್ಲಿ 60 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ಮಡಿಕೇರಿಯ ಎಡಿಕೇರಿ ಎನ್.ವಿಶಾಲಾಕ್ಷಿ ಪ್ರಥಮ ಬಹುಮಾನ ಗಳಿಸಿದ್ದಾರೆ. ಎನ್.ವಿಶಾಲಾಕ್ಷಿ ಎಡಿಕೇರಿ ದಿ.ನರೇಶ್ ಅವರ ಪತ್ನಿಯಾಗಿದ್ದು, ಬಾಲ್ಯದಿಂದಲೇ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ವಿವಿಧ ಕ್ರೀಡಾಕೂಟಗಳಲ್ಲಿ ಹಲವು ಪದಕಗಳನ್ನು ಗೆದ್ದು ಕೊಡಗು ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಹಿಂದೆ ವಿಶಾಲಾಕ್ಷಿ ಗೃಹರಕ್ಷಕ ದಳದಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ.


ಇಂದು ಬಹುಸಂಸ್ಕೃತಿ ಉತ್ಸವ

ಮಡಿಕೇರಿ, ಜ.16–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ತುಳು, ಬ್ಯಾರಿ, ಕೊಂಕಣಿ, ಕೊಡವ, ಅರೆಭಾಷೆ ಮತ್ತು ಯಕ್ಷಗಾನ ಅಕಾಡೆಮಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾಡಳಿತ ಸಂಯುಕ್ತಾಶ್ರಯದಲ್ಲಿ ಜ.17ರಂದು ಮಂಗಳೂರಿನ ಕುದ್ಮುಲ್ ರಂಗರಾವ್ ಪುರಭವನದಲ್ಲಿ 'ಬಹು ಸಂಸ್ಕೃತಿ ಉತ್ಸವ' ನಡೆಯಲಿದೆ. ಉತ್ಸವಕ್ಕೆ ಸಿಎಂ ಸಿದ್ದರಾಮಯ್ಯ, ಮೆರವಣಿಗೆಗೆ ಸ್ಪೀಕರ್ ಯು.ಟಿ.ಖಾದರ್ ಫರೀದ್ ಚಾಲನೆ ನೀಡಲಿದ್ದಾರೆ. ಶಾಸಕ ಎ.ಎಸ್.ಪೊನ್ನಣ್ಣ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭಾಗವಹಿಸಲಿದ್ದಾರೆ.

ಕಾಡಾನೆ ದಾಳಿಯಿಂದ ಕಾರು ಸಂಪೂರ್ಣ ಜಖಂ

ಕಾರಿನಲ್ಲಿದ್ದವರು ಸಣ್ಣಪುಟ್ಟ ಗಾಯಗಳೊಂದಿಗೆ ಪಾರು

ಗೋಣಿಕೊಪ್ಪ, ಜ.16–ವಿರಾಜಪೇಟೆಯಿಂದ ಮೈಸೂರಿಗೆ ತೆರಳುತ್ತಿದ್ದ ಕಾರೊಂದರ ಮೇಲೆ ಕಾಡಾನೆ ದಾಳಿ ನಡೆಸಿ, ಕಾರು ಜಖಂಗೊಳಿಸಿರುವ ಘಟನೆ ತಿತಿಮತಿ ಸಮೀಪದ ಮಜ್ಜಿಗೆಹಳ್ಳ ಅರಣ್ಯ ವ್ಯಾಪ್ತಿಯಲ್ಲಿ ಬುಧವಾರ ರಾತ್ರಿ ನಡೆದಿದೆ. ಕಾಡಾನೆ ದಾಳಿಯಿಂದ ಕಾರು ಸಂಪೂರ್ಣ ನಜ್ಜುಗುಜ್ಜಾಗಿದ್ದು, ಕಾರಿನಲ್ಲಿದ್ದವರಿಗೆ ಸಣ್ಣಪುಟ್ಟ ಗಾಯಗಳಾಗಿ ಕೂದಲೆಳೆಯ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ಕಾರು ಜಖಂಗೊಂಡಿರುವುದು.

ಘಟನೆ: ವಿರಾಜಪೇಟೆ ತಾಲೂಕಿನ ಬಿಳುಗುಂದ ಗ್ರಾಮದಲ್ಲಿ ನ್ಯಾಯಬೆಲೆ ಅಂಗಡಿ ನಡೆಸುತ್ತಿರುವ ಅರಫತ್ ಅಹ್ಮದ್ ಅವರು ಕುಟುಂಬ ಸಹಿತ ರಾತ್ರಿ ಕಾರಿನಲ್ಲಿ ತಿತಿಮತಿ ಮಾರ್ಗವಾಗಿ ಮೈಸೂರಿಗೆ ತೆರಳುತ್ತಿದ್ದರು. ತಿತಿಮತಿ ಮಜ್ಜಿಗೆಹಳ್ಳ ಅರಣ್ಯ ಪ್ರದೇಶದ ಸಮೀಪ ರಸ್ತೆ ಉಬ್ಬು ಇದ್ದ ಹಿನ್ನೆಲೆಯಲ್ಲಿ ಕಾರು ಚಾಲಕ ಅರಾಫತ್ ಕಾರಿನ ವೇಗವನ್ನು ಕಡಿಮೆ ಮಾಡಿದ್ದಾರೆ. ಈ ವೇಳೆ ಕಾಡಾನೆ ಏಕಾಏಕಿ ದಾಳಿ ನಡೆಸಿ, ಕಾರನ್ನು ಸಂಪೂರ್ಣ ಜಖಂಗೊಳಿಸಿ ಕಾಡಿನಲ್ಲಿ ಮರೆಯಾಗಿದೆ.

ಈ ಘಟನೆಯಿಂದ ಅರಫತ್ ಅಹ್ಮದ್ ಕುಟುಂಬದ ಆರು ಮಂದಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ವಿರಾಜಪೇಟೆಯ ಖಾಸಗಿ ಆಸ್ಪತ್ರೆಯಲ್ಲಿ ಹೊರರೋಗಿಗಳಾಗಿ ಚಿಕಿತ್ಸೆ ಪಡೆದು ಮನೆಗೆ ಮರಳಿದ್ದಾರೆ. ಮಾಹಿತಿ ತಿಳಿದ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ರಾತ್ರಿ ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಯೋಗ ಕ್ಷೇಮ ವಿಚಾರಿಸಿದರು. ತಿತಿಮತಿ ಅರಣ್ಯ ಪ್ರದೇಶದ ರಸ್ತೆಯಲ್ಲಿರುವ ಉಬ್ಬುಗಳನ್ನು ತೆರವು ಮಾಡಿ ವಾಹನಗಳ ವೇಗಕ್ಕೆ ಕಡಿವಾಣ ಹಾಕಲು ವೈಜ್ಞಾನಿಕ ಕ್ರಮ ಕೈಗೊಳ್ಳಬೇಕು. ಆ ಮೂಲಕ ವನ್ಯಜೀವಿ ಸಂರಕ್ಷಣೆಯೊಂದಿಗೆ ಮಾನವ ಜೀವದ ಅಪಾಯವನ್ನೂ ತಪ್ಪಿಸಬೇಕು ಎಂದು ಆಗ್ರಹಿಸಲಾಗಿದೆ.

ಕೆ.ಆರ್.ಪೇಟೆ ಬಸ್ ನಿಲ್ದಾಣಕ್ಕೆ ಮಹಿಳಾ ಆಯೋಗದ ಅಧ್ಯಕ್ಷೆ ದಿಢೀರ್ ಭೇಟಿ

- ಬಸ್ ವ್ಯವಸ್ಥೆ ಇಲ್ಲದ ಬಗ್ಗೆ ದೂರು
- ತಾಯಿ ಮಗುವಿನ ಕೊಠಡಿ ಇಲ್ಲದಿರುವ ಬಗ್ಗೆ ಬೇಸರ
- ಶುಚಿತ್ವವಿಲ್ಲದ ಮಹಿಳಾ ವಿಶ್ರಾಂತಿ ಕೊಠಡಿ, ಶೌಚಾಲಯ

ಕೆಆರ್.ಪೇಟೆ ಜ.16–ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಕೆ.ಆರ್.ಪೇಟೆ ಬಸ್ ನಿಲ್ದಾಣಕ್ಕೆ ದಿಢೀರ್ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಅಲ್ಲಿನ ಅವ್ಯವಸ್ಥೆಯನ್ನು ಕಂಡು ಬೇಸರ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದ ಅವರು ಕೆ.ಆರ್.ಪೇಟೆ ಬಸ್ ನಿಲ್ದಾಣಕ್ಕೆ ಭೇಟಿ ನೀಡಿ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಲೇಜು ವಿದ್ಯಾರ್ಥಿಗಳನ್ನು ಮಾತನಾಡಿಸಿ ಬಸ್ ವ್ಯವಸ್ಥೆಯ ಬಗ್ಗೆ ವಿಚಾರಿಸಿದರು.

ಹಲವು ವಿದ್ಯಾರ್ಥಿನಿಯರು ತಮ್ಮ ಊರಿಗೆ ಸರಿಯಾಗಿ ಬಸ್ ಸಂಪರ್ಕ ಇಲ್ಲದಿರುವ ಕಾರಣ ವಿದ್ಯಾಭ್ಯಾಸಕ್ಕೆ ತೊಂದರೆ ಉಂಟಾಗುತ್ತಿದೆ. ನಮ್ಮ ಊರಿಗೆ ಸರಿಯಾಗಿ ಬಸ್ ಸಂಪರ್ಕ ಕಲ್ಪಿಸಿಕೊಡಿ ಎಂದು ಕೇಳಿಕೊಂಡರು, ಅನೇಕ ವಿದ್ಯಾರ್ಥಿಗಳು ಬಸ್ ವ್ಯವಸ್ಥೆ ಇದ್ದರೂ ಕೆಲವು ಕಡೆ ಚಾಲಕರು ಬಸ್ ನಿಲ್ಲಿಸುತ್ತಿಲ್ಲ ಎಂದರು, ತಕ್ಷಣ ಮಂಡ್ಯ ಕೆಎಸ್ಆರ್‌ಟಿಸಿ ಇಲಾಖೆಯ ಅಧಿಕಾರಿಗಳನ್ನು ಕರೆಸಿ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆ ಕಲ್ಪಿಸಿ ಎಂದು ಸೂಚಿಸಿದರು.

ಬಸ್ ನಿಲ್ದಾಣದಲ್ಲಿ ತಾಯಿ ಮಗುವಿನ ಕೊಠಡಿ ಇಲ್ಲದಿರುವುದನ್ನು ಕಂಡು ಪ್ರತಿ ಬಸ್ ನಿಲ್ದಾಣದಲ್ಲಿ ತಾಯಿ ಮಗುವಿನ ಕೊಠಡಿ ಇರಬೇಕು, ತಾಯಿ ಮಗುವಿನ ಕೊಠಡಿ ಏಕೆ ನಿರ್ಮಿಸಿಲ್ಲ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.

ಮಹಿಳಾ ವಿಶ್ರಾಂತಿ ಕೊಠಡಿಗೆ ಭೇಟಿ ನೀಡಿ ಕೊಠಡಿಯ ಶುಚಿತ್ವ ಗಮನಿಸಿ, ಸ್ವಚ್ಛತಾ ಸಿಬ್ಬಂದಿಗೆ ಸೂಕ್ತ ಸ್ವಚ್ಛತಾ ಕ್ರಮ ಕೈಗೊಂಡು ಕಾರ್ಯ ನಿರ್ವಹಿಸಿ ಮತ್ತು ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿ ಎಂದ ಹೇಳಿದರು.



ಕೆ.ಆರ್.ಪೇಟೆ ಬಸ್ ನಿಲ್ದಾಣಕ್ಕೆ ನಾಗಲಕ್ಷ್ಮಿ ಚೌಧರಿ ಭೇಟಿ ನೀಡಿ ಪರಿಶೀಲಿಸುತ್ತಿರುವುದು.

ನಂತರ ಶೌಚಾಲಯಕ್ಕೆ ಭೇಟಿ ನೀಡಿದರು, ಬಸ್ ನಿಲ್ದಾಣದಲ್ಲಿ ಶೌಚಾಲಯಕ್ಕೆ ಶುಲ್ಕ ವಸೂಲಿ ಮಾಡುತ್ತಿದ್ದಾರೆ ಮತ್ತು ಶೌಚಾಲಯದಲ್ಲಿ ಸರಿಯಾಗಿ ಸ್ವಚ್ಛತೆ ಕಾಪಾಡುವುದಿಲ್ಲ ಎಂದು ಸಾರ್ವಜನಿಕರು ದೂರಿದರು, ಸಂಬಂಧಪಟ್ಟ ಸ್ವಚ್ಛತಾ ಸಿಬ್ಬಂದಿಗೆ ಯಾವುದೇ ಕಾರಣಕ್ಕೂ ಮಹಿಳೆಯರಿಂದ ಹಣ ವಸೂಲಿ ಮಾಡಬಾರದು ಹಾಗೂ ಶೌಚಾಲಯಕ್ಕೆ ಸೂಕ್ತ ಬಾಗಿಲುಗಳ ವ್ಯವಸ್ಥೆ ಮತ್ತು ಸ್ವಚ್ಛತೆ ಸರಿಯಾಗಿ ನಿರ್ವಹಣೆ ಮಾಡಿ ಎಂದರು.

ಠಾಣೆಗೆ ಹೋಗಿ ದೂರು ಕೊಡಲು ಧೈರ್ಯ ಬೆಳೆಸಿಕೊಳ್ಳಿ

ಕೆಆರ್.ಪೇಟೆ: ಮಹಿಳೆಯರು ತಮ್ಮ ವಿರುದ್ಧ ಅನ್ಯಾಯ ನಡೆದ ಸಂದರ್ಭದಲ್ಲಿ ಯಾವ ಭಯವು ಇಲ್ಲದೆ ಪೊಲೀಸ್ ಠಾಣೆಗೆ ಹೋಗಿ ದೂರು ದಾಖಲಿಸುವ ಧೈರ್ಯ ಬೆಳೆಸಿಕೊಳ್ಳಬೇಕು ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌದರಿ ತಿಳಿಸಿದರು.

ತಾಲೂಕಿನ ಗುರುಭವನದಲ್ಲಿ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದ ಅವರು ಕರ್ನಾಟಕ ಪೊಲೀಸ್ ಜನಸ್ನೇಹಿ ಎಂದೇ ಹೆಸರುವಾಸಿಯಾಗಿದ್ದು, ಮಹಿಳೆಯರು ತಮ್ಮ ಬಳಿ ಸದಾ ಸ್ಥಳೀಯ ಪೊಲೀಸ್ ಠಾಣೆ ಅಥವಾ ಪೊಲೀಸ್ ಅಧಿಕಾರಿಗಳ ಸಂಖ್ಯೆಯನ್ನು ಇಟ್ಟುಕೊಳ್ಳಬೇಕು. ಕಷ್ಟದಲ್ಲಿ ಅಥವಾ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ಸಂದರ್ಭದಲ್ಲಿ ಸರಿಯಾದ ಸ್ಪಂದನೆ ಸಿಗದಿದ್ದರೆ ನಂತರ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಸಂಪರ್ಕಿಸಿ ಎಂದು ಕಿವಿ ಮಾತು ಹೇಳಿದರು.

ಮಂಡ್ಯದಲ್ಲಿ ಸಮಗ್ರ ಕೃಷಿ ವಿಶ್ವವಿದ್ಯಾಲಯಕ್ಕೆ ಸಚಿವ ಸಂಪುಟ ಅನಮೋದನೆ

ಮಂಡ್ಯ ವಿ.ಸಿ.ಫಾರಂನ ಪ್ರತಿಷ್ಠಿತ ಕೃಷಿ ಕಾಲೇಜು ಸದ್ಯದಲ್ಲೇ ವಿಶ್ವವಿದ್ಯಾನಿಲಯ

ಮಂಡ್ಯ,ಜ.16(ಮೋಹನ್‌ರಾಜ್)– ಮಂಡ್ಯದಲ್ಲಿ ನೂತನ ಸಮಗ್ರ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸಬೇಕೆನ್ನುವ ಬಹುದಿನದ ಕನಸು ನನಸಾಗುವ ಹಂತ ತಲುಪಿದೆ.

ರಾಜ್ಯದಲ್ಲಿ ಮೈಸೂರು ಕಂದಾಯ ವಿಭಾಗದಲ್ಲಿ ಯಾವುದೇ ಕೃಷಿ ಆಧಾರಿತ ವಿಶ್ವವಿದ್ಯಾಲಯಗಳು ಇರದೇ ಇರುವುದರಿಂದ ಪ್ರಸ್ತುತ ಸಮಗ್ರ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸ್ಥಾಪನೆಯಿಂದ ರೈತರ ಅನೇಕ ಸಮಸ್ಯೆಗಳಿಗೆ ವಿಶೇಷವಾಗಿ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಒಂದೇ ಮೂಲದಿಂದ ಪರಿಹಾರ ದೊರಕಿಸಬೇಕೆಂಬ ಮಹತ್ವಾಕಾಂಕ್ಷಿ ಕನಸು ಈ ಮೂಲಕ ನನಸಾಗಿದೆ.

ಈಗಾಗಲೇ ರಾಜ್ಯದ ಶಿವಮೊಗ್ಗದಲ್ಲಿ ಸಸ್ಯಾಧಾರಿತ ಕೃಷಿ ವಿಜ್ಞಾನಗಳ ಸಮಗ್ರ ಕೃಷಿ ಹಾಗೂ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು 2013ರಿಂದ ರೈತರ ಆಶೋತ್ತರಗಳಿಗೆ ಪೂರಕವಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ ಇದೇ ಮಾದರಿಯಲ್ಲೇ ಮಂಡ್ಯದಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆ ಅತೀ ಅವಶ್ಯವಾಗಿದ್ದು, ಇಂದು ನಡೆದ ಕ್ಯಾಬಿನೆಟ್ ಸಭೆಯಲ್ಲಿ ಮಂಡ್ಯ ಕೃಷಿ ವಿಶ್ವವಿದ್ಯಾನಿಲಯಕ್ಕೆ ಅನುಮೋದನೆ ದೊರೆತಿದೆ.

ನೂತನವಾಗಿ ಪ್ರಾರಂಭಿಸುವ ಮಂಡ್ಯ ಕೃಷಿ ವಿಶ್ವವಿದ್ಯಾಲಯಕ್ಕೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಮಂಡ್ಯ ಕೃಷಿ ಕಾಲೇಜು (ವಿ.ಸಿ ಫಾರಂ), ಹಾಸನ ಕೃಷಿ ಕಾಲೇಜು ಹಾಗೂ ಚಾಮರಾಜನಗರ ಕೃಷಿ ಕಾಲೇಜುಗಳು ಹಾಗೂ ಶಿವಮೊಗ್ಗ ವಿಶ್ವವಿದ್ಯಾಲಯದಿಂದ ಪೊನ್ನಂಪೇಟೆ ಅರಣ್ಯ ಕಾಲೇಜು ಹಾಗೂ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದಿಂದ ಮೈಸೂರು ತೋಟಗಾರಿಕೆ ಕಾಲೇಜು ಮಂಡ್ಯ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಗೊಳ್ಳುತ್ತಿವೆ.

ಮೈಸೂರು, ಚಾ.ನಗರ, ಹಾಸನ, ಮಡಿಕೇರಿಯ ಹಲವು ಕೃಷಿ, ತೋಟಗಾರಿಕೆ ಸಂಸ್ಥೆಗಳು ಮಂಡ್ಯ ಕೃಷಿ ವಿವಿ ಸುಪರ್ದಿಗೆ



ನೂತನವಾಗಿ ಪ್ರಾರಂಭಗೊಳ್ಳುವ ಮಂಡ್ಯ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳು ಸೇರ್ಪಡೆಗೊಳ್ಳುತ್ತವೆ, ಕಾರಣ ಈ, ಜಿಲ್ಲೆಗಳಲ್ಲಿ ಇರುವ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳ ಶಿಕ್ಷಣ, ಸಂಶೋಧನೆ ಹಾಗೂ ವಿಸ್ತರಣಾ ಘಟಕಗಳು ಯಥಾವತ್ತಾಗಿ ಮಂಡ್ಯ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಗೊಳ್ಳುತ್ತವೆ.

ಶಿವಮೊಗ್ಗ ತೋಟಗಾರಿಕೆ ಮತ್ತು ಕೃಷಿ ವಿಶ್ವವಿದ್ಯಾಲಯದ ಮಾದರಿಯಲ್ಲಿ ಮಂಡ್ಯದಲ್ಲಿ ಪ್ರಾರಂಭಿಸುವ ನೂತನ ಕೃಷಿ ವಿಶ್ವವಿದ್ಯಾಲಯವನ್ನು ಕೂಡಾ ಎಲ್ಲಾ ಸಸ್ಯ ಶಾಸ್ತ್ರಗಳ ಸಮನ್ವಯತೆಯನ್ನು ಸಾಧಿಸಿ ಮಂಡ್ಯ ಸಮಗ್ರ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ವಿ.ಸಿ.ಫಾರಂನ ನೂತನ ಕೃಷಿ ವಿಶ್ವವಿದ್ಯಾಲಯಕ್ಕೆ ವಿಲೀನಗೊಳ್ಳಲಿರುವ ರಾಜ್ಯದ ವಿವಿಧ ಸಂಸ್ಥೆಗಳ ವಿವರ: ಮಂಡ್ಯದ ಕೃಷಿ ಕಾಲೇಜು, ವಲಯ ಕೃಷಿ ಸಂಶೋಧನಾ ಕೇಂದ್ರ, ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ), ಕೃಷಿ ಡಿಪ್ಲೊಮಾ, ಬೆಲ್ಲದ ಪಾರ್ಕ್, ಭತ್ತ, ಮೇವು ಬೆಳೆಗಳು ಮತ್ತು ಬಳಕೆ, ಕಬ್ಬು, ಸಣ್ಣ ರಾಗಿ, ಫಾರ್ಮ್ ಇಂಪ್ಲಿಮೆಂಟ್ ಮತ್ತು ಮೆಷಿನರಿ, ವಾಟರ್ ಟೆಕ್ನಾಲಜಿ ಸೆಂಟರ್, ಮೆಕ್ಕೆ ಜೋಳ, ಬೀಜ ಘಟಕ, ಹಾಗೂ ಕೃಷಿ ವಿಸ್ತರಣಾ ಶಿಕ್ಷಣ ಘಟಕ.

ಬೆಂಗಳೂರಿನ ಕೃಷಿ ವಿವಿಗೆ ಸೇರ್ಪಡೆಯಾಗಿದ್ದ ಮೈಸೂರಿನ ಸಾವಯವ ಕೃಷಿ ಸಂಶೋಧನಾ ಕೇಂದ್ರ, ನಾಗೇನಹಳ್ಳಿ, ವಿಸ್ತರಣಾ ಶಿಕ್ಷಣ ಘಟಕ, ನಾಗೇನಹಳ್ಳಿ, ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿವಿಯೊಂದಿಗಿದ್ದ ಮೈಸೂರಿನ ತೋಟಗಾರಿಕೆ ಕಾಲೇಜು ಹಾಗೂ ಎಚ್‌ಆರ್‌ಇಸಿ, ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿವಿಗೆ ಸೇರ್ಪಡೆಯಾಗಿದ್ದ ಮಡಿಕೇರಿಯ ಅರಣ್ಯ ಮಹಾವಿದ್ಯಾಲಯ ಪೊನ್ನಂಪೇಟೆ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಪೊನ್ನಂಪೇಟೆ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಮಡಿಕೇರಿ, ಭತ್ತ, ವಿಸ್ತರಣಾ ಶಿಕ್ಷಣ ಘಟಕ, ಮಡಿಕೇರಿ.

ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಜೊತೆಗಿದ್ದ ಹಾಸನ ಜಿಲ್ಲೆಯ ಕೃಷಿ ಮಹಾವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರ, ಕೃಷಿ ಸಂಶೋಧನಾ ಕೇಂದ್ರ, ಹೊಳೆನರಸೀಪುರ, ಕೃಷಿ ಸಂಶೋಧನಾ ಕೇಂದ್ರ ಮಡೆನೂರು, ಜೈವಿಕ ಇಂಧನ ಸಂಶೋಧನಾ ಕೇಂದ್ರ.

ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಕ್ಕೆ ಸೇರ್ಪಡೆಯಾಗಿದ್ದ ಹಾಸನದ ಎಐಸಿಆರ್‌ಪಿ (ತಾಳೆಗಳು), ತೋಟಗಾರಿಕೆ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ, ಅರಸೀಕೆರೆ, ಎಚ್‌ಆರ್‌ಇಸಿ, ಸೋಮನಹಳ್ಳಿ ಕಾವಲ್, ಎಐಸಿಆರ್‌ಪಿ (ಆಲುಗೆಡ್ಡೆ), ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಜೊತೆಗಿದ್ದ ಚಾಮರಾಜನಗರ ಜಿಲ್ಲೆಯ ಕೃಷಿ ಮಹಾವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರ(ಕೆವಿಕೆ), ಎಐಸಿಆರ್‌ಪಿ (ಹತ್ತಿ), ಎಐಸಿಆರ್‌ಪಿ (ಜೋಳ), ಜೈವಿಕ ಇಂಧನ ಮಾಹಿತಿ ಕೇಂದ್ರ, ಚಾಮರಾಜನಗರ.

ಬಲಮುರಿಯಲ್ಲಿ ಈಜಲು ತೆರಳಿದ್ದ ಯುವಕ ಸಾವು

ಶ್ರೀರಂಗಪಟ್ಟಣ,ಜ.16–ಬಲಮುರಿಯಲ್ಲಿ ಈಜಲು ತನ್ನ ಮೂವರು ಸ್ನೇಹಿತರೊಂದಿಗೆ ತೆರಳಿದ್ದ ಮೈಸೂರಿನ ಎಂಆರ್‌ಐಟಿ ಕಾಲೇಜಿನ ವಿದ್ಯಾರ್ಥಿ ಶ್ರೇಯಸ್.ಎಸ್ (19) ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಮಂಗಳವಾರ ಸಂಭವಿಸಿದೆ.

ಮೃತನ ಹೆಸರು ಪೊಲೀಸ್ ಮೂಲಗಳ ಮಾಹಿತಿ ಪ್ರಕಾರ ಎಸ್.ಶರತ್ ಎಂದು 'ಮೈಸೂರು ಮಿತ್ರ'ದಲ್ಲಿ ಪ್ರಕಟವಾಗಿದ್ದು, ಮೃತ ಯುವಕನ ಹೆಸರನ್ನು ಶ್ರೇಯಸ್ ಎಂದು ಓದಿಕೊಳ್ಳಬೇಕಾಗಿ ವಿನಂತಿ.

236 ಚುಡಾ ನಿವೇಶನಕ್ಕೆ ಅರ್ಜಿ ಆಹ್ವಾನ

- 14.24 ಎಕರೆಯಲ್ಲಿ ವಸತಿ ಬಡಾವಣೆ ನಿರ್ಮಾಣ
- ಅಧ್ಯಕ್ಷ ಮಹಮ್ಮದ್ ಅಸ್ಗರ್ ಮಾಹಿತಿ

ಚಾಮರಾಜನಗರ, ಜ.16–ಚಾಮರಾಜನಗರ ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ(ಚುಡಾ)ದಿಂದ ಚಾಮರಾಜನಗರ–ತಿ.ನರಸೀಪುರ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಚಾಮರಾಜನಗರ ಹಾಗೂ ಮಸಗಾಪುರದ ಬಳಿ 14.24 ಎಕರೆಯಲ್ಲಿ ನಿರ್ಮಾಣವಾಗುತ್ತಿರುವ ವಸತಿ ಬಡಾವಣೆಯ 236 ನಿವೇಶನಗಳ ಹಂಚಿಕೆಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ (ಮುನ್ನಾ) ತಿಳಿಸಿದರು.

ನಗರದ ಚುಡಾ ಕಚೇರಿ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಾಧಿಕಾರ ಶೇ.50ರಷ್ಟು ವಿವಿಧ ಅಳತೆಯ ನಿವೇಶನಗಳನ್ನು ವಿವಿಧ ಪ್ರವರ್ಗಗಳ ಅಡಿಯಲ್ಲಿ ಕಡಿಮೆ ದರದಲ್ಲಿ ನೀಡಲಿದೆ. ಇಂದಿನಿಂದಲೇ (ಜ.16) ಸಾರ್ವಜನಿಕರು ಅರ್ಜಿ ಸಲ್ಲಿಸಬಹುದು ಎಂದು ಮಾಹಿತಿ ನೀಡಿದರು.

ನಿವೇಶನಾಕಾಂಕ್ಷಿಗಳು ಇಂಡಿಯನ್ ಬ್ಯಾಂಕ್‌ನ ಚಾಮರಾಜನಗರ ಶಾಖೆಯಲ್ಲಿ ಅರ್ಜಿ ಪಡೆದು ಶೇ.10ರಷ್ಟು ಶುಲ್ಕದೊಂದಿಗೆ ಫೆಬ್ರವರಿ 28ರೊಳಗೆ ಪಾವತಿಸಬೇಕು. ಒಟ್ಟು 236 ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಹಂಚಿಕೆಯಲ್ಲಿ ರೋಸ್ಟರ್ ಪದ್ಧತಿ ಪಾಲಿಸಲಾಗುವುದು. ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ, ವಿಶೇಷಚೇತನರು, ಮಾಜಿ ಸೈನಿಕರು, ಇನ್ನಿತರ ವರ್ಗಗಳು, ಸಾಮಾನ್ಯ ವರ್ಗದವರಿಗೆ ನಿವೇಶನಗಳನ್ನು ನೀಡಲಾಗುವುದು. ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ವಸತಿ ಬಡಾವಣೆ ನಿರ್ಮಿಸಲಾಗುತ್ತಿದ್ದು, ನಿವೇಶನಗಳನ್ನು 3 ರಿಂದ 4 ತಿಂಗಳೊಳಗೆ ನೀಡಲಾಗುವುದು. ಸಾರ್ವಜನಿಕರು ನಗರಾಭಿವೃದ್ಧಿ ಪ್ರಾಧಿಕಾರದ ಈ ಯೋಜನೆಯನ್ನು ಸದ್ಬಳಕೆ ಮಾಡಿಕೊಂಡು ನಗರದ ಬೆಳವಣಿಗೆಗೆ ಸಹಕರಿಸಬೇಕು ಎಂದು ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮಾತನಾಡಿದರು.

ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಜಿಲ್ಲಾಧಿಕಾರಿಗಳ ಮಾರ್ಗದರ್ಶನ ಹಾಗೂ ಉತ್ತೇಜನದಿಂದ ಚುಡಾ ನಿವೇಶನ ಹಂಚಿಕೆ ಪ್ರಕ್ರಿಯೆಗೆ ಮುಂದಾಗಿದೆ. ಪ್ರಾಧಿಕಾರ ಚಾಮರಾಜನಗರಕ್ಕೆ ಹೊಂದಿಕೊಂಡಿರುವ ಕೋಡಿಮೋಳೆ ಕೆರೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಚಟುವಟಿಕೆಗಳಿಗಾಗಿ 4.25 ಕೋಟಿ ರೂ. ವೆಚ್ಚದಲ್ಲಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿ ಸರ್ಕಾರಕ್ಕೆ ಅನುಮೋದನೆ ಸಲ್ಲಿಸಲಾಗಿದೆ. ಚುಡಾ ವ್ಯಾಪ್ತಿಯ ಉದ್ಯಾನಗಳ ಅಭಿವೃದ್ಧಿಗೂ ಮುಂದಾಗಿದ್ದೇವೆ ಎಂದರು.

> ಚುಡಾ ವ್ಯಾಪ್ತಿಯ ವಿಸ್ತಾರ ಈ ಹಿಂದಿಗಿಂತಲೂ ಹನ್ನೊಂದು ಪಟ್ಟು ಹೆಚ್ಚಾಗಿದೆ. ಹರದನಹಳ್ಳಿ, ಚಂದಕವಾಡಿ, ಕೂಡ್ಲೂರು, ಮಾದಾಪುರ ಮತ್ತು ಭೋಗಾಪುರ, ಬದನಗುಪ್ಪೆಯ ಸ್ವಲ್ಪ ಭಾಗ ವ್ಯಾಪ್ತಿಗೆ ಒಳಪಡುತ್ತಿದೆ. ಚುಡಾ ಮಾಸ್ಟರ್ ಪ್ಲಾನ್ ಅನುಷ್ಠಾನಕ್ಕೂ ಮುಂದಾಗಿದೆ. ನಗರ ಪ್ರಾಧಿಕಾರ ವ್ಯಾಪ್ತಿಯಲ್ಲಿ 14 ಮಹಡಿಗಳವರೆಗೂ ಕಟ್ಟಡ ಕಟ್ಟಲು ಸಹ ಅವಕಾಶ ನೀಡಲಾಗುತ್ತದೆ.
>
> -ಮಹಮ್ಮದ್ ಅಸ್ಗರ್, ಚುಡಾ ಅಧ್ಯಕ್ಷ

ಸುದ್ದಿಗೋಷ್ಠಿಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ಸದಸ್ಯರಾದ ಪುಟ್ಟಸ್ವಾಮಿ, ಎಸ್.ರಾಜು, ರಾಜೇಂದ್ರ, ಅಂಬಿಕಾ, ಆಯುಕ್ತೆ ಹೆಚ್.ವಿ.ಸೀಮಾ, ಸಹಾಯಕ ನಿರ್ದೇಶಕ ರಿತೇಶ್, ಇಂಜಿನಿಯರ್ ಐಶ್ವರ್ಯ ಇದ್ದರು.

ಚಾ.ನಗರದಲ್ಲಿ ಸುತ್ತೂರು ಜಾತ್ರಾ ಪ್ರಚಾರ ರಥಕ್ಕೆ ಸ್ವಾಗತ



ಸುತ್ತೂರು ಜಾತ್ರಾ ಪ್ರಚಾರ ರಥಕ್ಕೆ ಚಾಮರಾಜನಗರದಲ್ಲಿ ಸ್ವಾಗತಿಸಲಾಯಿತು.

ಚಾಮರಾಜನಗರ, ಜ.16–ಶ್ರೀಕ್ಷೇತ್ರ ಸುತ್ತೂರಿನಲ್ಲಿ ಜ.26 ರಿಂದ 31ರವರೆಗೆ ನಡೆಯಲಿರುವ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಪ್ರಚಾರ ರಥಕ್ಕೆ ನಗರದಲ್ಲಿ ಸ್ವಾಗತಿಸಲಾಯಿತು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಆವರಣದಲ್ಲಿ ಪ್ರಚಾರ ರಥಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ, ಸುತ್ತೂರು ಜಾತ್ರೆಯಲ್ಲಿ ದನಗಳ ಪರಿಷೆ, ಗ್ರಾಮೀಣ ಕೂಟ, ಭಜನಾ, ರಥೋತ್ಸವ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ನಾಟಕಗಳ ಪ್ರದರ್ಶನವಿರುತ್ತದೆ ಎಂದರು.

ನಗರ ಮಠದ ಶ್ರೀ ಚನ್ನಬಸವಸ್ವಾಮೀಜಿ ಮಾತನಾಡಿ, ದಕ್ಷಿಣ ಕರ್ನಾಟದಕ ಕುಂಭಮೇಳ ಮಾದರಿಯಲ್ಲಿ ಸುತ್ತೂರು ಜಾತ್ರೆ ನಡೆಯಲಿದೆ. ಶರಣರ ಸಂಗಮ ಸಹ ಆಗಿದೆ. ಎಲ್ಲಾ ವರ್ಗದ ಜನರು ಜಾತ್ರೆಯಲ್ಲಿ ಭಾಗವಹಿಸಿ ಸಂತಸದಿಂದ ನೋಡುವ ಭಾಗ್ಯವನ್ನು ಶ್ರೀಗಳು ಕರುಣಿಸಿದ್ದಾರೆ ಎಂದು ತಿಳಿಸಿದರು. ಇದೇ ವೇಳೆ ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ನಗರಸಭಾ ಉಪಾಧ್ಯಕ್ಷೆ ಮಮತಾ ಬಾಲಸುಬ್ರಹ್ಮಣ್ಯ, ಚಾಮುಲ್ ಅಧ್ಯಕ್ಷ ವೈ.ಸಿ.ನಾಗೇಂದ್ರ, ನಿರ್ದೇಶಕ ಎಚ್.ಎಸ್.ಬಸವರಾಜು, ಮುಖಂಡರಾದ ಮೂಡ್ಲುಪುರ ನಂದೀಶ್, ಬಿಸಲವಾಡಿ ಉಮೇಶ್, ಪಿಆರ್‌ಓ ಆರ್.ಎಂ.ಸ್ವಾಮಿ, ಶರಣ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಬಿ.ಕೆ.ರವಿಕುಮಾರ್, ತಾಲೂಕು ಅಧ್ಯಕ್ಷ ಆರ್.ಎಸ್.ಲಿಂಗರಾಜು, ರೋಟರಿ ಅಧ್ಯಕ್ಷ ರಾಮಸಮುದ್ರ ನಾಗರಾಜು, ಕೆಂಪನಪುರ ಮಹದೇವಸ್ವಾಮಿ, ನಗರಸಭಾ ಸದಸ್ಯರಾದ ಚಿನ್ನಮ್ಮ, ಕರಿನಂಜನಪುರ ಸ್ವಾಮಿ, ಎಪಿಎಂಸಿ ಅಧ್ಯಕ್ಷ ಸೋಮೇಶ್, ಜಿಪಂ ಮಾಜಿ ಸದಸ್ಯ ರತ್ನಮ್ಮ, ದೊಡ್ಡರಾಯಪೇಟೆ ಗಿರೀಶ್, ಯಣಗುಂಬ ರಾಜೇಂದ್ರ ಇದ್ದರು.

ಚಿಕ್ಕಲ್ಲೂರು ಸಿದ್ದಪ್ಪಾಜಿ ಜಾತ್ರೆಯಲ್ಲಿ ಪಂಕ್ತಿಸೇವೆ



ಹನೂರು, ಜ.16– ಪ್ರಸಿದ್ಧ ಚಿಕ್ಕಲ್ಲೂರು ಜಾತ್ರೆಯಲ್ಲಿ ಗುರುವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಪಂಕ್ತಿಸೇವೆ ನಡೆಯಿತು.

ಪಂಕ್ತಿಸೇವೆಗೆ ಬಂದ ಭಕ್ತರು ದೇವಾಲಯ ಸುತ್ತಮುತ್ತಲಿನ ಜಮೀನುಗಳಲ್ಲಿ ಬೀಡುಬಿಟ್ಟಿದ್ದರು. ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಜಾತ್ರೆಯಲ್ಲಿ ಭಕ್ತರು ಧೂಳನ್ನು ಲೆಕ್ಕಿಸದೆ ನೀಲಗಾರ ವಿಧಾನಗಳೊಡನೆ ಪಾಲ್ಗೊಂಡರು. ಬಿಸಿಲನ್ನು ಲೆಕ್ಕಿಸದೆ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ಪ್ರಮುಖ ಆಕರ್ಷಣೆ ಪಂಕ್ತಿಸೇವೆ: ಸಿದ್ದಪ್ಪಾಜಿ ಜಾತ್ರೆಯಲ್ಲಿ ಬಾಡೂಟದ ಪಂಕ್ತಿಸೇವೆಯೇ ಪ್ರಮುಖ. ಆದರೆ, ಪ್ರಾಣಿ ಬಲಿ ನಿಷೇಧ ಹಿನ್ನೆಲೆಯಲ್ಲಿ ಜಾತ್ರೆ ಮೈದಾನದಲ್ಲಿ ಬಾಡೂಟಕ್ಕೆ ಅನುಮತಿ ನೀಡದೆ, ಮತ್ತೊಂದೆಡೆ ಅವಕಾಶ ನೀಡಿದ್ದರಿಂದ ಪಂಕ್ತಿಸೇವೆ ಸಾಂಗವಾಗಿ ನಡೆಯಿತು. ಪ್ರಾಣಿ ಬಲಿಗೆ ಅವಕಾಶ ಇಲ್ಲದಂತೆ ಜಿಲ್ಲಾಡಳಿತ ಬಂದೋಬಸ್ತ್ ಮಾಡಿತ್ತು. ಆದರೆ, ದೂರದಲ್ಲೇ ಪಂಕ್ತಿಸೇವೆಗೆ ಬಾಡು ಹಾಗೂ ಆಹಾರ ಪದಾರ್ಥಗಳನ್ನು ತಂದು ಸೇವೆ ಪೂರೈಸಲಾಯಿತು. ಜಿಲ್ಲೆ ಸೇರಿದಂತೆ ರಾಜ್ಯದ ನಾನಾ ಕಡೆಗಳಿಂದ ಬಂದಿದ್ದ ಸಾವಿರಾರು ಭಕ್ತರು, ಪವಾಡ ಪುರುಷ ಸಿದ್ದಪ್ಪಾಜಿಗೆ ಭಕ್ತಿ ಸಮರ್ಪಿಸಿದರು.

ಭಕ್ತರ ಸಂಖ್ಯೆ ಕಡಿಮೆ: ಈ ಬಾರಿ ಚಿಕ್ಕಲ್ಲೂರು ಸಿದ್ದಪ್ಪಾಜಿ ಜಾತ್ರೆಯಲ್ಲಿ ಭಕ್ತರ ಸಂಖ್ಯೆ ಕಡಿಮೆಯಾಗಿದೆ. ಪ್ರಾಣಿ ಬಲಿ ನಿಷೇಧ ಹಿನ್ನೆಲೆಯಲ್ಲಿ ಭಕ್ತರು ಉಳಿದುಕೊಳ್ಳಲು ಹಾಕುತ್ತಿದ್ದ ಟೆಂಟ್‌ಗಳ ಸಂಖ್ಯೆಯೂ ತೀರ ಕಡಿಮೆಯಾಗಿದೆ.



ಚಿಕ್ಕಲ್ಲೂರು ಜಾತ್ರೆಯಲ್ಲಿ ಭಕ್ತರು ಪಂಕ್ತಿಸೇವೆಯಲ್ಲಿ ಭಾಗವಹಿಸಿದ್ದರು.



ಆ.15ಕ್ಕೆ ಶಿವಣ್ಣ-ಉಪೇಂದ್ರ ಅಭಿನಯದ

45

ಬಿಡುಗಡೆ

ಶಿವರಾಜ್‌ಕುಮಾರ್, ಉಪೇಂದ್ರ, ರಾಜ್ ಬಿ.ಶೆಟ್ಟಿ ಅಭಿನಯದ ಮಲ್ಟಿಸ್ಟಾರರ್ ಚಿತ್ರ '45' ಬಿಡುಗಡೆ ದಿನಾಂಕವನ್ನು 2 ನಿಮಿಷಗಳ 3ಡಿ ಮೋಷನ್ ಪೋಸ್ಟರ್ ಮೂಲಕ ಪ್ರಕಟಿಸಲಾಯಿತು. ಆ.15ರ ಸ್ವಾತಂತ್ರ್ಯೋತ್ಸವದ ಕೊಡುಗೆಯಾಗಿ "45" ರಾಜ್ಯಾದ್ಯಂತ ತೆರೆಕಾಣಲಿದೆ. ಸ್ಕೂಟರ್‌ನಲ್ಲಿ ಬರುತ್ತಿರುವ ಶಿವರಾಜಕುಮಾರ್ ಹಿಂದೆ ನೂರಾರು ಆಕ್ರಮಣಕಾರರು ಫಾಲೋ ಮಾಡುತ್ತಾರೆ. ಅತ್ಯಾಧುನಿಕ ಗನ್ ಹೊಂದಿದ್ದ ಶಿವಣ್ಣ ಅವರನ್ನೆಲ್ಲ ಶೂಟ್ ಮಾಡುತ್ತಾರೆ, ಕೊನೆಗೆ ಗುಡ್ಡವೊಂದನ್ನು ಶೂಟ್ ಮಾಡಿದಾಗ ಸಿಡಿದ ಬಂಡೆಯಲ್ಲಿ ಮೂವರು ನಾಯಕರ ಭಾವಚಿತ್ರ ಮೂಡಿ, ಬಿಡುಗಡೆಯ ದಿನಾಂಕ ಘೋಷಣೆಯಾಗುತ್ತದೆ. ಕನ್ನಡದಲ್ಲಿ ಇಂಥ ಪ್ರಯತ್ನ ಯಾರೂ ಮಾಡಿಲ್ಲವೆಂದೇ ಹೇಳಬಹುದು. ಈ ವಿಡಿಯೋ ಬಿಡುಗಡೆಯಾದ ಕೆಲವೇ ಗಂಟೆಗಳಲ್ಲಿ ಮಿಲಿಯನ್‌ಗಟ್ಟಲೆ ವೀಕ್ಷಣೆಯಾಗಿದೆ. ಸಚಿವ ರಾಮಲಿಂಗ ರೆಡ್ಡಿ, ಕೆ.ವಿ.ಎನ್‌ನ ವೆಂಕಟ್ ನಾರಾಯಣ್, ಮಾಜಿ ಶಾಸಕ ರಾಮಚಂದ್ರೇಗೌಡ, ಡಾ.ಸಂಜಯ್‌ಗೌಡ, ಆನಂದ್ ಆಡಿಯೋ ಶ್ಯಾಮ್ ಛಾಬ್ರಿಯಾ, ಆನಂದ್ ಛಾಬ್ರಿಯಾ, ಕೆ.ಮಂಜು, ಇಂದ್ರಜಿತ್ ಲಂಕೇಶ್, ಶ್ರೇಯಸ್ ಮಂಜು ಸೇರಿದಂತೆ ಅನೇಕ ಗಣ್ಯರು ಈ ಸಮಾರಂಭದಲ್ಲಿದ್ದರು. ನಿರ್ಮಾಪಕ ರಮೇಶ್‌ರೆಡ್ಡಿ ಅವರ ಪುತ್ರ ಸೂರಜ್ ಈ ವಿಡಿಯೋ ಬಿಡುಗಡೆ ಮಾಡಿದರು.

ನಿರ್ಮಾಪಕ ಎಂ.ರಮೇಶ್ ರೆಡ್ಡಿ ಮಾತನಾಡಿ, ಒಂದು ಚಿತ್ರದಲ್ಲಿ ಕಂಟೆಂಟ್ ಹೇಗಿದೆ ಅನ್ನೋದು ಮುಖ್ಯ. ಆ ಚಿತ್ರ 100 ಕೋಟಿ ಮಾಡುತ್ತೋ, ಸಾವಿರ ಕೋಟಿ ಮಾಡುತ್ತೋ ಅದು ದೇವರಿಗೆ ಗೊತ್ತು. ಆದರೆ ಚಿತ್ರ ಮೂಡಿಬಂದಿರುವ ಬಗೆ ಹಾಗೂ ಚಿತ್ರದ ಬಗೆಗಿನ ಕುತೂಹಲ ನೋಡಿದರೆ ಸಿನಿಮಾ ಎಲ್ಲರಿಗೂ ಮೆಚ್ಚುಗೆಯಾಗಲಿದೆ ಅಂತ ಹೇಳಬಹುದು. ಕಥೆಗೆ ಎಷ್ಟು ಬೇಕೋ ಅಷ್ಟು ಬಂಡವಾಳ ಹಾಕಿದ್ದೇನೆ ಎಂದರು.

ನಟ ಉಪೇಂದ್ರ ಮಾತನಾಡಿ, ನಿರ್ದೇಶಕ ಅರ್ಜುನ್ ಜನ್ಯ ಸಿನಿಮಾ ಮಾಡಿರುವ ಪರಿ ಮೆಚ್ಚುವಂಥದ್ದು. ಈ ಸಮಾರಂಭದ ವೈಭವ ನೋಡಿದರೆ, ಇದು ರಿಲೀಸ್ ಡೇಟ್ ಅನೌನ್ಸ್‌ಮೆಂಟ್ ಕಾರ್ಯಕ್ರಮದ ಹಾಗಿಲ್ಲ. ಬದಲಾಗಿ ಚಿತ್ರದ ಸಕ್ಸಸ್‌ಮೀಟ್‌ನಂತಿದೆ ಎಂದು ಆಶ್ಚರ್ಯ ವ್ಯಕ್ತಪಡಿಸಿದರು.

ನಿರ್ದೇಶಕ ಅರ್ಜುನ್ ಜನ್ಯ ಮಾತನಾಡುತ್ತಾ, ಈಗಾಗಲೇ ಶೂಟಿಂಗ್, ಡಬ್ಬಿಂಗ್ ಸೇರಿದಂತೆ ಎಲ್ಲಾ ಕೆಲಸ ಮುಗಿದಿದೆ. ಚಿತ್ರದಲ್ಲಿ ವಿಎಫ್‌ಎಕ್ಸ್ ಕೆಲಸ ಜಾಸ್ತಿಯಿದ್ದು, ಕೆನಡಾದ ಮಾರ್ಜ್ ಸ್ಟುಡಿಯೋದಲ್ಲಿ ವಿ.ಎಫ್.ಎಕ್ಸ್. ಕೆಲಸ ನಡೆಯುತ್ತಿದೆ. ಮೇ ಅಂತ್ಯದಲ್ಲಿ ಫೈನಲ್ ಕಾಪಿ ಬರಲಿದೆ. ನಂತರ 2 ತಿಂಗಳ ಸಮಯ ಇಟ್ಟುಕೊಂಡು ಆಗಸ್ಟ್ 15ಕ್ಕೆ ರಿಲೀಸ್ ಡೇಟ್ ಘೋಷಿಸಿದ್ದೇವೆ. ನನ್ನ ಮೊದಲ ಚಿತ್ರದಲ್ಲೇ ಶಿವಣ್ಣ, ಉಪೇಂದ್ರ, ರಾಜ್ ಬಿ.ಶೆಟ್ಟಿಯಂಥ ಮಹಾನ್ ಕಲಾವಿದರು ನಟಿಸಿದ್ದಾರೆಂದರೆ ಈಗಲೂ ಆಶ್ಚರ್ಯವಾಗುತ್ತಿದೆ ಎಂದರು.



ಗ್ಲೋಪಿಕ್ಸ್ ಕನ್ನಡಕ್ಕೆ ಮತ್ತೊಂದು ಓಟಿಟಿ ವೇದಿಕೆ



ದೊಡ್ಡದೊಡ್ಡ ಸಿನಿಮಾಗಳ ಜತೆ ಸಣ್ಣಪುಟ್ಟ ನಿರ್ಮಾಪಕರಿಗೂ ಅನುಕೂಲ ಮಾಡಿಕೊಡುವ ದೃಷ್ಟಿಯಲ್ಲಿ ಇದೀಗ ಮತ್ತೊಂದು ಒಟಿಟಿ ವೇದಿಕೆ ಪ್ರಾರಂಭವಾಗುತ್ತಿದೆ. ಅದುವೇ ಗ್ಲೋಪಿಕ್ಸ್. ಇತ್ತೀಚೆಗಷ್ಟೇ ಇದರ ಲೋಗೋ ಅನಾವರಣ ಕಾರ್ಯಕ್ರಮ ಕರ್ನಾಟಕ, ಕೇರಳ ಹಾಗೂ ಹೈದರಾಬಾದ್‌ನಲ್ಲಿ ಏಕಕಾಲಕ್ಕೆ ನಡೆದಿದೆ.

ಬೆಂಗಳೂರಿನಲ್ಲಿ ಫಿಲಂ ಚೇಂಬರ್ ಅಧ್ಯಕ್ಷ ನರಸಿಂಹಲು, ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಹಾಗೂ ಹಿರಿಯ ಛಾಯಾಗ್ರಾಹಕ ಶ್ರೀವತ್ಸ ಶಾಂಡಿಲ್ಯ, ಗೋಪಿಕ್ಸ್ ಓಟಿಟಿಯ ಲೋಗೊ ಲಾಂಚ್ ಮಾಡಿದರು. ಕನ್ನಡ ವಿಭಾಗದ ಕ್ರಿಯೇಟಿವ್ ಮುಖ್ಯಸ್ಥೆ ಪ್ರತಿಭಾ ಪಟವರ್ಧನ್ ಹಾಗೂ ಹಣಕಾಸು ಸಲಹೆಗಾರ ಮಂಜುನಾಥ್ ಪಟವರ್ಧನ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ವೇದಿಕೆಯಲ್ಲಿ ಮಾತನಾಡಿದ ಪ್ರತಿಭಾ ಪಟವರ್ಧನ್, ವಿಶೇಷವಾಗಿ ಕನ್ನಡದ ಸಣ್ಣ ನಿರ್ಮಾಪಕರಿಗೆ ಅನುಕೂಲವಾಗಲೆಂದು ಈ ಓಟಿಟಿ ಪ್ರಾರಂಭಿಸುತ್ತಿದ್ದೇವೆ. ಮೇ ತಿಂಗಳಲ್ಲಿ ಅಧಿಕೃತವಾಗಿ ಈ ಓಟಿಟಿಯ ಉದ್ಘಾಟನೆಯಾಗಲಿದೆ. ನಮ್ಮ ಒಟಿಟಿಯಲ್ಲಿ 360-ಡಿಗ್ರಿ ಮನರಂಜನೆ ನೀಡಲು ಉದ್ದೇಶಿಸಲಾಗಿದೆ. ಸಿನಿಮಾ, ವೆಬ್ ಸೀರೀಸ್‌ಗಳು, ಸುದ್ದಿಗಳು ಸೇರಿದಂತೆ ಹಲವು ಆಯಾಮಗಳಲ್ಲಿ ನೋಡುಗರಿಗೆ ಮನರಂಜನೆ ಸಿಗಲಿದೆ.

ಗೋಪಿಕ್ಸ್ ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ನಿರ್ಮಾಣವಾದ ಭಾರತದ ಪ್ರಮುಖ ಓಟಿಟಿ ವೇದಿಕೆಯಾಗಿದೆ. ವೈವಿಧ್ಯಮಯ ಕಂಟೆಂಟ್‌ಗಳ ಜತೆ ಚಲನಚಿತ್ರಗಳು, ವೆಬ್ ಸರಣಿಗಳು, ಸಾಕ್ಷ್ಯ ಚಿತ್ರಗಳು, ಸುದ್ದಿಗಳು ಮತ್ತು ರಿಯಾಲಿಟಿ ಶೋಗಳನ್ನು ಒಳಗೊಂಡಿರುವ ಗೋಪಿಕ್ಸ್‌ನಲ್ಲಿ ಪ್ರಾದೇಶಿಕತೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದ್ದು ಕನ್ನಡ, ತಮಿಳು, ಇಂಗ್ಲಿಷ್, ಗುಜರಾತಿ, ಬಂಗಾಳಿ ಮತ್ತು ಮಲಯಾಳಂ ಕಂಟೆಂಟ್‌ಗಳು ಸಹ ವೀಕ್ಷಣೆಗೆ ಸಿಗಲಿವೆ. ವೆಬ್, ಮೊಬೈಲ್ ಮತ್ತು ಟ್ಯಾಬ್ಲೆಟ್ ಬಳಕೆದಾರರಿಗೆ ಇದು ಬಳಕೆದಾರರ ಸ್ನೇಹಿಯಾಗಿರಲಿದೆ ಎಂದರು.

ಫಿಲಂ ಚೇಂಬರ್ ಅಧ್ಯಕ್ಷ ನರಸಿಂಹಲು ಮಾತನಾಡಿ, ಗ್ಲೋಪಿಕ್ಸ್ ಓಟಿಟಿಯ ಉದ್ದೇಶ, ವ್ಯವಸ್ಥೆ ಚೆನ್ನಾಗಿದೆ. ಈ ಓಟಿಟಿ ದೊಡ್ಡಮಟ್ಟದಲ್ಲಿ ಹೆಸರು ಮಾಡಲಿ. ಗ್ಲೋಪಿಕ್ಸ್‌ನಿಂದ ಸಣ್ಣಮಟ್ಟ ಕನ್ನಡ ನಿರ್ಮಾಪಕರಿಗೆ ಅನುಕೂಲವಾಗಲಿ ಎಂದು ಹೇಳಿದರು.

ಜರ್ನಿ ಕಥೆಯಲ್ಲಿ ಕಾರೇ ಲೀಡರ್!




"#ಪಾರು ಪಾರ್ವತಿ" ಎಂಬ ಚಿತ್ರದಲ್ಲಿ ಬಿಗ್‌ಬಾಸ್ ಖ್ಯಾತಿಯ ದೀಪಿಕಾದಾಸ್ ಓರ್ವ ಬ್ಲಾಗರ್ ಆಗಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರಕ್ಕೆ ರೋಹಿತ್‌ಕೀರ್ತಿ ಆಕ್ಷನ್‌ಕಟ್ ಹೇಳಿದ್ದಾರೆ.

ಪೂನಂ ಸಿರ್‌ನಾಯಕ್ ಹಾಗೂ ಫವಾಜ್ ಅಶ್ರಫ್ ಇಬ್ಬರು ನಾಯಕರಾಗಿದ್ದು, ಒಂದು ಕಾರು ನಾಲ್ಕನೇ ಪಾತ್ರಧಾರಿಯಾಗಿದೆ ಎಂದರೆ ನೀವು ನಂಬಲೇಬೇಕು, ಹೌದು, ಚಿತ್ರದಲ್ಲಿ ಈ ಕಾರಿಗೆ ಅಷ್ಟು ಮಹತ್ವದ ಪಾತ್ರವಿದೆ, ಈಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾತನಾಡಿದ ನಿರ್ದೇಶಕ ರೋಹಿತ್, ಇದೊಂದು ಟ್ರಾವೆಲ್ ಅಡ್ವೆಂಚರಸ್ ಡ್ರಾಮಾ. 3 ಲೀಡ್ ಪಾತ್ರಗಳ ಜತೆ ಮತ್ತೊಂದು ಪಾತ್ರಧಾರಿಯಾಗಿ ಈ ಕಾರು ಬರಲಿದೆ, ಇದು ಜರ್ನಿ ಕಥೆಯಾದ್ದರಿಂದ ಕಾರು ಸಹ ಒಂದು ಪಾತ್ರವಾಗಿ ಸಾಗುತ್ತದೆ. ಬೆಂಗಳೂರಿನಲ್ಲಿ ಆರಂಭವಾಗುವ ಈ ಜರ್ನಿ ಉತ್ತರಕಾಂಡದಲ್ಲಿ ಕೊನೆಯಾಗುತ್ತೆ. ದೀಪಿಕಾದಾಸ್ ಅವರು ಪಾಯಲ್ ಎಂಬ ಬ್ಲಾಗರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಸದ್ಯ ಚಿತ್ರದ ಫೈನಲ್ ಮಿಕ್ಸಿಂಗ್ ಚೆನ್ನೈನಲ್ಲಿ ನಡೀತಿದೆ. ಚಿತ್ರದಲ್ಲಿ ಪ್ರತಿ ಲೊಕೇಶನ್‌ಗೂ ಅದರದೇ ಆದ ಪ್ರಾಮುಖ್ಯತೆಯಿದ್ದು, ಉತ್ತರ ಕಾಂಡವನ್ನು ತುಂಬಾ ಚೆನ್ನಾಗಿ ತೋರಿಸಿದ್ದೇವೆ. ಚಿತ್ರದಲ್ಲಿ ಸಾಕಷ್ಟು ಪ್ರವಾಸಿ ತಾಣಗಳನ್ನು ನೋಡಬಹುದು. ಈವರೆಗೆ ಯಾರೂ ಶೂಟ್ ಮಾಡಿರದ ಲೊಕೇಶನ್‌ಗಳನ್ನು ಹುಡುಕಿ ಶೂಟ್ ಮಾಡಿದ್ದೇವೆ. ಚಿತ್ರದಲ್ಲಿ 9 ವೆಸ್ಟರ್ನ್ ಶೈಲಿಯ ಹಾಡುಗಳಿವೆ. ಈ ಕಾರು ಪ್ರಚಾರದ ಸಲುವಾಗಿ ಕರ್ನಾಟಕದಾದ್ಯಂತ ಸಂಚರಿಸಲಿದೆ ಎಂದರು. ದೀಪಿಕಾದಾಸ್ ಮಾತನಾಡುತ್ತ, ಇದೊಂದು ಅಡ್ವೆಂಚರಸ್ ಡ್ರಾಮಾ ಚಿತ್ರ. ಬರೀ ಟ್ರಾವೆಲ್ ಕಥೆಯಲ್ಲ, ಫ್ಯಾಮಿಲಿ ಎಮೋಷನಲ್ ಡ್ರಾಮಾ, ಅಡ್ವೆಂಚರಸ್ ಕಂಟೆಂಟ್ ಕೂಡ ಚಿತ್ರದಲ್ಲಿದೆ. ಟ್ರಾವೆಲಿಂಗ್‌ನಲ್ಲಿ ನಡೆಯೋ ಸಬ್ಜೆಕ್ಟ್, ನಾನು ಆಕ್ಷನ್ ಕೂಡ ಮಾಡಿದ್ದೇನೆ. ಈ ಕಾರಿನ ಜತೆ ಒಂದು ಬಾಂಡಿಂಗ್ ಬೆಳೆದಿದೆ. ಎಷ್ಟೋ ಜನರಿಗೆ ಟ್ರಾವೆಲ್ ಮಾಡಬೇಕು ಎನ್ನುವ ಆಸೆ ಇರುತ್ತೆ, ಅಂಥವರಿಗೆಲ್ಲ ಒಂದು ಮೆಸೇಜ್ ಈ ಚಿತ್ರದಲ್ಲಿದೆ. ಚಿತ್ರದಲ್ಲಿ ನಾನೊಬ್ಬ ಬ್ಲಾಗರ್, ಸಣ್ಣ ಮಿಸ್ಟ್ರಿ ಕೂಡ ಆಕೆಯ ಜೀವನದಲ್ಲಿ ನಡೆದಿರುತ್ತೆ. ಚಿತ್ರದ ಪಾತ್ರವೊಂದು ಏನೋ ಉದ್ದೇಶಕ್ಕಾಗಿ ಯು.ಕೆ.ಗೆ ಟ್ರಾವೆಲ್ ಮಾಡಬೇಕಿರುತ್ತೆ. ಅದಕ್ಕೆ ಪಾಯಲ್ ಹೇಗೆ ಸಹಕಾರ ನೀಡುತ್ತಾಳೆ ಅನ್ನೋದೇ ಕಥೆ ಎಂದು ತನ್ನ ಪಾತ್ರವನ್ನು ವಿವರಿಸಿದರು.

ಸಿನಿಪದಬಂಧ-560



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು
ವಿಳಾಸ
ದೂರವಾಣಿ ಸಂಖ್ಯೆ

ಎಡದಿಂದ ಬಲಕ್ಕೆ

1.ಗಿರೀಶ್ ಕಾಸರವಳ್ಳಿಯ ವಿಷ್ಣುವಿನ ಎರಡನೆಯ ವೇಷ	5
4.ಹರಿಣಿ ಅಭಿನಯಕ್ಕೆ ಡಿ.ಶಂಕರ್‌ಸಿಂಗ್ ನಿರ್ದೇಶಕ	5
6.ಸಂಕಲನಕಾರನೊಬ್ಬ ಇಲ್ಲಿ ಇನ್ಸಿಲ್ ಕಳೆದು ಕೊಂಡಿದ್ದಾನೆ	2
7.ಅಂಬರೀಷ್-ಸುಮಲತಾ ಅಭಿನಯಕ್ಕೆ ರಾಜ್ ಕಿಶೋರ್ ನಿರ್ದೇಶಕ	7
9.ಅರ್ಜುನ್ ಸರ್ಜಾ-ಖುಷ್ಬುವಿನ ಪ್ರೀತಿಯ ಜ್ವಾಲೆ	3
12.ಗೋಲ್ಡನ್ ಸ್ಟಾರ್ ಗಣೇಶ್ ಮೂವರ ಜೊತೆ ಸವಾರಿ ಮಾಡಿದ್ದಾನೆ	6
13.ರಾಜ್‌ಕುಮಾರ್-ಭಾರತಿ ಅಭಿನಯದ ಪ್ರಾಚೀನ ಕಾಲದ ವಿವಾಹ ಪದ್ಧತಿ	4
15.ಕುಮಾರಿ ದಮಯಂತಿ, ವೈಜಯಂತಿ ಅಭಿನಯದ ಚಿತ್ರ	5
16.ಕನ್ನಡದ "ವಿಲನ್"	5
18.ಉಡುಗೊರೆ ನೀಡಿದ "ಗೃಹ"	5

ಮೇಲಿನಿಂದ ಕೆಳಕ್ಕೆ

1.ಒಗ್ಗಟ್ಟಾಗಿ ಜೀವಿಸಿದರೆ ನಾಕದಲ್ಲಿ ಸಿಕ್ಕಷ್ಟು ಸಂತೋಷವಿದೆ	10
2.ರಾಮ್‌ಕುಮಾರ್ ಅಭಿನಯದಲ್ಲಿ ಬೆಲೆಬಾಳುವ ಮಣಿ ಸಿಕ್ಕಿದೆ	2
3.ಕಾಳಿಂಗ ಚಿತ್ರದ ನಾಯಕಿ	6
4.ದೂರದ ಊರಿಂದ ಬಂದ ಹಮ್ಮೀರ ತಂದ ಸೀರೆ	4
5.ಲಾಕಪ್ ಡೆತ್ ಚಿತ್ರದ ನಾಯಕಿಯಲ್ಲಿ ಕೋಪವಿದೆ	3
8.ಪಟ್ಟಣಕ್ಕೆ ಬಂದವನು "ಜಗ್ಗೇಶ್"	2
10.ತಪ್ಪಾಗಿ ಭಾವನಾಗೆ ಕಾಲ್ ಮಾಡಿದಾಗ ಆ ಕಡೆಯಿಂದ ಬಂದ ಉತ್ತರ	5
11.ಮನಪೂರ್ವಕವಾಗಿ ಬಂದ ನಟಿ	3
14.ನಂಜು ತುಂಬಿಕೊಂಡಿರುವ ಹೆಣ್ಣು	4
15.ಬೆಣ್ಣೆಯುಂತಿರುವ ನಟಿ	4
17.ತವರಿನಲ್ಲಿ ಎಳೆದ "ರಥ"	2

ಸಿನಿ ಪದಬಂಧ 559ರ ಉತ್ತರ

ಅ	ಪೂ	ರ್ವ	ಸಂ	ಗ	ಮ		ಅ			
	ಜಾ				ದ		ನು	ಡಿ	ಮ	ನ
	ಗಾಂ		ಪ		ಗ		ರೂ			
ಅ	ಧಿ	ಪ	ತಿ		ಜ	ಗ	ಪ	ತಿ	ರಾ	ವ್
ನು			ತ			ಡಿ			ಕ್ಷ	
ಪ್ರ	ಜಾ		ಪಾ		ಅಂ	ಬಿ	ಕಾ		ಸ	
ಭಾ			ವ			ಡಿ		ರಾ		
ಕ		ಜ	ನ	ನಿ		ಬ್ರ		ಧಿ		ಜೇ
ರ್		ನ್ಮ		ರ್ಣ		ದ	ನ	ಕಾ	ಯೋ	ನು
		ಭೂ		ಯ		ರ್ಸ್				ಗೂ
ಸ	ಪ್ತ	ಮಿ					ತಾ	ಯಿ	ನಾ	ಡು

ವಿಜೇತರು: ಭಾರತಿ, ನಂ. 50, ವಿಎನ್‌ಎಸ್ ದೇವಸ್ಥಾನದ ರಸ್ತೆ, ಗುಂಡ್ಲುಪೇಟೆ ತಾಲೂಕು ಚಾಮರಾಜನಗರ ಜಿಲ್ಲೆ.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಜೇಮ್ಸ್‌ಬಾಂಡ್ ರಾಜನ ಪ್ರೇಮಗೀತೆ



ಫಸ್ಟ್‌ರ್‍ಯಾಂಕ್ ರಾಜು ಗುರುನಂದನ್ ಈಗ ಜೇಮ್ಸ್ ಬಾಂಡ್ ಅವತಾರವೆತ್ತಿದ್ದಾರೆ. ರಾಜು ಜೇಮ್ಸ್‌ಬಾಂಡ್ ಚಿತ್ರದಲ್ಲಿ ಅವರು ಬಾಂಡ್ ಶೈಲಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ದೀಪಕ್ ಮಧುವನಹಳ್ಳಿ ನಿರ್ದೇಶನದ ಈ ಚಿತ್ರವನ್ನು ಮಂಜುನಾಥ್ ವಿಶ್ವಕರ್ಮ ಹಾಗೂ ಕಿರಣ್ ಭರ್ತೂರು ನಿರ್ಮಿಸಿದ್ದಾರೆ. ಫೆ.14ರಂದು ತೆರೆಗೆ ಬರುತ್ತಿರುವ ಈ ಚಿತ್ರದ 'ಕಣ್ಮನಿ...' ಎಂಬ ಹಾಡು ಇತ್ತೀಚೆಗೆ ಬಿಡುಗಡೆಯಾಯಿತು. ಈ ಪ್ರೇಮಗೀತೆಗೆ ಸಂಚಿತ್ ಹೆಗಡೆ ದನಿಯಾಗಿದ್ದು, ಅನೂಪ್ ಸೀಳಿನ್ ಸಂಗೀತ ನೀಡಿದ್ದಾರೆ. ಈಗಾಗಲೇ ರಿಲೀಸಾಗಿರೋ ಲವ್‌ಬ್ರೇಕಪ್ ಸಾಂಗ್ ಬೇಕಿತ್ತಾ ಬೇಕಿತ್ತಾ... ಸಾಕಷ್ಟು ಸೌಂಡ್ ಮಾಡುತ್ತಿದೆ.

ಈ ವೇಳೆ ನಿರ್ದೇಶಕ ದೀಪಕ್ ಮಾತನಾಡುತ್ತ, ಮೊದಲು ನಾವು ಲವ್ ಫೇಲ್ಯೂರ್ ಸಾಂಗ್ ಬಿಟ್ಟಿದ್ದೆವು. ತುಂಬಾ ಚೆನ್ನಾಗಿ ಹೋಯ್ತು. ಈಗಿನದು ಲವ್ ಸಾಂಗ್, ಇದನ್ನು ಲಂಡನ್‌ನಲ್ಲಿ ಶೂಟ್ ಮಾಡಿದ್ದೇವೆ. ಟಿಪಿಕಲ್ ಸ್ಟೋರಿಲೈನ್ ಇರೋ ಈ ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು ಅನೂಪ್ ಅವರೇ ಮ್ಯೂಸಿಕ್ ಮಾಡಿದ್ದಾರೆ ಎಂದರು. ಗುರುನಂದನ್ ಮಾತನಾಡಿ, ಪ್ರೇಮಿಗಳ ದಿನದ ಕೊಡುಗೆಯಾಗಿ ನಮ್ಮ ಚಿತ್ರ ಕನ್ನಡ ಹಾಗೂ ತೆಲುಗಿನಲ್ಲಿ ಏಕಕಾಲಕ್ಕೆ ರಿಲೀಸಾಗಲಿದೆ ಎಂದರು. ನಂತರ ಮಾತನಾಡಿದ ನಿರ್ಮಾಪಕ ಕಿರಣ್ ಭರ್ತೂರು, ಈ ಹಾಡನ್ನು ಚಿಕ್ಕಮಗಳೂರಲ್ಲಿ ಚಿತ್ರೀಕರಿಸಬೇಕಿತ್ತು, ಆದ್ರೆ ಗೆಳೆಯ ಮಂಜುನಾಥ್ ವಿದೇಶದಲ್ಲಿ ಶೂಟ್ ಮಾಡಿಸಿದರು. ಇದೊಂದು ಯುನಿವರ್ಸಲ್ ಕಾಮಿಡಿ ಸಬ್ಜೆಕ್ಟ್, ಈ ಹಿಂದೆಯೇ ರೆಡಿಯಾಗಿದ್ದರೂ, ಕೊರೊನಾದಿಂದ ಬಿಡುಗಡೆ ಲೇಟಾಯ್ತು ಎಂದು ಹೇಳಿದರು. ಮತ್ತೋರ್ವ ನಿರ್ಮಾಪಕ ಮಂಜುನಾಥ ವಿಶ್ವಕರ್ಮ, ನಾಯಕಿ ಮೃದುಲ ತನ್ನ ಪಾತ್ರದ ಕುರಿತು ಹೇಳಿಕೊಂಡರು.

ವಿತರಕ ಸತ್ಯಪ್ರಕಾಶ್ ಮಾತನಾಡಿ, ದೀಪಕ್ ಹಾಗೂ ನಾನು ಮೊದಲಿನಿಂದ ಗೆಳೆಯರು. ಇಂದಿನ ದಿನಗಳಲ್ಲಿ ಸಿನಿಮಾ ಮಾಡೋದು ಮುಖ್ಯವಲ್ಲ, ಅದನ್ನು ಬ್ಯುಸಿನೆಸ್ ಮಾಡೋದೇ ದೊಡ್ಡ ಚಾಲೆಂಜ್. ಹಾಗಾಗಿ ವಿತರಣೆ ಬಗ್ಗೆ ತಿಳಿದುಕೊಂಡು ಹಲವು ಸಿನಿಮಾಗಳನ್ನು ರಿಲೀಸ್ ಮಾಡಿದ್ದೇನೆ. ಕರ್ನಾಟಕದಲ್ಲಿ ಈ ಚಿತ್ರದ ವಿತರಣೆಯ ಜವಾಬ್ದಾರಿ ಹೊತ್ತುಕೊಂಡಿದ್ದೇವೆ ಎಂದು ಹೇಳಿದರು.

2028ಕ್ಕೆ ಜೆಡಿಎಸ್-ಬಿಜೆಪಿ ಮೈತ್ರಿಕೂಟಕ್ಕೆ ಅಧಿಕಾರ

ಮತ್ತೊಮ್ಮೆ ಹೆಚ್‌ಡಿಕೆ ಸಿಎಂ ಆಗುವುದನ್ನು ತಪ್ಪಿಸಲು ಸಾಧ್ಯವಿಲ್ಲ: ಮಾಜಿ ಸಚಿವ ಸಾ.ರಾ.ಮಹೇಶ್

ಕೆ.ಆರ್.ನಗರ, ಜ.16– ಮುಂಬರುವ 2028ರಲ್ಲಿ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಏರಲಿದ್ದು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮತ್ತೊಮ್ಮೆ ರಾಜ್ಯದ ಮುಖ್ಯಮಂತ್ರಿಯಾಗುವುದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ವಿಶ್ವಾಸ ವ್ಯಕ್ತಪಡಿಸಿದರು.



ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರ ಸಭೆಯಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿದರು.

ಪಟ್ಟಣದ ಹೆಚ್.ಡಿ.ದೇವೇಗೌಡ ಸಮುದಾಯ ಭವನದ ಆವರಣದಲ್ಲಿ ನಡೆದ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ನಮಗೂ ಎಲ್ಲಾ ವರಸೆ ರಾಜಕಾರಣ ಮಾಡಲು ಬರುತ್ತದೆ. ಹೀಗಾಗಿ ಪ್ರತಿಯೊಂದನ್ನು ಗಮನಿಸುತ್ತಿದ್ದು, ಸಮಯ ಬಂದಾಗ ತಕ್ಕ ಉತ್ತರ ನೀಡುತ್ತೇವೆ ಎಂದರು.

ಕ್ಷೇತ್ರದ ಅಭಿವೃದ್ಧಿ ಹಿತದೃಷ್ಟಿಯಿಂದ ನಾನು ನಮ್ಮ ನಾಯಕರಾದ ಕುಮಾರಸ್ವಾಮಿಯವರ ಮೂಲಕ ಕೆಲಸ ಮಾಡಲು ನಿರ್ಧರಿಸಿದ್ದು, ಇದರ ಮೊದಲ ಭಾಗವಾಗಿ ಪಟ್ಟಣದ ಹೊರವಲಯದ ಹಳೇ ರೈಲ್ವೆ ನಿಲ್ದಾಣದ ಬಳಿ ಖಾಲಿ ಇರುವ 22 ಎಕರೆ ಜಾಗದಲ್ಲಿ ರೈಲ್ವೆ ರಕ್ಷಣಾ ದಳದ(ಆರ್‌ಪಿಎಫ್) ತರಬೇತಿ ಕೇಂದ್ರ ಆರಂಭಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಶೀಘ್ರ ಮಂಜೂರಾಗಲಿದ್ದು 500 ಕೋಟಿ ವೆಚ್ಚದ ಈ ಯೋಜನೆಯಿಂದ ಎರಡೂ ತಾಲೂಕಿನ ಜನತೆಗೆ ಅನುಕೂಲವಾಗಲಿದೆ ಎಂದು ನುಡಿದರು.

ಅರ್ಕೇಶ್ವರ ದೇವಾಲಯದಿಂದ ಹೆಬ್ಬಾಳು, ಚುಂಚನಕಟ್ಟೆ, ಹೊಸೂರು, ಹನಸೋಗೆ, ಕರ್ತಾಳು ಮೂಲಕ ಕೇರಳಾಪುರ ಮತ್ತು ಮಂಚನಹಳ್ಳಿಯಿಂದ ಮಿರ್ಲೆ, ಅಂಕನಹಳ್ಳಿ, ಸಾಲಿಗ್ರಾಮ ಸಂಪರ್ಕ ರಸ್ತೆಗಳನ್ನು ಚತುಷ್ಪಥ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಿ ಅನುದಾನ ನೀಡುವಂತೆ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಕೋರಲಾಗಿದ್ದು, ಇದಕ್ಕೆ ಅವರು ಪೂರಕವಾಗಿ ಸ್ಪಂದಿಸಿದ್ದಾರೆ ಎಂದರು.

ಪಕ್ಷ ನಿಷ್ಠೆ ಮತ್ತು ಪ್ರಾಮಾಣಿಕತೆ ಇಲ್ಲದೆ 2 ಕಡೆ ಆಟವಾಡುವ ಸ್ವಾರ್ಥಿಗಳಿಗೆ ಜೆಡಿಎಸ್‌ನಲ್ಲಿ ಜಾಗವಿಲ್ಲ. ಪಕ್ಷದಿಂದ ಎಲ್ಲವನ್ನು ಅನುಭವಿಸಿ ಆನಂತರ ಕತ್ತು ಕೊಯ್ಯುವ ಚಾಳಿ ಬೆಳೆಸಿಕೊಂಡವರು ಧಾರಾಳವಾಗಿ ಹೊರ ಹೋಗಬಹುದು ಎಂದರು. ಶಿಕ್ಷಕನ ಮಗನಾದ ನಾನು 36ನೇ ವಯಸ್ಸಿಗೆ ರಾಜಕಾರಣಕ್ಕೆ ಬಂದು ಮೂರು ಬಾರಿ ಶಾಸಕನಾಗಿ ಒಮ್ಮೆ ಸಚಿವನೂ ಆಗಿದ್ದೇನೆ. ಹಾಗಾಗಿ ನನಗೆ ರಾಜಕೀಯದಿಂದ ಆಗಬೇಕಾದದ್ದು ಏನು ಇಲ್ಲ. ಈಗ ನನ್ನ ಆದ್ಯತೆ ಪಕ್ಷ ನಿಷ್ಠರು ಮತ್ತು ನನ್ನನ್ನು ನಂಬಿರುವವರನ್ನು ಕಾಪಾಡುವುದು ಎಂದರು.

ಪಕ್ಷದ ಇಬ್ಬರು ಮಹಾನೀಯರು ಕಳೆದ ಚುನಾವಣೆಯಲ್ಲಿ ಪಿಎಲ್‌ಡಿ ಬ್ಯಾಂಕ್ ಮತ್ತು ಎಪಿಎಂಸಿ ಆಡಳಿತ ಜೆಡಿಎಸ್ ತೆಕ್ಕೆಗೆ ಬರುವುದನ್ನು ತಪ್ಪಿಸಿದರು. ಹಾಗಾಗಿ ಅಂತಹ ಅವಕಾಶವಾದಿಗಳು ಮುಂದೆ ಯಾವುದೇ ಚುನಾವಣೆಗಳಲ್ಲಿಯೂ ಗೆಲ್ಲದಂತೆ ನಮ್ಮ ಕಾರ್ಯಕರ್ತರು ನೋಡಿಕೊಳ್ಳಬೇಕು ಎಂದು ಪರೋಕ್ಷವಾಗಿ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಂ.ಎಸ್. ಹರಿಚಿದಂಬರ ಮತ್ತು ಎಪಿಎಂಸಿ ಮಾಜಿ ಅಧ್ಯಕ್ಷ ಕುಪ್ಪಳ್ಳಿ ಸೋಮು ವಿರುದ್ಧ ಹರಿಹಾಯ್ದರು.

ಜಿಪಂ ಮಾಜಿ ಉಪಾಧ್ಯಕ್ಷ ಎ.ಎಸ್. ಚನ್ನಬಸಪ್ಪ, ಮಾಜಿ ಸದಸ್ಯರಾದ ಅಮಿತ್.ವಿ.ದೇವರಹಟ್ಟಿ, ಎಂ.ಟಿ. ಕುಮಾರ್, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್. ಬಸಂತ್, ಪುರಸಭೆ ಮಾಜಿ ಅಧ್ಯಕ್ಷ ಡಿ.ಕಾಂತ ರಾಜು, ಸದಸ್ಯರಾದ ಉಮೇಶ್, ಸಂತೋಷ್ ಗೌಡ, ಮಾಜಿ ಸದಸ್ಯರಾದ ಕೆ.ಬಿ.ಸುಬ್ರಹ್ಮಣ್ಯ, ಕೆ.ಆರ್. ಗಿರೀಶ್, ಹೆಚ್.ಸಿ.ರಾಜು, ರಾಜ್ಯ ಜೆಡಿಎಸ್ ಕಾರ್ಯದರ್ಶಿ ಚಂದ್ರಶೇಖರ್, ಜಿಲ್ಲಾ ಜೆಡಿಎಸ್ ಅಧ್ಯಕ್ಷೆ ದಾಕ್ಷಾಯಿಣಿ, ಸಾಲಿಗ್ರಾಮ ತಾಲೂಕು ಅಧ್ಯಕ್ಷ ರಾಜಣ್ಣ, ಹೊಸೂರು ಪಿಎಸಿಎಸ್ ಅಧ್ಯಕ್ಷ ಕಿಟ್ಟಿ, ತಾಪಂ ಮಾಜಿ ಸದಸ್ಯರಾದ ಶ್ರೀನಿವಾಸ್‌ಪ್ರಸಾದ್, ನಾಗಣ್ಣ, ರವಿ, ರತ್ನಮ್ಮ, ತಾಲೂಕು ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಎಂ.ಟಿ.ಅಣ್ಣೇ ಗೌಡ ಮುಖಂಡರಾದ ಹೆಚ್.ಕೆ.ಮಧು ಚಂದ್ರ, ನಾಗರಾಜು, ಹೆಚ್.ಎಸ್.ಜಗದೀಶ್, ಎಂ.ಎಸ್.ಕಿಶೋರ್, ಕುಚೇಲ, ಬಾಲಾಜಿ ಗಣೇಶ್, ಎ.ಕುಚೇಲ ಮತ್ತಿತರರಿದ್ದರು.

ಹೆಚ್.ಡಿ. ಕುಮಾರಸ್ವಾಮಿ ಸ್ವಾಗತಕ್ಕೆ ಸಕಲ ಸಿದ್ಧತೆ

ಕೆ.ಆರ್.ನಗರ: ಇದೇ 24ರಂದು ಪಟ್ಟಣಕ್ಕೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆಗಮಿಸಲಿದ್ದು ಅವರನ್ನು ಅದ್ದೂರಿಯಾಗಿ ಸ್ವಾಗತಿಸಲು ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಹೇಳಿದರು.

ಪಟ್ಟಣದಲ್ಲಿ ನಡೆದ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು ಅಂದು ಬೆಳಗ್ಗೆ 10 ಗಂಟೆಗೆ ಪಟ್ಟಣದ ಹೊರವಲಯದಲ್ಲಿರುವ ತೋಪಮ್ಮನವರ ದೇವಾಲಯದ ಬಳಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಯದುವೀರ್, ಯುವ ಜೆಡಿಎಸ್ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹಾಗೂ ಇತರ ನಾಯಕರನ್ನು ವಿವಿಧ ಕಲಾ ತಂಡಗಳು, ಪಕ್ಷದ ಮುಖಂಡರು, ಕಾರ್ಯಕರ್ತರ ಸಮ್ಮುಖದಲ್ಲಿ ಬರಮಾಡಿಕೊಳ್ಳಲಾಗುತ್ತದೆ ಎಂದರು.

11 ಗಂಟೆಗೆ ಪುರಸಭೆ ಬಯಲು ರಂಗಮಂದಿರದಲ್ಲಿ ಮತದಾರರಿಗೆ ಕೃತಜ್ಞತೆ ಸಮಾರಂಭ ನಡೆಯಲಿದ್ದು, ನಂತರ ಸಚಿವರನ್ನು ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕು ಜೆಡಿಎಸ್ ವತಿಯಿಂದ ಹಾಗೂ ಅವರ ಅಭಿಮಾನಿಗಳ ಪರವಾಗಿ ಸನ್ಮಾನಿಸಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ 30 ಸಾವಿರಕ್ಕೂ ಅಧಿಕ ಕಾರ್ಯಕರ್ತರು ಮತ್ತು ಅಭಿಮಾನಿಗಳು ಭಾಗವಹಿಸಲಿದ್ದು, ಕಾರ್ಯಕ್ರಮದ ನಂತರ ಎಲ್ಲರಿಗೂ ಕೃಷ್ಣರಾಜೇಂದ್ರ ಕ್ರೀಡಾಂಗಣದಲ್ಲಿ ಮಾಂಸದೂಟ, ಜೊತೆಗೆ ಸಸ್ಯಹಾರಿ ಊಟವೂ ಇರಲಿದ್ದು ಎಲ್ಲರನ್ನು ಕರೆತರಲು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಬೇಕು ಎಂದರು. ಗ್ರಾಮೀಣ ಭಾಗದಿಂದ ಆಗಮಿಸುವವರಿಗೆ ವಾಹನದ ವ್ಯವಸ್ಥೆ ಮಾಡಲಾಗಿದ್ದು, ಈ ಸಂಬಂಧ 2 ದಿನಗಳೊಳಗೆ ಪಕ್ಷದ ಮುಖಂಡರು ನನಗೆ ಸೂಕ್ತ ವರದಿ ನೀಡಿ ಯಾವ ಗ್ರಾಮಗಳಿಂದ ಎಷ್ಟು ಮಂದಿ ಬರಲಿದ್ದಾರೆ ಮತ್ತು ವಾಹನಗಳ ವ್ಯವಸ್ಥೆ ಹೇಗಿರಬೇಕು ಎಂದು ಪಟ್ಟಿ ನೀಡಬೇಕು ಎಂದು ಸೂಚನೆ ನೀಡಿದರು.

ತಿ.ನರಸೀಪುರದಲ್ಲಿ ಸಂಭ್ರಮದ ಸಂಕ್ರಾಂತಿ



ಸಂಕ್ರಾಂತಿ ಹಬ್ಬದ ಅಂಗವಾಗಿ ಜಾನುವಾರುಗಳ ಮೆರವಣಿಗೆ ನಡೆಯಿತು.

ತಿ.ನರಸಿಪುರ, ಜ.16– ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಸಂಭ್ರಮ ಸಡಗರದಿಂದ ಸಂಕ್ರಾಂತಿ ಹಬ್ಬ ಆಚರಿಸಲಾಯಿತು.

ಮಕರ ಸಂಕ್ರಮಣದ ಅಂಗವಾಗಿ ದೇವಾಲಯಗಳಲ್ಲಿ ಬೆಳಗ್ಗೆಯಿಂದಲೇ ದೇವರಿಗೆ ಅಲಂಕಾರ, ಅಭಿಷೇಕ ಮತ್ತಿತರ ಸಾಂಪ್ರದಾಯಿಕ ಪೂಜೆ ಹಮ್ಮಿಕೊಳ್ಳಲಾಗಿತ್ತು. ಇತ್ತ ಮನೆಗಳಲ್ಲಿ ಗೋವಿಗೆ ಪೂಜೆ ಸಲ್ಲಿಸಿ, ಸಿಹಿ ಪೊಂಗಲ್ ನೀಡಲಾಯಿತು. ರೈತರು ಜಾನುವಾರುಗಳ ಕೊಂಬುಗಳಿಗೆ ಬಣ್ಣ ಹಚ್ಚಿ ಹೂಗಳಿಂದ ಸಿಂಗರಿಸಿ, ಅವುಗಳ ಮೈ ಮೇಲೆ ಅರಿಶಿನ ಹಚ್ಚಿ ಸಿಂಗರಿಸಿದ್ದರು. ಪಟ್ಟಣದ ಖಾಸಗಿ ಬಸ್ ನಿಲ್ದಾಣ ವೃತ್ತ ಬಳಿಯ ಲಿಂಕ್ ರಸ್ತೆಯಲ್ಲಿ ರೈತರು ಹುಲ್ಲಿಗೆ ಬೆಂಕಿ ಹಚ್ಚಿ ರಾಸುಗಳನ್ನು ಕಿಚ್ಚಾಯಿಸಿ ಮೆರವಣಿಗೆ ನಡೆಸಿದರು. ಇದೇ ವೇಳೆ ಹಸುಗಳು, ಕರುಗಳು ಹಾಗೂ ಮೇಕೆ– ಕುರಿಗಳು ಬೆಂಕಿ ಕೆನ್ನಾಲಿಗೆಯನ್ನು ಹಾದು ಹೋದವು. ರಾಸುಗಳ ಕಿಚ್ಚಾಯಿಸುವುದನ್ನು ವೀಕ್ಷಿಸಲು ಖಾಸಗಿ ಬಸ್ ನಿಲ್ದಾಣ ಹಾಗೂ ಲಿಂಕ್ ರಸ್ತೆ ಇಕ್ಕೆಲಗಳಲ್ಲಿ ಜನ ಸಂದಣಿ ತುಂಬಿತ್ತು.

ವ್ಹಿಪ್ ಉಲ್ಲಂಘನೆ: ಸದಸ್ಯತ್ವ ಅನರ್ಹ

ಹುಣಸೂರು, ಜ.16– ಇಲ್ಲಿನ ನಗರಸಭೆ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ವ್ಹಿಪ್ ಉಲ್ಲಂಘಿಸಿದ ಕಾರಣ ಕರ್ನಾಟಕ ಸ್ಥಳೀಯ ಪ್ರಾಧಿಕಾರದ ಪಕ್ಷಾಂತರ ನಿಷೇಧ ಅಧಿನಿಯಮದಡಿ ನಗರದ



6ನೇ ವಾರ್ಡ್ ಸದಸ್ಯ ದೇವನಾಯಕ ಅವರನ್ನು ಸದಸ್ಯತ್ವದಿಂದ ಅನರ್ಹಗೊಳಿಸಿ ಜಿಲ್ಲಾಧಿಕಾರಿಗಳ ನ್ಯಾಯಾಲಯ ಆದೇಶಿಸಿದೆ.

2024ರ ಸೆ.9ರಂದು ನಗರಸಭೆ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಗೆ ಗೈರಾಗಿ ವ್ಹಿಪ್ ಉಲ್ಲಂಘಿಸಿರುವ ಸಂಬಂಧ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಹಾಗೂ ನಗರಸಭಾ ಸದಸ್ಯ ಸ್ವಾಮಿಗೌಡ ಅವರು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪಕ್ಷಾಂತರ ನಿಷೇಧ ಕಾಯ್ದೆಯಡಿ ದೇವನಾಯಕರ ಸದಸ್ಯತ್ವ ರದ್ದುಪಡಿಸುವಂತೆ ದೂರು ದಾಖಲಿಸಿದ್ದರು. ಈ ಸಂಬಂಧ ವಿಚಾರಣೆ ನಡೆಸಿದ ನ್ಯಾಯಾಲಯ ವ್ಹಿಪ್ ಉಲ್ಲಂಘಿಸಿ, ಚುನಾವಣೆಗೆ ಗೈರಾಗಿರುವುದು ಸಾಬೀತಾದ ಕಾರಣ ಜಿಲ್ಲಾಧಿಕಾರಿ ಡಾ. ಲಕ್ಷ್ಮಿಕಾಂತರೆಡ್ಡಿ ಅವರು ಜ.9ರಂದು ದೇವನಾಯಕ ಸದಸ್ಯತ್ವ ಅನರ್ಹಗೊಳಿಸಿ ಆದೇಶ ಹೊರಡಿಸಿದ್ದಾರೆ.

ಹಸಿರು ನಮ್ಮ ಉಸಿರು

ಕೇಂದ್ರ ಸಚಿವ ಅಮಿತ್ ಶಾ ವಿರುದ್ಧ ಪ್ರತಿಭಟನೆ

ಹೆಚ್.ಡಿ.ಕೋಟೆ, ಜ.16– ಡಾ.ಬಿ.ಆರ್. ಅಂಬೇಡ್ಕರ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸಂಸದ ಸ್ಥಾನದಿಂದ ವಜಾಗೊಳಿಸಿ, ದೇಶದ್ರೋಹ ಕಾಯ್ದೆಯಡಿ ಬಂಧಿಸುವಂತೆ ಆಗ್ರಹಿಸಿ ಗುರುವಾರ ದಿ.ಎಸ್.ಚಿಕ್ಕಮಾದು ಅಭಿಮಾನಿ ಬಳಗದಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.



ಕೇಂದ್ರ ಸಚಿವ ಅಮಿತ್ ಶಾ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಮಿನಿವಿಧಾನಸೌಧದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ಅಮಿತ್ ಶಾ ಅವರು ಚಳಿಗಾಲದ ಅಧಿವೇಶನದಲ್ಲಿ ಅಂಬೇಡ್ಕರ್ ಅವರನ್ನು ಸ್ಮರಿಸುವ ಬದಲು ದೇವರನ್ನು ಸ್ಮರಿಸಿದರೆ 7 ಜನ್ಮಗಳ ಸ್ವರ್ಗಕ್ಕೆ ಹೋಗುತ್ತಿದ್ದೀರಿ ಎಂದು ಅಂಬೇಡ್ಕರ್ ಅವರನ್ನು ಅವಮಾನಿಸಿದ್ದಾರೆ ಎಂದು ದೂರಿದರು.

ಚಿಕ್ಕಮಾದು ಅಭಿಮಾನಿ ಬಳಗದ ಅಧ್ಯಕ್ಷ ಜಿನ್ನಹಳ್ಳಿ ರಾಜನಾಯಕ ಮಾತನಾಡಿ, ಸಂವಿಧಾನ ಸುಡುವ ಹಾಗೂ ಸಂವಿಧಾನ ಬದಲಿಸುವ ಹೇಳಿಕೆ ನೀಡುತ್ತಾ, ಅಲ್ಪಸಂಖ್ಯಾತರು ಮತ್ತು ಶೋಷಿತ ಸಮುದಾಯಗಳ ವಿರುದ್ಧ ದೇಶಭಕ್ತಿ ಸೃಷ್ಟಿಸಿ, ಕೋಮುವಾದ ಬಲದಿಂದ ರಾಜಕೀಯ ಮಾಡುತ್ತಾ ಅಧಿಕಾರಕ್ಕೆ ಬಂದಿರುವ ಬಿಜೆಪಿ ಮತ್ತು ಆರ್‌ಎಸ್‌ಎಸ್, ಸಂಘ ಪರಿವಾರದ ಮುಖ್ಯಸ್ಥರಾಗಿರುವ ಅಮಿತ್ ಶಾ ಅವರು ಈ ಹಿಂದೆ ಗುಜರಾತ್‌ನಲ್ಲಿ ಕೋಮು ಸೌಹಾರ್ದತೆಗೆ ಬೆಂಕಿ ಇಟ್ಟಿದ್ದರು. ನ್ಯಾಯಾಧೀಶರ ಕೊಲೆ ಪ್ರಕರಣದಲ್ಲಿ ಅಪರಾಧಿಯಾಗಿ ಗಡಿ ಪಾರಾಗಿದ್ದರು. ಸಂಸದರಾಗಲು ಅರ್ಹತೆ ಇಲ್ಲದೆ ಜೈಲಿನಲ್ಲಿ ಇರಬೇಕಿದ್ದ ಇವರು ಇಂದು ದೇಶದ ಅತ್ಯುನ್ನತ ಸಾಂವಿಧಾನಿಕ ಹುದ್ದೆ ಕಾನೂನು ವ್ಯವಸ್ಥೆ ಕಾಪಾಡುವ ಗೃಹ ಮಂತ್ರಿಯಾಗಿ ಅಸಮಾನತೆಯ ಮನಸ್ಮೃತಿ ಜಾರಿಗೆ ತರಲು ತಮ್ಮ ಹಿಂದಿನ ಕ್ರಿಮಿನಲ್ ಚಟುವಟಿಕೆಗಳನ್ನು ಮುಂದುವರಿಸುತ್ತಿದ್ದಾರೆ. ಇಂತಹವರ ಬೆಂಬಲಕ್ಕೆ ಪ್ರಧಾನಿ ಮೋದಿ ಮತ್ತು ಬಿಜೆಪಿ ನಿಂತಿರುವುದನ್ನು ಸಂಘಟನೆ ತೀವ್ರ ಖಂಡಿಸುತ್ತದೆ. ಕೂಡಲೇ ರಾಷ್ಟ್ರಪತಿಗಳು ಅಮಿತಾ ಶಾ ವಿರುದ್ಧ ಕ್ರಮ ಜರುಗಿಸದಿದ್ದರೆ ದೇಶಾದ್ಯಂತ ಚಳವಳಿ ಆರಂಭಿಸಲಾಗುವುದು ಎಂದು ಎಚ್ಚರಿಸಿದರು. ನಂತರ ತಹಸೀಲ್ದಾರ್ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಸಿಂಡಿಕೇಟ್ ಸದಸ್ಯ ನಾಗರಾಜು, ಹೆಚ್.ಸಿ.ನರಸಿಂಹಮೂರ್ತಿ, ಶಿವಪ್ಪ ಕೋಟೆ, ಮಹೇಶ್ ನಾಯಕ, ಮರಿದೇವಯ್ಯ, ದಾಸನಾಯಕ, ಜೀವಿಕ ಬಸವರಾಜ್, ಮಣಿ, ಗಣೇಶ್ ಆಚಾರ್, ಮುಜಾಹಿದ್, ಕುಮಾರ್, ಸಿದ್ದನಾಯಕ, ದೇವನಾಯಕ, ಜಯಪ್ಪ, ಸೋಮಣ್ಣ, ಬೆಟ್ಟನಾಯಕ, ಈರನಾಯಕ, ಭೈರನಾಯಕ, ಸೋಮೇಶ್, ಚಿಕ್ಕಣ್ಣ ನಾಯಕ, ಶಿವಲಿಂಗನಾಯಕ, ಮರಿಸ್ವಾಮಿ ನಾಯಕ, ಸೋಮಣ್ಣ, ನಾಗನಾಯಕ, ತಿಮ್ಮನಾಯಕ, ಚಿಕ್ಕಣ್ಣ, ಚೇತನ್, ವೀರನಾಯಕ, ಅಂಕನಾಯಕ, ಲಿಂಗನಾಯಕ, ನಾಗರಾಜು, ರವಿ, ಉಮೇಶ್, ಗೋವಿಂದನಾಯಕ, ಬಸವನಾಯಕ, ಜವರನಾಯಕ, ಮಂಜು, ಕುಮಾರ್, ಪ್ರಕಾಶ್, ರಘು ಇದ್ದರು.

ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ: ಯುವಕ ಸಾವು

ನಂಜನಗೂಡು, ಜ.16– ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಯುವಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಗುರುವಾರ ಸಂಜೆ ನಗರದ ಚಾಮರಾಜನಗರ ಬೈಪಾಸ್ ರಸ್ತೆಯಲ್ಲಿ ನಡೆದಿದೆ.



ನಗರದ ಅಶೋಕಪುರಂ ನಿವಾಸಿ ಸೋಮಣ್ಣ ಅವರ ಪುತ್ರ ಮನೋಜ್ (19) ಸಾವನ್ನಪ್ಪಿದವರು. ಈತ ತನ್ನ ಬೈಕ್‌ನಲ್ಲಿ ಶ್ರೀಕಂಠೇಶ್ವರ ದೇವಾಲಯದಿಂದ ಮನೆ ಕಡೆಗೆ ತೆರಳುತ್ತಿದ್ದ ವೇಳೆ ಚಾಮರಾಜನಗರ ಕಡೆಯಿಂದ ಬಂದ ಕೆಎಸ್‌ಆರ್‌ಟಿಸಿ ಬಸ್ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಮನೋಜ್ ಸ್ಥಳದಲ್ಲೇ ಸಾವನಪ್ಪಿದ್ದಾನೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಂಚಾರಿ ಪೊಲೀಸ್ ಠಾಣೆ ಎಸ್‌ಐ ಸಿದ್ದರಾಜು ಭೇಟಿ ನೀಡಿ ಪರಿಶೀಲಿಸಿ ಶವವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ

ವಿಜೃಂಭಣೆಯ ಚಿಗುರು ಕಡಿಯುವ ಕಾರ್ಯಕ್ರಮ







ಶ್ರೀತ್ರಿಪುರ ಸುಂದರಿ ಅಮ್ಮನವರ ಹೂವಿನ ಪಲ್ಲಕ್ಕಿ ಉತ್ಸವ

ಮೂಗೂರು, ಜ.16– ಶ್ರೀತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ಸಮೀಪದ ಹೊಸಹಳ್ಳಿ ಗ್ರಾಮದ ಅಮ್ಮನವರ ದೇಗುಲದಲ್ಲಿ ಚಿಗುರು ಕುಡಿಯುವ ಕಾರ್ಯಕ್ರಮ ಗುರುವಾರ ವಿಜೃಂಭಣೆಯಿಂದ ನಡೆಯಿತು.

ಮೂಗೂರಿನ ದೇವಾಲಯದಲ್ಲಿ ಮುಂಜಾನೆಯೇ ಅಮ್ಮನವರಿಗೆ ಅಭಿಷೇಕ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿತು. ಮಧ್ಯಾಹ್ನ 3.30ಕ್ಕೆ ಅಮ್ಮನವರ ಉತ್ಸವಮೂರ್ತಿಯನ್ನು ಹೂವಿನ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿದ ಬಳಿಕ ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿದ ನಂತರ ಹೂವಿನ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಲಾಯಿತು.

ಮಹಿಳೆಯರು ಬಾಯಿ ಬೀಗ, ದೀವಟಿಗೆ ಸೇವೆ ಹಾಗೂ ರೈತರು ಜಾನುವಾರುಗಳ ಆರೋಗ್ಯ ವೃದ್ಧಿಗಾಗಿ ಪ್ರಾರ್ಥಿಸಿ ದೇವಾಲಯದಿಂದ ಹೊಸಹಳ್ಳಿ ದೇವಾಲಯವರೆಗೆ ಪಂಜಿನ ಸೇವೆ ಸಲ್ಲಿಸಿದರು. ಅಮ್ಮನವರ ಉತ್ಸವ ಹೊಸಹಳ್ಳಿಗೆ ಆಗಮಿಸುತ್ತಿದ್ದಂತೆ ನೆರೆದಿದ್ದ ಸಾವಿರಾರು ಭಕ್ತರು ಜೈಕಾರ ಕೂಗಿ ಚಿಗುರು ವೀಕ್ಷಿಸಲು ದೇವಾಲಯದ ಸುತ್ತಲೂ ಜಮಾಯಿಸಿದರು. ಇದೇ ವೇಳೆ ಅರ್ಚಕರು ಸಂಜೆ 6.40ಕ್ಕೆ ನೇರಳೆ ಮರವೇರಿ ರಾತ್ರೋರಾತ್ರಿ ಮೂಡಿದ ಚಿಗುರನ್ನು ಬಿಡಿಸಿದರು. ಈ ಬಾರಿ 12 ಚಿಗುರು ಮೂಡಿದ್ದು ಜನತೆಯಲ್ಲಿ ಹರ್ಷ, ಗ್ರಾಮಕ್ಕೆ ಶುಭ ಎಂಬ ನಂಬಿಕೆ ಇದ್ದು, ಬಳಿಕ ಚಿಗುರನ್ನು ಬೆಳ್ಳಿ ತಟ್ಟೆಯ ಹೊಂಬಾಳೆಯಲಿಟ್ಟು ಪೂಜೆ ಸಲ್ಲಿಸಿ ಸಾವಿರಾರು ಭಕ್ತರ ದರ್ಶನ ಇಡಲಾಯಿತು. ನಂತರ ಚಿಗುರನ್ನು ಮೂಗೂರು ಶ್ರೀತ್ರಿಪುರ ಸುಂದರಿ ಅಮ್ಮನವರ ದೇವಾಲಯಕ್ಕೆ ತಂದು ಪೂಜೆ ಸಲ್ಲಿಸಲಾಯಿತು.

ಚಿಗುರಿನ ಹಿನ್ನೆಲೆ: ಮರಸವರುವ ಮನೆತನದ ಅರ್ಚಕರು ರಥೋತ್ಸವದ ಮಧ್ಯರಾತ್ರಿ ಹೊಸಹಳ್ಳಿಗೆ ತೆರಳಿ ದೇಗುಲದಲ್ಲಿರುವ ನೇರಳೆ ಮರಕ್ಕೆ ಪೂಜೆ ಸಲ್ಲಿಸಿ ಮರದ ಕೊಂಬೆ ಎಲೆಗಳನ್ನು ಬಿಡಿಸಿ ಅದಕ್ಕೆ ಧಾನ್ಯ ಸಮೇತ ಅರಿಶಿನದ ಬಟ್ಟೆ ಕಟ್ಟಿ ಬರುತ್ತಾರೆ ಮಾರನೇ ದಿನ ಅಮ್ಮನವರ ಹೂವಿನ ಪಲ್ಲಕ್ಕಿ ಉತ್ಸವ ಹೊಸಹಳ್ಳಿಗೆ ಹೋಗುವ ಮುನ್ನವೇ ಧಾನ್ಯ ಕಟ್ಟಿದ ರೆಂಬೆಯಲ್ಲಿ ಚಿಗುರು ಮೂಡಿರುತ್ತದೆ. ಇದು ಮೂಗೂರು ಚಿಗುರು ಎಂಬುದಾಗಿ ಪ್ರಸಿದ್ಧಿ ಪಡೆದಿದೆ. 9 ಅಥವಾ 12 ಚಿಗುರು ಬಂದರೆ ಶುಭ ಅಂತಲೂ 7 ಅಥವಾ 11 ಅಶುಭವೆಂದು ಇಂದಿಗೂ ಜನಜನಿತವಾಗಿದೆ

ನೂತನ ಕ್ಯಾಲೆಂಡರ್ ಬಿಡುಗಡೆ



ದಿನದರ್ಶಿಕೆಯನ್ನು ಸಂಸದ ಸುನೀಲ್ ಬೋಸ್ ಬಿಡುಗಡೆಗೊಳಿಸಿದರು.

ತಿ.ನರಸೀಪುರ, ಜ.16– ರಾಜ್ಯದ ಜನತೆ ಕಾಂಗ್ರೆಸ್ ಮೇಲೆ ನಂಬಿಕೆ ಇಟ್ಟು ಅಧಿಕಾರ ನೀಡಿರುವುದರಿಂದ ಕಾರ್ಯಕರ್ತರು ಚುನಾವಣೆ ಪೂರ್ವ ನೀಡಿದ್ದ 5 ಗ್ಯಾರಂಟಿಗಳನ್ನು ಜನರಿಗೆ ತಲುಪಿಸಬೇಕು ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ತಾಲೂಕಿನ ಮುಸುವಿನಕೊಪ್ಪಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ದಿನದರ್ಶಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಬಡವರ ಬದುಕನ್ನು ಹಸನಾಗಿಸುವ ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷೆಯ 5 ಗ್ಯಾರಂಟಿಗಳ ಬಗ್ಗೆ ವಿಪಕ್ಷಗಳು ಗೊಂದಲ ಸೃಷ್ಟಿಸಿದ್ದು, ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಜನರ ಸಂಪರ್ಕದಲ್ಲಿದ್ದುಕೊಂಡು ಯೋಜನೆಗಳು ಅವರಿಗೆ ತಲುಪುವಂತೆ ನೋಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಸಂಘದ ಅಧ್ಯಕ್ಷ ಎಂ.ಶಿವರಾಮು, ಉಪಾಧ್ಯಕ್ಷ ಕೆಬ್ಬೆಹುಂಡಿ ಮಹೇಶ್, ನಿರ್ದೇಶಕರಾದ ಪುಟ್ಟಮಾದಯ್ಯ, ಎಸ್.ಮಹೇಶ್, ಎಂ.ಆನಂದ್, ಶಿವಣ್ಣ ಚಿಕ್ಕಮಾದ ನಾಯಕ ಹಾಗೂ ಸಂಘದ ಕಾರ್ಯದರ್ಶಿ ಎನ್. ರಾಜು, ಗ್ರಾಮದ ಮುಖಂಡರು ಹಾಜರಿದ್ದರು.

ಹರಕೆ ಗೂಳಿ ಬಾಲ ಕತ್ತರಿಸಿದ ಪ್ರಕರಣ: ಆಕ್ರೋಶ



ಮಾಜಿ ಶಾಸಕ ಹರ್ಷವರ್ಧನ್ ಮಾತನಾಡಿದರು.

ನಂಜನಗೂಡು, ಜ.16– ಚಾಮರಾಜಪೇಟೆಯಲ್ಲಿ ಹಸುವಿನ ಕೆಚ್ಚಲು ಕುಯ್ದು ಘಟನೆ ಮಾಸುವ ಮುನ್ನವೇ ದುಷ್ಕರ್ಮಿಗಳು ನಂಜನಗೂಡಿನ ಹಳ್ಳದ ಕೇರಿ ಬಡಾವಣೆ ಬಳಿ ಗುರುವಾರ ಶ್ರೀ ನಂಜುಂಡೇಶ್ವರನಿಗೆ ಹರಕೆ ಬಿಟ್ಟಿದ್ದ ಗೂಳಿ ಬಾಲ ಕತ್ತರಿಸಿದ್ದು, ಮಾಜಿ ಶಾಸಕ ಬಿ. ಹರ್ಷವರ್ಧನ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿ ಪರಿಶೀಲಿಸಿ ಮಾತನಾಡಿದ ಅವರು, ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಹಸುವಿನ ಕೆಚ್ಚಲು ಕತ್ತರಿಸಿರುವ ಘಟನೆ ಹಸಿರಾಗಿರುವಾಗಲೇ ನಮ್ಮ ಕ್ಷೇತ್ರದಲ್ಲಿ ಇಂತಹ ಘಟನೆ ನಡೆದಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 2 ವರ್ಷಗಳಲ್ಲಿ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಘಟನೆಗಳು ಮರುಕಳಿಸುತ್ತಿವೆ. ದೇವಾಲಯದ ಆಡಳಿತ ಮಂಡಳಿ ಹರಕೆ ಬಿಟ್ಟ ಗೂಳಿಗಳ ದಾಖಲಾತಿ ನಿರ್ವಹಣೆ ಮಾಡುವ ಮೂಲಕ ಅವುಗಳ ಲೆಕ್ಕ ಇಡಬೇಕು. ಆದರೆ ದೇವಾಲಯದವರು ನಿರ್ವಹಣೆ ಮಾಡುತ್ತಿಲ್ಲ. ಜೊತೆಗೆ ನನ್ನ ಅವಧಿಯಲ್ಲಿ ಕೇರಳದ ಕಸಾಯಿ ಖಾನೆಗೆ ಹರಕೆ ಗೂಳಿ ಸಾಗಿಸುವ ಪ್ರಕರಣ ಬೆಳಕಿಗೆ ಬಂದಿತ್ತು. ನಾನು ಕಟ್ಟುನಿಟ್ಟಿನ ಆದೇಶ ಹೊರಡಿಸಿ ಅದನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದ್ದೆ. ಹರಕೆ ಗೂಳಿಗಳ ರಕ್ಷಣೆಗಾಗಿ ಬಿಜೆಪಿ ಅಧಿಕಾರದಲ್ಲಿ ನಂಜನಗೂಡಿನಲ್ಲಿ ಗೋಶಾಲೆ ತೆರೆಯಲು ಜಾಗ ಸಹ ಗುರುತಿಸಿ 2 ಎಕರೆ ಜಮೀನು ಹಾಗೂ ಅನುದಾನ ನೀಡಲಾಗಿತ್ತು. ಆದರೂ ಗೋ ಶಾಲೆ ನಿರ್ಮಿಸಿಲ್ಲ. ಮುಂದಿನ ದಿನಗಳಲ್ಲಿ ಭಕ್ತರ ನಂಬಿಕೆಗಳನ್ನು ಘಾಸಿಗೊಳಿಸುವ ಘಟನೆಗಳು ನಡೆಯದಂತೆ ಅಧಿಕಾರಿಗಳು ಕ್ರಮವಹಿಸಬೇಕು. ದುಷ್ಕರ್ಮಿಗಳನ್ನು ಬಂಧಿಸಬೇಕು ಎಂದರು.

ಇದೇ ವೇಳೆ ಸ್ಥಳಕ್ಕಾಗಮಿಸಿದ ದೇವಾಲಯದ ಇಓ ಜಗದೀಶ್ ಅವರನ್ನು ಹರಕೆ ಗೂಳಿಗಳ ಬಗ್ಗೆ ದಾಖಲಾತಿ ನಿರ್ವಹಣೆ ಮಾಡಿದ್ದೀರಾ? ಗೂಳಿಗಳ ಮೇಲೆ ಸೀಲ್ ಒತ್ತಿದ್ದೀರಾ? ದೇವಾಲಯದ ಹರಕೆ ಗೂಳಿ ಎಂದು ಗುರುತು ಹಿಡಿಯುವುದಾದರೂ ಹೇಗೆ? ಎಂದು ತರಾಟೆ ತೆಗೆದುಕೊಂಡರು.

ದೇವಾಲಯದ ಇಓ ಜಗದೀಶ್ ಮಾತನಾಡಿ, ಭಕ್ತರು ದೇವಾಲಯದ ಕಚೇರಿಗೆ ಬಂದು ಗೂಳಿ ಬಿಡುವ ಬಗ್ಗೆ ತಿಳಿಸುವುದಿಲ್ಲ. ಬದಲಾಗಿ ಅವರೇ ಪೂಜೆ ಸಲ್ಲಿಸಿ ಹರಕೆ ಗೂಳಿ ಬಿಡುವುದರಿಂದ ದಾಖಲಾತಿ ನಿರ್ವಹಣೆ ಮಾಡಲು ಸಾಧ್ಯವಾಗಿಲ್ಲ ಎಂದರು.

ದೇವಾಲಯದ ಆವರಣದಲ್ಲಿ ಸೂಚನಾ ಫಲಕ ಅಳವಡಿಸಿ ಹರಕೆ ಗೂಳಿ ಸಲ್ಲಿಸುವ ಬಗ್ಗೆ ಕಚೇರಿಯಲ್ಲಿ ನೋಂದಾಯಿಸುವಂತೆ ತಿಳುವಳಿಕೆ ಮೂಡಿಸಿ ಜೊತೆಗೆ ಗೋ ಶಾಲೆ ತೆರೆಯಲು ಕ್ರಮವಹಿಸಿ ಎಂದು ಒತ್ತಾಯಿಸಿದರು.

ಈ ಸಂದರ್ಭ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಬಿಜೆಪಿ ನಗರಾಧ್ಯಕ್ಷ ಸಿದ್ದರಾಜು, ನಗರಸಭಾ ಸದಸ್ಯರಾದ ಕಪಿಲೇಶ್, ಮಹದೇವ ಪ್ರಸಾದ್, ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ಮುಖಂಡರಾದ ಶ್ರೀನಿವಾಸರೆಡ್ಡಿ, ಪುಟ್ಟಸ್ವಾಮಿ, ಮಹೇಶ್ ಬಾಬು, ಜಯರಾಂ, ಎಪಿಎಂಸಿ ಮಾಜಿ ಸದಸ್ಯ ಗುರುಸ್ವಾಮಿ, ಡಿವೈಎಸ್ಪಿ ರಘು ಉಪಸ್ಥಿತರಿದ್ದರು.

ಇಂದು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ

ಸಮ್ಮೇಳನಕ್ಕೆ ವನಜಲ ಸಿರಿ ನಾಡು ಸಜ್ಜು, ಸಕಲ ಸಿದ್ಧತೆ ಪೂರ್ಣ

ಸರಗೂರು, ಜ.16– ಮೊದಲ ಬಾರಿಗೆ ಜ.17ರಂದು ನಡೆಯುವ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವನಜಲ ಸಿರಿ ನಾಡು ಸರಗೂರು ಸಜ್ಜಾಗಿದ್ದು, ಸಕಲ ಸಿದ್ಧತೆ ಪೂರ್ಣಗೊಂಡಿದೆ.



ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆ ಸಿದ್ಧಗೊಂಡಿರುವುದು.

ಪಟ್ಟಣದ ಜಯಚಾಮರಾಜೇಂದ್ರ ಕ್ರೀಡಾಂಗಣದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ ಸಿದ್ಧಗೊಂಡಿದ್ದು, ಪಟ್ಟಣದಲ್ಲಿ ಕನ್ನಡದ ಬಾವುಟಗಳು ರಾರಾಜಿಸುತ್ತಿವೆ. ಬೆಳಗ್ಗೆ 8.30ಕ್ಕೆ ಪೂರ್ಣಕುಂಭ ಹಾಗೂ ವಿವಿಧ ಜಾನಪದ ಕಲಾತಂಡಗಳೊಂದಿಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಯಲಿದ್ದು, ಬೆಳಗ್ಗೆ 10.30ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಮ್ಮೇಳನ ಉದ್ಘಾಟಿಸಲಿದ್ದು, ಸಚಿವ ಕೆ.ವೆಂಕಟೇಶ್ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಿದ್ದಾರೆ. ಶಾಸಕ ಅನಿಲ್ ಅಧ್ಯಕ್ಷತೆ ವಹಿಸಲಿದ್ದು, ಸಂಸದರಾದ ಸುನೀಲ್ ಬೋಸ್, ಯದುವೀರ್ ಅವರು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡುವರು.

ಕಸಾಪ ರಾಜ್ಯಾಧ್ಯಕ್ಷ ಡಾ.ನಾಡೋಜ ಮಹೇಶ್ ಜೋಷಿ ಸ್ಮರಣ ಸಂಚಿಕೆ ಬಿಡುಗಡೆಗೊಳಿಸುವರು. ಶಾಸಕ ದರ್ಶನ್ ಪುಸ್ತಕ ಮಳಿಗೆ ಉದ್ಘಾಟನೆ ಮಾಡುವರು. ಎಂಎಲ್‌ಸಿ ಡಾ.ಯತೀಂದ್ರ ಕೃತಿ ಬಿಡುಗಡೆಗೊಳಿಸುವರು. ಸಾಹಿತಿ ಡಾ.ವೈ.ಡಿ. ರಾಜಣ್ಣ ಸಮ್ಮೇಳನಾಧ್ಯಕ್ಷರ ನುಡಿಯುವರು. ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ ಸ್ವಾಗತ ಮಾಡುವರು.

ವಿಚಾರ ಗೋಷ್ಠಿ: ಮೊದಲ ಗೋಷ್ಠಿ ಮಧ್ಯಾಹ್ನ 2 ಗಂಟೆಗೆ ನಡೆಯಲಿದ್ದು, ಹಿರಿಯ ನಟಿ ಗಿರಿಜಾ ಲೋಕೇಶ್ ಉದ್ಘಾಟಿಸುವರು. ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಅಧ್ಯಕ್ಷತೆ ವಹಿಸುವರು. ಸಿನಿಮಾ ನಿರ್ದೇಶಕ ಕಾರ್ತಿಕ್, ಕೃತಿಕಾ ಗಣೇಶ್ ಅವರು 'ಸರಗೂರು ತಾಲುಕು ದರ್ಶನ' ಕುರಿತು ಮಾತನಾಡುವರು. ಮಧ್ಯಾಹ್ನ 3ಕ್ಕೆ ಎರಡನೇ ಗೋಷ್ಠಿ ನಡೆಯಲಿದ್ದು, ಮೈಸೂರಿನ ಬಿಜಿಎಸ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಹೆಚ್.ಬಿ.ಬೆಟ್ಟಸ್ವಾಮಿ 'ಕನ್ನಡ ಶಾಲೆಗಳು–ಇತ್ತೀಚಿನ ಬೆಳವಣಿಗೆ' ಕುರಿತು ಮಾತನಾಡುವರು.

ಸಂಜೆ 5 ಗಂಟೆಗೆ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದ್ದು, ಪದ್ಮಶ್ರೀ ಪುರಸ್ಕೃತ ಸೋಮಣ್ಣ ಅವರನ್ನು ಸನ್ಮಾನಿಸಲಾಗುವುದು. ಶಾಸಕ ಹೆಚ್.ವಿಶ್ವನಾಥ್ ವಿಶೇಷ ಅತಿಥಿಗಳಾಗಿ ಆಗಮಿಸುವರು. ನಂತರ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಗುವುದು.

ಸಮಾರೋಪ: ಸಂಜೆ 6 ಗಂಟೆಗೆ ನಡೆಯುವ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಶಾಸಕ ಅನಿಲ್ ವಹಿಸುವರು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ.ಮಾನಸ ಭಾಷಣ ಮಾಡುವರು. ಸಾಹಿತಿ ಡಾ.ವೈ.ಡಿ.ರಾಜಣ್ಣ ಸಮ್ಮೇಳನಾಧ್ಯಕ್ಷರ ನುಡಿ ನುಡಿಯುವರು. ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಸ್ವಾಗತಿಸುವರು. ಸಂಜೆ 7ಕ್ಕೆ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ಇರಲಿದ್ದು, ಜೀ ಕನ್ನಡ ವಾಹಿನಿ ಕಾಮಿಡಿ ಕಿಲಾಡಿ ಕಲಾವಿದರಾದ ಗಿಲ್ಲಿ ನಟ, ಗಗನ ಅವರಿಂದ ನಗೆ ಹಬ್ಬ ಇರಲಿದೆ. ಜೂನಿಯರ್ ವಿಷ್ಣುವರ್ಧನ್, ಅಂಬರೀಶ್, ರವಿಚಂದ್ರನ್ ಅವರಿಂದ ಮನೋರಂಜನಾ ಕಾರ್ಯಕ್ರಮ ಇರಲಿದೆ.

ಮೈಸೂರು ಮಿತ್ರ

ಸಿಎಂ ಸ್ಥಾನದಿಂದ ಸಿದ್ದರಾಮಯ್ಯಗೆ ಕೊಕ್ ಕೊಟ್ಟರೆ ಕಾಂಗ್ರೆಸ್ ಇಬ್ಭಾಗ!

ಮಾಜಿ ಸಂಸದ ಪ್ರತಾಪ್ ಸಿಂಹ ಭೀಕರ ಭವಿಷ್ಯ



ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಹಸುವಿನ ಕೆಚ್ಚಲು ಕೊಯ್ದ ಪ್ರಕರಣ ಖಂಡಿಸಿ ಮಾಜಿ ಸಂಸದ ಪ್ರತಾಪ್ ಸಿಂಹ ಮೈಸೂರಿನ ಜಲದರ್ಶಿನಿ ಮುಂದೆ ಗೋವು ಪೂಜೆ ಮಾಡಿ ಹಾಲು ಕರೆದರು.

ಮೈಸೂರು, ಜ.16(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಿದರೆ ಕಾಂಗ್ರೆಸ್ ಪಕ್ಷವನ್ನೆ ಸಿದ್ದರಾಮಯ್ಯ ಇಬ್ಭಾಗ ಮಾಡುತ್ತಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಭೀಕರ ಭವಿಷ್ಯ ನುಡಿದಿದ್ದಾರೆ.

ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಹಸುವಿನ ಕೆಚ್ಚಲು ಕೊಯ್ದ ಪ್ರಕರಣ ಖಂಡಿಸಿ ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಗೋವುಗಳಿಗೆ ಪೂಜೆ ನೆರವೇರಿಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ತಮ್ಮ ಸ್ವಾರ್ಥ ರಾಜಕಾರಣಕ್ಕೆ ಸಿದ್ದರಾಮಯ್ಯ ಷಡ್ಯಂತ್ರ ರೂಪಿಸುತ್ತಾರೆ ಎಂದು ಆರೋಪಿಸಿದರು.

ಸೋನಿಯಾ ಗಾಂಧಿ ನೇತೃತ್ವದ ಕಾಂಗ್ರೆಸ್ ಮುಸ್ಲಿಂರ ಓಲೈಕೆ ಮಾಡುತ್ತಿದೆ. ಈಗ ಸಿದ್ದರಾಮಯ್ಯ ಕಾಂಗ್ರೆಸ್ ಹೈಕಮಾಂಡ್ ಅನ್ನೆ ಓವರ್‌ಟೇಕ್ ಮಾಡಿದ್ದಾರೆ.

ಐಎಎಸ್ ಅಧಿಕಾರಿಗಳ ಸಂಘ ದನಿ ಎತ್ತಬೇಕು

ವಿಜಯನಗರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾಧಿಕಾರಿಯನ್ನು ಬಹಿರಂಗವಾಗಿ ಅವಮಾನಿಸಿರುವ ಬಗ್ಗೆ ಐಎಎಸ್ ಅಧಿಕಾರಿಗಳ ಸಂಘ ದನಿ ಎತ್ತಬೇಕು ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಸಲಹೆ ನೀಡಿದರು. ಅಧಿಕಾರ ದರ್ಪದಿಂದ ಸಿದ್ದರಾಮಯ್ಯ ಎಲ್ಲರನ್ನು ಹಗುರವಾಗಿ ಕಾಣುತ್ತಾರೆ. ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಲಿಂಗಾಯಿತ ಹಾಗೂ ಒಕ್ಕಲಿಗ ಸಮುದಾಯದ ಅಧಿಕಾರಿಗಳನ್ನು ಅಧಿಕಾರದಿಂದ ದೂರ ಇಟ್ಟಿದ್ದರು. ಎರಡನೇ ಅವಧಿಯಲ್ಲಿ ಕೂಡ ಇದನ್ನೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಒಬ್ಬ ಐಎಎಸ್ ಅಧಿಕಾರಿಯನ್ನು ಬಹಿರಂಗವಾಗಿ ಅವಮಾನ ಮಾಡಿರುವುದರ ಬಗ್ಗೆ ಐಎಎಸ್ ಅಧಿಕಾರಿಗಳ ಸಂಘ ದನಿ ಎತ್ತಬೇಕು. ಕೇವಲ ನಿವೇಶನ ಹಂಚಿಕೆಗೆ ಮಾತ್ರ ಐಎಎಸ್ ಅಧಿಕಾರಿಗಳ ಸಂಘವಿಲ್ಲ. ನಿಮ್ಮದೆ ಅಧಿಕಾರಿಗೆ ತೊಂದರೆ ಎದುರಾದಾಗ ನೀವು ಒತ್ತಾಸೆಯಾಗಿ ನಿಲ್ಲಬೇಕು ಎಂದು ಸಲಹೆ ನೀಡಿದರು. ರಾಜ್ಯದ ಮುಖ್ಯ ಕಾರ್ಯದರ್ಶಿ ಸರ್ಕಾರದ ಯೋಜನೆಗಳನ್ನು ಜಾರಿ ಮಾಡುವುದಷ್ಟೆ ಅಲ್ಲದೆ ನಿಮ್ಮಂತೆ ಅಧಿಕಾರದಲ್ಲಿರುವ ಇತರೆ ಅಧಿಕಾರಿಗಳ ಕಷ್ಟಕ್ಕೆ ಧಾವಿಸಬೇಕು. ನಿಮ್ಮನ್ನು ಅವಮಾನ ಮಾಡಿರುವವರ ವಿರುದ್ಧ ದನಿ ಎತ್ತಬೇಕು ಎಂದು ಪ್ರತಾಪ್ ಸಿಂಹ ಹೇಳಿದರು.

ಒಂದು ವೇಳೆ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಸಿದರೆ ಕಾಂಗ್ರೆಸ್ ಪಕ್ಷವನ್ನೆ ಅವರು ಇಬ್ಭಾಗ ಮಾಡುತ್ತಾರೆ ಎಂದು ಪ್ರತಾಪ್ ಸಿಂಹ ಎಚ್ಚರಿಸಿದರು.

ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಹಸುವಿನ ಕೆಚ್ಚಲು ಕೊಯ್ದಿದ್ದಾರೆ. ಹಿಂದುಗಳು ಪೂಜ್ಯ ಭಾವನೆಯಿಂದ ನೋಡುವ ಗೋವುಗಳನ್ನು ಹಿಂಸಿಸಿ ವಿಕೃತಿ ಮೆರೆದಿದ್ದಾರೆ. ಇಂತಹ ಅಪರಾಧ ಕೃತ್ಯ ತಡೆಯುವ ನಿಟ್ಟಿನಲ್ಲಿ ಗೃಹ ಸಚಿವ ಡಾ.ಪರಮೇಶ್ವರ್ ಅಸಹಾಯಕರಾಗಿದ್ದಾರೆ ಎಂದರು.

ಮೈಸೂರಿನ ನಂಜನಗೂಡಿನಲ್ಲಿ ಗೋವುಗಳನ್ನು ಕಳ್ಳತನ ಮಾಡುವ ಸಂದರ್ಭದಲ್ಲಿ ಹಸುವಿನ ಬಾಲ ಕತ್ತರಿಸಿದ್ದಾರೆ. ಸಿದ್ದರಾಮಯ್ಯ ಮೊದಲ ಐದು ವರ್ಷ ಮುಖ್ಯಮಂತ್ರಿ ಆಗಿದ್ದಾಗ ನಡೆದ ಕೃತ್ಯಗಳು ಈಗ ಪುನರಾವರ್ತನೆಯಾಗುತ್ತಿವೆ ಎಂದು ಪ್ರತಾಪ್ ಸಿಂಹ ಆಕ್ರೋಶ ವ್ಯಕ್ತಪಡಿಸಿದರು.

ಹಸುವಿನ ಕೆಚ್ಚಲು ಕತ್ತರಿಸಿದ ವ್ಯಕ್ತಿ ಮಾನಸಿಕ ಅಸ್ವಸ್ಥ ಎಂದು ಸ್ಟೇಷನ್ ಜಾಮೀನು ನೀಡಿ ಬಿಡುಗಡೆ ಮಾಡಿದ್ದಾರೆ. ಇಂತಹವರಿಗೆ ಕಾಂಗ್ರೆಸ್ ಬೆಂಬಲ ನೀಡುತ್ತಿದೆ. ಅದರಿಂದ ಅಪರಾಧ ಕೃತ್ಯ ಎಸಗಲು ಅವರು ಹೆದರುತ್ತಿಲ್ಲ ಎಂದು ಹೇಳಿದರು.

ಈ ಸರ್ಕಾರದಲ್ಲಿ ಗೋವುಗಳು ಮಾತ್ರವಲ್ಲ ಹಿಂದೂಗಳಿಗೂ ಕೂಡ ರಕ್ಷಣೆ ಇಲ್ಲದಂತಾಗಿದೆ. ಇದನ್ನು ಹಿಂದೂ ಸಮುದಾಯ ಅರಿಯಬೇಕು ಎಂದು ಪ್ರತಾಪ್ ಸಿಂಹ ಸಲಹೆ ನೀಡಿದರು.

ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಹಸುವಿನ ಕೆಚ್ಚಲು ಕೊಯ್ದ ಪ್ರಕರಣ ಖಂಡಿಸಿದ ಪ್ರತಾಪ್ ಸಿಂಹ ಗೋವುಗಳಿಗೆ ಪೂಜೆ ನೆರವೇರಿಸಿ ಹಾಲು ಕರೆದರು. ಬಿಜೆಪಿ ಮುಖಂಡರಾದ ಮೈ.ವಿ.ರವಿಶಂಕರ್, ಪಡುವಾರಹಳ್ಳಿ ಶ್ರೀರಾಮ್, ಮರುಳಿ ಸೇರಿದಂತೆ ಹಲವು ಈ ವೇಳೆ ಹಾಜರಿದ್ದರು.

ವಿಜಯ ವಿಠಲದಲ್ಲಿ ಸ್ವಾಮಿ ವಿವೇಕಾನಂದ ಜಯಂತ್ಯುತ್ಸವ



ಮೈಸೂರು, ಜ.16(ಎಸ್‌ಬಿಡಿ)– ನಗರದ ವಿಜಯ ವಿಠಲ ವಿದ್ಯಾಶಾಲೆಯಲ್ಲಿ ಸ್ವಾಮಿ ವಿವೇಕಾನಂದ ಜಯಂತ್ಯುತ್ಸವದ ಅಂಗವಾಗಿ ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಶ್ರೀ ಶಾರದ ವಿಶ್ವ ಭಾವೈಕ್ಯ ಆಶ್ರಮದ ಮಾತಾ ಅಮೋಘಮಯೀ ಅವರು ಸ್ವಾಮಿ ವಿವೇಕಾನಂದರ ಮಾತು, ಕೃತಿ, ವಿದ್ವತ್ತು ಕುರಿತು ಚಿಂತನಶೀಲ ಪ್ರವಚನದ ಮೂಲಕ ಅಜ್ಞಾನದ ನಿರ್ಮೂಲನೆಗೆ ವಿವೇಕಾನಂದರು ದಾರಿದೀಪ ಎಂದು ವಿದ್ಯಾರ್ಥಿಗಳಿಗೆ ತಿಳಿಹೇಳಿದರು.

ವಿವೇಕ ವಿದ್ಯಾವಾಹಿನಿಯ ಸ್ಥಾಪಕ ವಿಶ್ವ ನಿತ್ಯಾನಂದ ವಿವೇಕವಂಶಿ ಮಾತನಾಡಿ, ಸ್ವಾಮಿ ವಿವೇಕಾನಂದರ ಬಾಲ್ಯದ ಕಥೆಗಳನ್ನು ಮನೋಜ್ಞವಾಗಿ ವಿವರಿಸಿ, ವಿವೇಕಾನಂದರ ಹಾಸ್ಯಪ್ರಜ್ಞೆ, ಮಾನವೀಯತೆಯ ಅರಿವು ಮತ್ತು ಅವರ ದೃಷ್ಟಿಕೋನವನ್ನು ಮನದಟ್ಟು ಮಾಡಿದರು.

ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಎಸ್.ಎ.ವೀಣಾ, ಶ್ರೀ ವಿವೇಕ ವಿದ್ಯಾವಾಹಿನಿಯ ಕಾರ್ಯದರ್ಶಿ ಶ್ರೀ ಪ್ರಭಾಂಜನ್, ಸಮಾಜ ಸೇವಕಿ ಶ್ರೀಮತಿ ಮೀನಾಕ್ಷಿ ಮತ್ತಿತರರು ಉಪಸ್ಥಿತರಿದ್ದರು.

ಅಬಕಾರಿ ಸಿಬ್ಬಂದಿ ಕೌನ್ಸೆಲಿಂಗ್ ಮೂಲಕ ವರ್ಗಾವಣೆ

● ಸಂಪುಟ ಸಭೆಯಲ್ಲಿ ತೀರ್ಮಾನ ● ನಾಗರಿಕರಿಗೆ ಕಣ್ಣಿನ ಉಚಿತ ಚಿಕಿತ್ಸೆ ಆಶಾಕಿರಣ

ಬೆಂಗಳೂರು, ಜ.16(ಕೆಎಂಶಿ)– ಅಬಕಾರಿ ಇಲಾಖೆಯಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಇನ್ನು ಮುಂದೆ ಅಧಿಕಾರಿ ಮತ್ತು ನೌಕರರ ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕ ಮಾಡಲು ಇಂದಿಲ್ಲಿ ಸೇರಿದ್ದ ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ.

ಈ ಸಂಬಂಧ ನಿಯಮಾವಳಿಗಳಿಗೆ ತಿದ್ದುಪಡಿ ತಂದು ವರ್ಗಾವಣೆ ಸ್ವರೂಪ ಸಿದ್ಧಪಡಿಸುವಂತೆ ಇಲಾಖೆಗೆ ಆದೇಶಿಸಿದೆ.

ಆಶಾಕಿರಣ: ನಾಗರಿಕರಿಗೆ ಕಣ್ಣಿನ ಉಚಿತ ತಪಾಸಣೆ ಹಾಗೂ ಕನ್ನಡಕ ವಿತರಿಸುವ ಆಶಾಕಿರಣ ಯೋಜನೆಯನ್ನು 13.30 ಕೋಟಿ ರೂ. ವೆಚ್ಚದಲ್ಲಿ ರಾಜ್ಯಾದ್ಯಂತ ಅನುಷ್ಠಾನಗೊಳಿಸಲು ಸಮ್ಮತಿಸಲಾಗಿದೆ.

ಆರೋಗ್ಯ ಮಿತ್ರರ ನೇಮಕ: ಸುವರ್ಣ ಆರೋಗ್ಯ ಟ್ರಸ್ಟ್‌ಗೆ ಹೊರಗುತ್ತಿಗೆ ಆಧಾರದ ಮೇಲೆ ಆರೋಗ್ಯ ಮಿತ್ರರು ಮತ್ತು ಸಿಬ್ಬಂದಿಗಳನ್ನು 53.18 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಎರಡು ವರ್ಷಗಳ ಅವಧಿಗೆ ನೇಮಕ ಮಾಡಿಕೊಳ್ಳಲು, ಹೊಸ ಟೆಂಡರ್ ಪ್ರಕ್ರಿಯೆಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಕೊಡಗು ಮೆಡಿಕಲ್ ಆಸ್ಪತ್ರೆ: ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ ನಿರ್ಮಾಣವಾಗುತ್ತಿರುವ 450 ಹಾಸಿಗೆ ಸಾಮರ್ಥ್ಯದ ನೂತನ ಆಸ್ಪತ್ರೆ ಕಟ್ಟಡದ ಎರಡನೇ ಹಂತದ ಕಾಮಗಾರಿ 78.10 ಕೋಟಿ ರೂ. ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಡಿ 10 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೆ 21 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.

ಬೃಹತ್ ಬೆಂಗಳೂರು ಯೋಜನೆಯಡಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳನ್ನು 413.71 ಕೋಟಿ ರೂ. ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲು ಸಮ್ಮತಿಸಿದೆ. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವನ್ನು ಆಯುಕ್ತಾಲಯವನ್ನಾಗಿ ಉನ್ನತೀಕರಿಸಲು ಸಂಪುಟ ಸಮ್ಮತಿಸಿದೆ.

ಜ.19 ಭಗವಾನ್ ಸದ್ಗುರು ಶ್ರೀಧರ ಸ್ವಾಮಿಗಳ ಭಕ್ತಿಗೀತೆ

ಮೈಸೂರು,ಜ.16(ಜಿಎ)–ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ವತಿಯಿಂದ ಜ.19ರ ಸಂಜೆ 4ರಿಂದ ರಾತ್ರಿ 8ರವರೆಗೆ ನಗರದ ಕುವೆಂಪುನಗರದ ಯೋಗ ಸಂಸ್ಕೃತಿ ಕಲಾ ಭವನದಲ್ಲಿ ಭಗವಾನ್ ಸದ್ಗುರು ಶ್ರೀಧರ ಸ್ವಾಮಿಗಳವರ ಭಕ್ತಿಗೀತೆ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ರಾಮಚಂದ್ರ ಭಟ್ ಈ ವಿಷಯ ತಿಳಿಸಿ,ಕಾರ್ಯಕ್ರಮದಲ್ಲಿ ವಿಶ್ವೇಶ್ವರ ಭಟ್ ಹೊನ್ನಾವರ, ಡಾ.ಶಿಲ್ಪಾಭಟ್, ಮಮತ ಭಟ್, ಗೀತಾ ಉಪಾಧ್ಯಾಯ, ರಶ್ಮಿ ರಘುರಾಂ ಗಾಯಕರಾಗಿದ್ದು, ಇಂದ್ರ ಕುಮಾರ್ ಹಾರ್ಮೋನಿಯಂನಲ್ಲಿ, ಗಣೇಶ್ ಭಟ್ ಕೀಬೋರ್ಡ್‌ನಲ್ಲಿ, ರಾಮದಾಸ ಭಟ್ ತಬಲದಲ್ಲಿ ಸಾಥ್ ನೀಡಲಿದ್ದಾರೆ. ಡಾ.ಸರಸ್ವತಿ ಹೆಗಡೆ ವ್ಯಾಖ್ಯಾನ ಮಾಡುವರು ಎಂದರು. ಗೋಷ್ಠಿಯಲ್ಲಿ ತೇಜಸ್ವಿ, ಸಂಧ್ಯಾ ರವಿ, ಜಿ.ಟಿ.ಭಟ್ ಇದ್ದರು.

ನಟ ದರ್ಶನ್ ಶ್ರೀ ಚಾಮುಂಡೇಶ್ವರಿ ದರ್ಶನ



ಮೈಸೂರು, ಜ.16(ಆರ್‌ಕೆ)–ಕೊಲೆ ಪ್ರಕರಣದಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾಗಿ ಮೈಸೂರಿನ ಫಾರಂ ಹೌಸ್‌ನಲ್ಲಿ ವಾಸ್ತವ್ಯ ಹೂಡಿದ್ದ ನಟ ದರ್ಶನ್, ಇಂದು ಮಧ್ಯಾಹ್ನ ಚಾಮುಂಡಿಬೆಟ್ಟಕ್ಕೆ ತೆರಳಿ ಪತ್ನಿ ವಿಜಯಲಕ್ಷ್ಮಿಯೊಂದಿಗೆ ತಾಯಿ ಶ್ರೀ ಚಾಮುಂಡೇಶ್ವರಿ ದರ್ಶನ ಪಡೆದರು. ಮಧ್ಯಾಹ್ನ 1.30 ಗಂಟೆ ವೇಳೆಗೆ ಕಾರಿನಲ್ಲಿ ಗೆಳೆಯರು, ಬೌನ್ಸರ್‌ಗಳ ಬೆಂಗಾವಲಿನಲ್ಲಿ ತೆರಳಿ ದೇವರ ದರ್ಶನ ಮಾಡಿ ವಿಶೇಷ ಪೂಜೆ ಸಲ್ಲಿಸಿದ ದರ್ಶನ್, ಯಾವುದೇ ಪ್ರತಿಕ್ರಿಯೆ ನೀಡದೇ ಹಿಂದಿರುಗಿದರು. ಬೆನ್ನು ನೋವಿನಿಂದ ಬಳಲುತ್ತಿದ್ದ ಅವರು, ನಿನ್ನೆಯಷ್ಟೇ ಮಣಿಪಾಲ್ ಆಸ್ಪತ್ರೆಯಲ್ಲಿ ಡಾ. ಅಜಯ್ ಹೆಗ್ಡೆ ಅವರನ್ನು ಭೇಟಿ ಮಾಡಿ ಚಿಕಿತ್ಸೆ ಪಡೆದಿದ್ದರು.

ಇಂದು ತಾಯಿ ಚಾಮುಂಡೇಶ್ವರಿ ದರ್ಶನ ಮಾಡಿದ ಬಳಿಕ ಫಾರಂ ಹೌಸ್‌ಗೆ ಹಿಂದಿರುಗಿ, ಸಂಜೆ ಕುಟುಂಬ ಸಮೇತ ಬೆಂಗಳೂರಿಗೆ ಹಿಂತಿರುಗಿದರು ಎಂದು ಮೂಲಗಳು ತಿಳಿಸಿವೆ.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ವನಂಗಾನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗೇಮ್ ಚೇಂಜರ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫತೇ(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೂ ಮಂತರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ಡಾಕು ಮಹಾರಾಜ್ (ತೆ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಭೂ ಮಂತರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಾರ್ಕೋ (ಹಿ)	4 ಪ್ರದರ್ಶನಗಳು
ಪ್ರಭಾ	
ಮದಗಜ ರಾಜ (ತ)	5 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಆಫ್ಟರ್ ದಿ ಬ್ರೇಕಪ್ (ಕ): ಬೆ.9.40ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಸಂ.5.20ಕ್ಕೆ, ರಾ.7.45ಕ್ಕೆ, ಯುಐ (2024) (ಕ): ಮ.2.35ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸೋನಿಕ್ ದಿ ಹೆಡ್ಜಾಗ್ 3(ಇಂ): ಬೆ.11.25ಕ್ಕೆ, ಸಂ.4.30ಕ್ಕೆ, ದೇಶಕ್ಕಾರನ್ (ಮ): ಮ.1.55ಕ್ಕೆ, ಮಾರ್ಕೋ (ಹಿಂ): ರಾ.7ಕ್ಕೆ, ಮಾರ್ಕೋ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.30ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಮ.1.40ಕ್ಕೆ, ಸಂ.4.30ಕ್ಕೆ, ಎ ಲೆಜೆಂಡ್ (ಇಂ): ರಾ.7.20ಕ್ಕೆ, ಐಡೆಂಟಿಟಿ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

MVC

ದೂ : 0821–2973519

ಸ್ಕ್ರೀನ್ 1	ಪುಷ್ಪಾ 2 (ಕ): ಮ.1ಕ್ಕೆ, ಸ್ವೇಚ್ಛಾ (ಕ): ಸಂ.4.40ಕ್ಕೆ, ಯುಐ (ಕ): ಸಂ.6.55ಕ್ಕೆ, ದೇಶಕ್ಕಾರನ್ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಮ್ಯಾಕ್ಸ್ (ಕ): ಮ.1.10ಕ್ಕೆ, ಮ.3.50ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.11.25ಕ್ಕೆ, ಯುಐ (ಕ): ಮ.1.45ಕ್ಕೆ, ಮ್ಯಾಕ್ಸ್ (ಕ): ಸಂ.6.25ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.11ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.1.45ಕ್ಕೆ, ಸಂ.6.55ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಸಂ.4.25ಕ್ಕೆ, ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.


ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೀಲುಮೂಳೆ ತಪಾಸಣಾ ಶಿಬಿರ

ಮೈಸೂರು,ಜ.16–ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಜ.20ರಿಂದ 26ರವರೆಗೆ ಕೀಲುಮೂಳೆ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಭುಜ ನೋವು, ಬೆನ್ನು ನೋವು, ಮಂಡಿ ನೋವು, ಸೊಂಟದ ನೋವು, ಮೈಕೈ ನೋವು ಮುಂತಾದ ಸಮಸ್ಯೆಗಳಿಗೆ ತಪಾಸಣೆ ಹಾಗೂ ಉಚಿತ ಸಮಾಲೋಚನೆ ಲಭ್ಯವಿರುತ್ತದೆ ಆಸಕ್ತರು 0821–2566966, 9986399862 ಮೂಲಕ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಕೊನೆಗೂ ಕೂಡಿಬಂತು ಡಾಂಬರೀಕರಣ ಭಾಗ್ಯ!

ರೈಲ್ವೆ ಅಂಡರ್‌ಪಾಸ್ ರಸ್ತೆಯಲ್ಲೀಗ ವಾಹನ ಚಾಲನೆ ಸರಾಗ



ಮೈಸೂರಿನ ಬಂಬೂಬಜಾರ್‌ನ ಮೇದರ್ ಬ್ಲಾಕ್ ಸಮೀಪ ಜಾವಾ ಮುಖ್ಯರಸ್ತೆಯಲ್ಲಿರುವ ರೈಲ್ವೆ ಕೆಳಸೇತುವೆ ರಸ್ತೆಗೆ ಪೂರ್ಣ ಪ್ರಮಾಣದಲ್ಲಿ ಡಾಂಬರೀಕರಣ ಮಾಡಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು ಮಿತ್ರ ಫಲಶ್ರುತಿ

ಮೈಸೂರು,ಜ.16(ಪಿಎಂ)– ಮೈಸೂರಿನ ಬಂಬೂಬಜಾರ್‌ನ ಮೇದರ್ ಬ್ಲಾಕ್ ಸಮೀಪ ಜಾವಾ ಮುಖ್ಯರಸ್ತೆಯಲ್ಲಿರುವ ರೈಲ್ವೆ ಅಂಡರ್ ಪಾಸ್ ರಸ್ತೆಗೆ (ರೈಲ್ವೆ ಕೆಳಸೇತುವೆ) ಕೊನೆಗೂ ಡಾಂಬರೀಕರಣದ ಭಾಗ್ಯ ಕೂಡಿಬಂದಿದೆ.

ಈ ರಸ್ತೆಯ ಡಾಂಬರ್ ಕಿತ್ತು ಹಳ್ಳ-ಕೊಳ್ಳಗಳು ನಿರ್ಮಾಣವಾಗಿ ವಾಹನ ಸವಾರರು ಜೀವ ಕೈಯಲ್ಲಿಡಿದು ಸಾಗುವ ಸನ್ನಿವೇಶ ಸೃಷ್ಟಿಯಾಗಿತ್ತು. 'ರೈಲ್ವೆ ಅಂಡರ್‌ಪಾಸ್ ಹಳ್ಳಕೊಳ್ಳದ'ಲ್ಲಿ ಆಯತಪ್ಪಿದರೆ ಘೋರ ಅಪಾಯ!' ಶೀರ್ಷಿಕೆಯಡಿ 'ಮೈಸೂರು ಮಿತ್ರ'ನ ಜ.11ರ ಸಂಚಿಕೆಯಲ್ಲಿ ಸುದ್ದಿ ಪ್ರಕಟಿಸಿ ಸಂಬಂಧಿಸಿದವರ ಗಮನ ಸೆಳೆಯಲಾಗಿತ್ತು. ಆ ಬಳಿಕ ಹಳ್ಳಕೊಳ್ಳ ಉಂಟಾಗಿರುವ ಸ್ಥಳಕ್ಕೆ ಬೇಕಾಬಿಟ್ಟಿಯಾಗಿ ಮಣ್ಣು ಹಾಕಿ ಕೈತೊಳೆದುಕೊಳ್ಳಲಾಗಿತ್ತು.

ಈ ಬಗ್ಗೆಯೂ 'ಮೈಸೂರು ಮಿತ್ರ'ನ ಜ.14ರ ಸಂಚಿಕೆಯಲ್ಲಿ 'ಒಂದಿಷ್ಟು ಡಾಂಬರ್‌ಗೂ ಗತಿ ಇಲ್ಲವೇ!?' ಶೀರ್ಷಿಕೆಯಡಿ ಸಂಬಂಧಿಸಿದವರ ನಿರ್ಲಕ್ಷ್ಯ ವಿರುದ್ಧವೂ ವರದಿ ಪ್ರಕಟಿಸಲಾಗಿತ್ತು. ಕೊನೆಗೂ ಎಚ್ಚೆತ್ತ ರೈಲ್ವೆ ಇಲಾಖೆಯು ಇಡೀ ಅಂಡರ್‌ಪಾಸ್ ವಿಸ್ತೀರ್ಣ ಇರುವಷ್ಟರವರೆಗೂ ಗುರುವಾರ ಡಾಂಬರೀಕರಣ ಮಾಡಿದೆ. ಆ ಮೂಲಕ ವಾಹನ ಸವಾರರು ನಿರಾಳವಾಗಿ ಸಾಗಲು ವ್ಯವಸ್ಥೆಯಾಗಿದೆ.

ಆದರೆ ಇಲ್ಲಿನ ಫುಟ್‌ಪಾತ್ ದುಸ್ಥಿತಿ ಹಾಗೆಯೇ ಉಳಿದಿದ್ದು, ಇದನ್ನೂ ಸರಿಪಡಿಸುವ ತುರ್ತು ಅಗತ್ಯವೂ ಇದೆ. ಜೊತೆಗೆ ಅಂಡರ್‌ಪಾಸ್ ಕಟ್ಟಡದ ಮೇಲೆ ಮತ್ತು ಬದಿಗಳಲ್ಲಿ ಬೆಳೆದಿರುವ ಗಿಡಗಂಟಿ ತೆರವುಗೊಳಿಸುವುದೂ ಮಾತ್ರವಲ್ಲದೆ, ಇಡೀ ಅಂಡರ್‌ಪಾಸ್ ಕಟ್ಟಡ ಮತ್ತು ರಸ್ತೆಯ ಸಮಗ್ರ ಅಭಿವೃದ್ಧಿ ಯೋಜನೆ ಅನುಷ್ಠಾನ ಅಗತ್ಯವಾಗಿದೆ. ಆ ಮೂಲಕ ಇಲ್ಲಿ ಸ್ವಚ್ಛತೆ ನೆಲೆಸಲು ಹಾಗೂ ಇಡೀ ವಾತಾವರಣದ ಸೌಂದರ್ಯೀಕರಣಗೊಳಿಸಲು ಕ್ರಮ ವಹಿಸುವುದು ಅಗತ್ಯವಾಗಿದೆ.

ಈ ಮಧ್ಯೆ ರೈಲ್ವೆ ಕೆಳಸೇತುವೆಯಿಂದ ಸಂಕಲ್ಪ ಅಪಾರ್ಟ್‌ಮೆಂಟ್ ಕಡೆ ಹೋಗುವೆಡೆ ಕೆಲ ಮನೆಗಳ ಸಂಪು ತುಂಬಿ ರಾತ್ರೋರಾತ್ರಿ ಭಾರಿ ನೀರು ಧಾರಾಕಾರವಾಗಿ ಹರಿಯುವುದರಿಂದಲೂ ಈ ರಸ್ತೆ ಹಾಳಾಗುತ್ತದೆ ಎಂದು ಕೆಲವರು ದೂರಿದ್ದಾರೆ.

ಭಾವಪೂರ್ಣ ಶ್ರದ್ಧಾಂಜಲಿ



ಇವರು ದಿನಾಂಕ 16.01.2025 ಗುರುವಾರ ದೈವಾಧೀನರಾಗಿದ್ದು, ಮೃತರ ಅಂತ್ಯಕ್ರಿಯೆಯನ್ನು 17.01.2025 ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಸವಿಲು ಮಾರನಹಳ್ಳಿ, ಕೆ.ಆರ್.ಪೇಟೆ ತಾ|| ಇಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು: ಮೈಸೂರು ಗೆಳೆಯರು

ಮುನಿಸ್ವಾಮಿಗೌಡರು

GLOBAL REACH MINDSET

Job Post - Frontend Sales Related to FMCG Industry

Experience: 5+ Years
Education: Any Graduate
Good network & strong communication
Job Location - Mysore

9686501699

NEW YEAR Sale

BUY 2 GET 1 FREE 2+1 OFFER

ON GENTS & LADIES FOOTWEAR

OFFER TILL 21ST JAN* ON ALL IN-HOUSE BRANDS RUSH PICK THE BEST FOR YOUR FEET

SHOE WORLD ESTD.1998 Best Brands at Your Feet...

Only At • RAMASWAMY CIRCLE, 100 FT RD, MYSORE PH: 0821-2424252

DREAM WORLD TRAVELS Mysore

Dubai 5 Nights 6 Days
Ex Bangalore Round trip Emirates flight

PACKAGE COST: Rs.1,06,000/-

DEPARTURE DATE Feb 19th 2025

For More Details Contact : 994 5242 427

Teem BOND PLATINUM

PLYWOOD & DOORS @ FACTORY DEPOT RATES

10 YEARS WARRANTY*

ISO 9001:2015 Certified Company Depot

Build Mart® 9901291267 9845426862

ಮುಡಾ ಅನುಮೋದಿಸಿದ ಸೈಟ್‌ಗಳು ಮಾರಾಟಕ್ಕೆ

ಹೆರಿಟೇಜ್ ನಗರದಲ್ಲಿ, ರಿಂಗ್ ರೋಡ್‌ನಿಂದ ಕೇವಲ 1 ಕಿ.ಮೀ. ಉತ್ತನಹಳ್ಳಿ, ಹಡಜನ, ಬಂಡಿಪಾಳ್ಯ, ವಿಮಾನ ನಿಲ್ದಾಣದ ಹತ್ತಿರ.

1) 30x40 ಪಶ್ಚಿಮ ಫೇಸ್ – 40 ಲಕ್ಷ
2) 40x60 ಪಶ್ಚಿಮ ಫೇಸ್ – 70 ಲಕ್ಷ

ಬೆಲೆ ನೆಗೋಷಿಯಬಲ್. ಸಂಪರ್ಕಿಸಿ:
Mob: 8431781745

Aquaguard & Kent Water Purifier Sales & Service

9901200444

#319, Near Mega Medical Store, Kuvempunagar

ಭಾರತದ ಬೃಹತ್ ಅಂತಾರಾಷ್ಟ್ರೀಯ

ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ & ಫುಟ್‌ವೇರ್ ಮಾರಾಟ

ಮೈಸೂರಿನ ಬಂದಂತಮ್ಮ ಕಾಳಮ್ಮ ಸಮುದಾಯ ಭವನದಲ್ಲಿ ಮಾರಾಟ 4 ದಿನಗಳು ಮಾತ್ರ : 20-01-2025 ರವರೆಗೆ

ಪುರುಷರ, ಮಹಿಳೆಯರ, ಮಕ್ಕಳ ಬ್ರಾಂಡೆಡ್ ಶೂಸ್, ಫಾರ್ಮಲ್ ಶೂಸ್, ಜಾಗಿಂಗ್ ಶೂಸ್, ಫ್ಲಿಪ್ ಫ್ಲಾಪ್, ಸ್ಯಾಂಡಲ್ಸ್, ಸ್ಲಿಪ್ಪರ್ಸ್ ಮತ್ತು ಪಾದರಕ್ಷೆಗಳು ಅತಿ ಕಡಿಮೆ ಬೆಲೆಯಲ್ಲಿ ಶೇ. 30% ರಿಂದ 80% ರವರೆಗೆ ರಿಯಾಯಿತಿ

30% OFF 80% OFF

adidas NIKE puma CONVERSE lotto CATERPILLAR dressberry Reebok HRX aurelia anouk

ಪುರುಷರ, ಮಹಿಳೆಯರ ಮತ್ತು ಮಕ್ಕಳ ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ & ಆಕ್ಸೆಸರೀಸ್ : ಫಾರ್ಮಲ್ ಪ್ಯಾಂಟ್, ಜೀನ್ಸ್ ಪ್ಯಾಂಟ್, ಫಾರ್ಮಲ್ & ಕ್ಯಾಷುಯಲ್ ಶರ್ಟ್, ಲೋವರ್, ಶಾರ್ಟ್, ಜಾಕೆಟ್, ಸ್ವೆಟ್ ಶರ್ಟ್, ಸ್ವೆಟರ್, ಫುಲೋವರ್ (ವುಲನ್), ಮಹಿಳೆಯರ ಟಾಪ್ಸ್, ಜೀನ್ಸ್ ಪ್ಯಾಂಟ್, ಫ್ರಾಕ್, ಸೀರೆಗಳು ಮತ್ತು ಮಕ್ಕಳ ಉಡುಪುಗಳು ಹಾಗೂ ಮಹಿಳೆಯರ ಒಳಉಡುಪುಗಳು ಭಾರಿ ರಿಯಾಯಿತಿ ದರದಲ್ಲಿ ಮಾರಾಟ

ಸ್ಥಳ : ಬಂದಂತಮ್ಮ ಕಾಳಮ್ಮ ಸಮುದಾಯ ಭವನ

ಅಪೊಲೊ ಆಸ್ಪತ್ರೆ ಸಿಗ್ನಲ್ (ಹತ್ತಿರ), ನ್ಯೂಕಾಂತರಾಜ ಅರಸ್ ರಸ್ತೆ, ಮೈಸೂರು. Free Parking

KNC Innovative Global School & P. U. College

#295/B, Hebbal Industrial Area, Mysuru-570 016
Ph: 0821-2402929 / 94811 23959 / 98443 37080

WANTED TEACHING FACULTIES

A Reputed, CBSE affiliated School requires following faculties for the year 2025-26. Candidates having required qualification may apply. All candidates must have experience and fluency in English.

1. NURSERY TEACHERS with N.S.T/N.T.T/M.N.T.T with 2-3 years experience
2. MOTHER TEACHERS with D.Ed/D.El.Ed for teaching Grade - 1 & 2 with 2-3 years experience.
3. TRAINED GRADUATE TEACHERS for Primary & Middle Classes with B.Ed/B.El.Ed for English, Kannada, Hindi, Social Science, Mathematics, Science & Computer Science subjects with minimum 2-3 years experience.
4. TRAINED GRADUATE TEACHERS for High School with B.Ed./ B.El.Ed for English, Hindi, Social Science & Mathematics subjects with minimum 2-3 years experience.
5. Experienced Teachers for Counsellor, Music & Dance & Physical Education.

Forward your resume for posts of Serial number 1 to 5 with photo to career@kncinnovativeglobalschool.com or by hand to office within 25-01-2025.

6. TRAINED & EXPERIENCED LECTURERS to teach PUC (State syllabus) with CET & NEET in the following subjects: M.Sc. in Computer Science with B.Ed with 2-3 years experience.

Forward your resume for Serial number 6 with photo to puc@kncinnovativeglobalschool.com within 25-01-2025.

Registrations open for Admissions for Montessori - 1, 2, 3 & Grade 1-10 (CBSE) classes I & II PUC (Science & Commerce stream) (State Board) for the Academic year 2025-26

FOR ADVERTISEMENT
STAR OF MYSORE Please Call: 0821-2496522 / 23 Email: ad@starofmysore.com
ಮೈಸೂರು ಮಿತ್ರ Please Call: 0821-2496522 / 23 Email: ad@mysurumithra.com

TECHNICIANS WANTED!

Hiring for Hero 2W dealership for the following positions:

1. Freshers (Technicians)
• Salary: ₹ 12,000 - ₹15,000 per month
2. Senior Technicians
• Requirement: Should be able to do full engine work
• Salary: ₹ 15,000 -₹ 18,000 per month (based on experience)
3. Washing Boys
• Salary: ₹15,000 per month

INTERVIEW DETAILS

WALK-IN
Shah Mysore Hero
Lokaranjan Mahal Road
Mysore – 570010
DATE: 18TH JANUARY 2025
TIME: 10:00 AM - 1:30 PM

WHATSAPP YOUR RESUME TO +91-97422 97450

SHAH MYSORE HERO
Nazarbad | Kantharaj URS Road | Kuvempunagar

ದಿ. ಮೈಸೂರು ಕೋ-ಆಪರೇಟಿವ್ ಬ್ಯಾಂಕ್ (ನಿ.)

ಹಿರಿಯ ಸಹಕಾರಿಗಳ ಆಶೀರ್ವಾದದೊಂದಿಗೆ



ದಿ|| ನರಸಿಂಹೇಗೌಡ
ಶ್ರೀಮತಿ ಭಾಗಮ್ಮ

ಕ್ರಮ ಸಂಖ್ಯೆ 20

ಯೋಗಾನಂದ ಎನ್ (ನರಸಿಂಹೇಗೌಡರ ಮಗ)

ಚಿಹ್ನೆ

ವಿ.ಸೂ: 12 ಮತಗಳು ಮಾತ್ರ ಚಲಾಯಿಸ ತಕ್ಕದ್ದು

ಸ್ಥಳ : ವಸ್ತುಪ್ರದರ್ಶನ ಮೈದಾನ, ಮೈಸೂರು
ದಿನಾಂಕ : 19-01-2025ನೇ ಭಾನುವಾರ
ಸಮಯ : ಬೆಳಗ್ಗೆ 9 ರಿಂದ ಸಂಜೆ 4ರವರೆಗೆ

ಸಾಮಾನ್ಯಕ್ಷೇತ್ರ

ತಮ್ಮ ಸೇವಾಕಾಂಕ್ಷಿ
ಯೋಗಾನಂದ ಎನ್ BA,(LLB)
ಪಡುವಾರಹಳ್ಳಿ, ಮೈಸೂರು
ಮೊ : 7975831288



ವಿ.ಸೂ: ಸದಸ್ಯರು ಚುನಾವಣೆಗೆ ಬರುವಾಗ ತಮ್ಮ ಬ್ಯಾಂಕಿನ ಸದಸ್ಯತ್ವದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು

ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿ.

ಮುಖ್ಯ ಕಛೇರಿ : 0821-2521631 ಶಾಖಾ ಕಛೇರಿ: ಸಯ್ಯಾಜಿರಾವ್ ರಸ್ತೆ, 0821-256851

ಆಡಳಿತ ಮಂಡಳಿ ಚುನಾವಣೆ 2025-2030



ಕ್ರಮ ಸಂಖ್ಯೆ 9 ಅಭ್ಯರ್ಥಿಯ ಹೆಸರು ಸಿ.ಚಂದ್ರಶೇಖರ್ ಆಡಿಟರ್

ಚಿಹ್ನೆ ಏಣಿ

2025–2030 ಸಾಲಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಿರುವ ನನಗೆ ಮತನೀಡಿ ತಮ್ಮ ಸೇವೆ ಮಾಡಲು ಆಶೀರ್ವದಿಸಬೇಕಾಗಿ ಪ್ರಾರ್ಥನೆ.

ಹಿಂದುಳಿದ ಪ್ರವರ್ಗ A

ಕ್ರಮ ಸಂಖ್ಯೆ 9

ನಿಮ್ಮ ಸೇವಾಕಾಂಕ್ಷಿ
ಸಿ.ಚಂದ್ರಶೇಖರ್ ಆಡಿಟರ್

ಲೆಕ್ಕಪರಿಶೋಧಕರು ಮತ್ತು ತೆರಿಗೆ ಸಲಹೆಗಾರರು
ಮಾಜಿ ನಿರ್ದೇಶಕರು ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿ.
ಗಾಂಧಿ ಚೌಕ, ಮೈಸೂರು-570001

ದಿನಾಂಕ: 19-01-2025ನೇ ಭಾನುವಾರ ಬೆಳಗ್ಗೆ 9-00 ರಿಂದ ಸಂಜೆ 4-00ರವರೆಗೆ

ವಿಶೇಷ ಸೂಚನೆ: ಒಬ್ಬರು 12 ಮತಗಳನ್ನು ಮಾತ್ರ ಚಲಾಯಿಸಲು ಅವಕಾಶವಿರುತ್ತದೆ.

ದಿ ಮೈಸೂರು ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.

ಜಗನ್‌ಮೋಹನ್ ಪ್ಯಾಲೇಸ್ ರಸ್ತೆ, ಮೈಸೂರು

2025-2030ನೇ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆ

ಸಾಮಾನ್ಯ ವರ್ಗ

02 ಶ್ರೀ ಆರ್.ಆನಂದ್ ಹಾಲಿ ಅಧ್ಯಕ್ಷರು M/S ಜಿ. ರಾಜಣ್ಣ & ಸನ್ಸ್

03 ಶ್ರೀ ಎನ್.ಕಣ್ಣನ್ ಹಾಲಿ ನಿರ್ದೇಶಕರು S/O ಕೆ. ನಟರಾಜನ್

ಓ.ಬಿ.ಸಿ-ಎ

04 ಶ್ರೀ ಆರ್.ಪಿ.ಕೃಷ್ಣಮೂರ್ತಿ ಹಾಲಿ ನಿರ್ದೇಶಕರು, ಮಾಜಿ ಉಪಾಧ್ಯಕ್ಷರು M/S ಪ್ಯಾಲೇಸ್ ಟಯೋಟ ಹೊಂಡಾ

ಓ.ಬಿ.ಸಿ-ಬಿ

05 ಶ್ರೀ ಬಿ.ಕೋದಂಡರಾಮು ಹಾಲಿ ನಿರ್ದೇಶಕರು, ಮಾಜಿ ಅಧ್ಯಕ್ಷರು M/S ಎಸ್. ಬೋರಯ್ಯ & ಎಲ್ ರಾಮಯ್ಯ

ಮಹಿಳಾ ಮೀಸಲು

06 ಶ್ರೀಮತಿ ಸಿ. ಎಸ್.ಗಂಗಾಂಬಿಕೆ ಹಾಲಿ ನಿರ್ದೇಶಕರು C/O ಎಂ. ಜಿ. ಪುಟ್ಟಸ್ವಾಮಯ್ಯ

ಸಾಮಾನ್ಯ ವರ್ಗ

09 ಶ್ರೀ ಬಿ.ಆರ್ ನಂದೀಶ್ ಹಾಲಿ ನಿರ್ದೇಶಕರು, ಮಾಜಿ ಅಧ್ಯಕ್ಷರು M/S ಕೆ. ನಂದಿ ಬಸಪ್ಪ & ಸನ್ಸ್

10 ಶ್ರೀ ಎ.ಪ್ರಭುಪ್ರಸಾದ್ ಹಾಲಿ ನಿರ್ದೇಶಕರು, ಮಾಜಿ ಅಧ್ಯಕ್ಷರು S/O ಎ. ಓಂಕಾರಪ್ಪ

11 ಶ್ರೀ ಕೆ.ಪ್ರೇಮ್‌ಕುಮಾರ್ ಹಾಲಿ ಉಪಾಧ್ಯಕ್ಷರು S/O ಎಸ್. ಕಾಳಯ್ಯ

12 ಶ್ರೀ ಎಂ.ಎನ್.ಮಹೇಶ್ ಹಾಲಿ ನಿರ್ದೇಶಕರು M/S ಬೆನಕ ಎಂಟರ್‌ಪ್ರೈಸಸ್

ಪರಿಶಿಷ್ಟ ಜಾತಿ

15 ಶ್ರೀ ಎನ್.ರಾಘವ ಹಾಲಿ ನಿರ್ದೇಶಕರು C/O ಎಲ್. ನಾಗರಾಜು

ಮಹಿಳಾ ಮೀಸಲು

17 ಶ್ರೀಮತಿ ಎನ್.ಸುಧಾ ಹಾಲಿ ನಿರ್ದೇಶಕರು D/O ಎನ್ ನಾಗರಾಜ್

ಸಾಮಾನ್ಯ ವರ್ಗ

21 ಶ್ರೀ ಸಿ.ವಿ.ಸೋಮಶೇಖರ್ ಹಾಲಿ ನಿರ್ದೇಶಕರು, ಮಾಜಿ ಅಧ್ಯಕ್ಷರು S/O ರಾಗಿ ಮಂಡಿ ವಸಂತು

ನಮ್ಮ ಬ್ಯಾಂಕಿನ ಗೌರವಾನ್ವಿತ ಸದಸ್ಯರು ಹಾಗೂ ಸಹಕಾರಿ ಬಂಧುಗಳೇ

ಚುನಾವಣೆಯ ದಿನಾಂಕ : 19-01-2025 ರ ಭಾನುವಾರದಂದು
ಸಮಯ: ಬೆಳಿಗ್ಗೆ 9.00 ರಿಂದ ಸಂಜೆ 4.00 ಗಂಟೆಯವರೆಗೆ

ಚುನಾವಣೆ ನಡೆಯುವ ಸ್ಥಳ : ಧರ್ಮಪಾರಾಯಣಿ ಶ್ರೀಮತಿ ಅಲಮ್ಮನವರ ಛತ್ರ
ವಿನೋಬ ರಸ್ತೆ ದೇವರಾಜ ಮೊಹಲ್ಲಾ, ಮೈಸೂರು

ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ಅಭ್ಯರ್ಥಿಗಳಾದ ನಾವುಗಳು ಹಿರಿಯರು ಹಾಗೂ ಸದಸ್ಯರುಗಳ ಆಶೀರ್ವಾದದೊಂದಿಗೆ ಸ್ಪರ್ಧಿಸುತ್ತಿದ್ದೇವೆ

ಬ್ಯಾಂಕಿನ ಅಭಿವೃದ್ಧಿಗೆ ತಮ್ಮೆಲ್ಲರ ಅಮೂಲ್ಯವಾದ 12 ಮತಗಳನ್ನು ನಮ್ಮ ತಂಡಕ್ಕೆ ಮತನೀಡಿ ಜಯಶೀಲರನ್ನಾಗಿ ಮಾಡಿ, ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ನಾವುಗಳು ತಮ್ಮೆಲ್ಲರ ಸಹಕಾರ ದಿಂದ ಸೇವೆ ಸಲ್ಲಿಸಿಕೊಂಡು ಬರುತ್ತಿದ್ದೇವೆ. ಮತ್ತಷ್ಟು ಅಭಿವೃದ್ಧಿ ಪಡಿಸಲು ಈ ತಂಡಕ್ಕೆ ಮತ್ತೊಮ್ಮೆ ಅವಕಾಶ ನೀಡಬೇಕಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಪ್ರಕಟಣೆ: ಶ್ರೀ ಆರ್.ಆನಂದ್ ಹಾಲಿ ಅಧ್ಯಕ್ಷರು

ವಿಶೇಷ ಸೂಚನೆ : ಮಾನ್ಯ ಸದಸ್ಯರು ಮತದಾನಕ್ಕೆ ಬರುವಾಗ ತಪ್ಪದೇ ಗುರುತಿನ ಚೀಟಿ (I D CARD) ತರಬೇಕಾಗಿ ವಿನಂತಿ

ದಿ.ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿ.

ಗಾಂಧಿಚೌಕ, ಮೈಸೂರು-570001



ದಿನಾಂಕ : 19-01-2025ನೇ ಭಾನುವಾರದಂದು ನಡೆಯುವ

2025-2030 ಸಾಲಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ನನ್ನ ಆತ್ಮೀಯರಾದ ಶ್ರೀಮತಿ ಹೆಚ್.ವಸಂತಮುನೀಶ್‌ರವರು ಮಹಿಳಾ ಮೀಸಲು ಸ್ಥಾನದ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದು, ಇವರಿಗೆ ಮತನೀಡಿ ತಮ್ಮ ಸೇವೆ ಮಾಡಲು ಆಶೀರ್ವದಿಸುವಂತೆ ಮನವಿ

ಕ್ರಮ	ಹೆಸರು	ಚಿಹ್ನೆ	ಮುದ್ರೆ
30	ಹೆಚ್.ವಸಂತ ಮುನೀಶ್ ಮೊ : 9980029481	ಗುಲಾಬಿ	

ಸಮಯ : ಬೆಳಗ್ಗೆ 9.00 ರಿಂದ ಸಂಜೆ 4.00
ಸ್ಥಳ : ವಸ್ತು ಪ್ರದರ್ಶನ ಪ್ರಾಧಿಕಾರ, ಮೈಸೂರು
ಕಡ್ಡಾಯವಾಗಿ ಗುರುತಿನ ಚೀಟಿ ತರಬೇಕಾಗಿ ವಿನಂತಿ

ಸಿ.ಜಿ. ಗಂಗಾಧರಗೌಡ ಅಧ್ಯಕ್ಷರು
ಕಾಮಗಾರಿ ಸಮಿತಿ, ರಾಜ್ಯ ಒಕ್ಕಲಿಗರ ಸಂಘ,

